ಲಂಕೇಶ್

ಜೂನ್ 23, 2010 ರೂ. 12/-

ಭೋಪಾಲ್ ತೀರ್ಪು SHAME!

GIM
ಶುವೈದ್ಯ
ಾಲೇಜ್
ಗರಣ

ನೆರೆ ಪರಿಹಾರ ನಿಧಿ



ಕಳ್ಳರ ಸಂತೆ

ಲಮಂಗಲ ಕ್ರಿಮಿನಲ್ ಹಟ್ಟಿಮಂಜನ ಅಟ್ಟಹಾಸ





ರತ್ನಜನ ಕಾಮಿಸಂ!

ತ್ರದುರ್ಗ ಮಧು ಕೊಲೆ: ಮಗ ಅರೆಸ್ಟ್ ಅಪ್ಪ ಎಸ್ಕೇಪ್

ಭೋಪಾಲ್ ತೀರ್ಪು: SHAME!!!

ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಹಂತಕರ ವಿಚಾರಣೆಯನ್ನು ಕೆಲವೇ ವರ್ಷಗಳಲ್ಲಿ ಮುಗಿಸಿ ನೇಣು ಶಿಕ್ಷೆ ವಿಧಿಸುವ ನಮ್ಮ ನ್ಯಾಯಾಲಯ, ಅದರ ನೂರುಪಟ್ಟು ದುರಂತಕ್ಕೆ ಕಾರಣರಾದ ಹಂತಕರ ವಿಚಾರಣೆಯನ್ನು 26 ವರ್ಷಗಳ ಕಾಲ ನಡೆಸಿ ಕೇವಲ 2 ವರ್ಷ ಶಿಕ್ಷೆ ವಿಧಿಸಿ, ಅದು ಜಾರಿಗೆ ಬರುವ ಮುನ್ನವೇ 25,000 ರೂಪಾಯಿಯ ಜಾಮೀನಿನ ಮೇಲೆ ಅಪರಾಧಿಗಳನ್ನು ಬಿಡುಗಡೆ ಮಾಡುತ್ತದೆ! ಈ ದೇಶದಲ್ಲಿ ಎಲ್ಲರಿಗೂ ಒಂದೇ ಕಾನೂನು ಎಂದು ಹೇಳುವವರು ಯಾರು?



ಭಾರತೀಯರ ಬದುಕು ಮಾತ್ರ ಅಲ್ಲ ಸಾವೂ ಸಹ ಅತಿ ಅಗ್ಗವೆಂದು ಭೋಪಾಲ್ ದುರಂತದ ಬಗ್ಗೆ ಕಳೆದ ವಾರ ಪ್ರಕಟವಾದ ತೀರ್ಪು ಸ್ಪಷ್ಟಪಡಿಸಿದೆ. 1983ರ ಡಿಸೆಂಬರ್‌ನಲ್ಲಿ ಭೋಪಾಲಿನ ಯೂನಿಯನ್ ಕಾರ್ಬೈಡ್ ಕಾರ್ಖಾನೆಯ ಮಾಲೀಕರು ಮುನ್ನೆಚ್ಚರಿಕೆ ತಗೆದುಕೊಳ್ಳದಿದ್ದರೆ ದುರಂತ ಸಂಭವಿಸುತ್ತದೆ ಎಂದು ಗೊತ್ತಿದ್ದರೂ ಉದ್ದೇಶಪೂರ್ವಕವಾಗಿ ಯಾವುದೇ ಕ್ರಮ ತೆಗೆದುಕೊಳ್ಳದಿದ್ದರಿಂದ ಮೀಥೈಲ್ ಐಸೋಸಿಯನೈಟ್ ಎಂಬ ವಿಷಾನಿಲ ಸೋರಿಕೆಯಾಗಿ ಕ್ಷಣಾರ್ಧದಲ್ಲಿ 3,000 ಜನ ಸತ್ತರು. ಅಂದಿನಿಂದ ಇಂದಿನವರೆಗೆ ಅಂದರೆ ಕಳೆದ 26 ವರ್ಷಗಳಲ್ಲಿ 25,000 ಜನ ಸತ್ತಿದ್ದಾರೆ. 5.5 ಲಕ್ಷ ಜನ ಹಲವು ಕಾಯಿಲೆಗಳಿಂದ ನರಳುತ್ತಾ ನರಕದ ಬದುಕು ಬದುಕುತ್ತಿದ್ದಾರೆ. ಆದರೆ 185 ಜನರ ಸಾವಿಗೆ ಕಾರಣನಾದ ಕಸಬ್‌ನ ವಿಚಾರಣೆಯನ್ನು ಒಂದೇ ವರ್ಷದಲ್ಲಿ ಮುಗಿಸಿ ಮರಣದಂಡನೆ ವಿಧಿಸುವ ನಮ್ಮ ನ್ಯಾಯಾಲಯ, ಇಂದಿರಾ ಗಾಂಧಿ ಮತ್ತು ರಾಜೀವ್ ಗಾಂಧಿ ಹಂತಕರ ವಿಚಾರಣೆಯನ್ನು ಕೆಲವೇ ವರ್ಷಗಳಲ್ಲಿ ಮುಗಿಸಿ ನೇಣು ಶಿಕ್ಷೆ ವಿಧಿಸುವ ನಮ್ಮ ನ್ಯಾಯಾಲಯ, ಅದರ ನೂರುಪಟ್ಟು ದುರಂತಕ್ಕೆ ಕಾರಣರಾದ ಹಂತಕರ ವಿಚಾರಣೆಯನ್ನು 26 ವರ್ಷಗಳ ಕಾಲ ನಡೆಸಿ ಕೇವಲ 2 ವರ್ಷ ಶಿಕ್ಷೆ ವಿಧಿಸಿ, ಅದು ಜಾರಿಗೆ ಬರುವ ಮುನ್ನವೇ 25,000 ರೂಪಾಯಿಯ ಜಾಮೀನಿನ ಮೇಲೆ ಅಪರಾಧಿಗಳನ್ನು ಬಿಡುಗಡೆ ಮಾಡುತ್ತದೆ! ಈ ದೇಶದಲ್ಲಿ ಎಲ್ಲರಿಗೂ ಒಂದೇ ಕಾನೂನು ಎಂದು ಹೇಳುವವರು ಯಾರು?

ಭೋಪಾಲ್ ಅನಿಲ ದುರಂತ ಜಗತ್ತಿನಲ್ಲೇ ಅತಿ ಕರಾಳವಾದ ಔದ್ಯಮಿಕ ದುರಂತ. ಲಕ್ಷಾಂತರ ಭಾರತೀಯರ ಈ ದಾರುಣ ಸಾವು ಮತ್ತು ಬದುಕಿಗೆ ಕಾರಣವಾದದ್ದು ಯೂನಿಯನ್ ಕಾರ್ಬೈಡ್ ಎಂಬ ಅಮೆರಿಕನ್ ಕಂಪನಿ. ಅಮೆರಿಕದ ವರ್ಜೀನಿಯಾದಲ್ಲೂ ಈ ಕಂಪನಿ ಇದೇ ಬಗೆಯ ಕಾರ್ಖಾನೆಯನ್ನು ಹೊಂದಿದೆ. ಆದರೆ ಈ ಕಂಪನಿ ಅಲ್ಲಿ ಮಾತ್ರ ಎಲ್ಲಾ ಬಗೆಯ ಮುನ್ನೆಚ್ಚರಿಕೆಯನ್ನು ತೆಗೆದುಕೊಂಡಿತ್ತು. ಆದರೆ ಭಾರತದಲ್ಲಿ ಮಾತ್ರ ಕಾರ್ಮಿಕರು ಮತ್ತು ಎಂಜಿನಿಯರ್‌ಗಳು ಅನಿಲ ಸೋರಿಕೆಯ ದುರಂತದ ಸಂಭಾವ್ಯತೆಯನ್ನು ಸಾಕಷ್ಟು ಬಾರಿ ಗಮನಕ್ಕೆ ತಂದರೂ ಮುನ್ನೆಚ್ಚರಿಕೆಯನ್ನು ತೆಗೆದುಕೊಳ್ಳಲು ನಿರಾಕರಿಸಿತ್ತು. ಏಕೆಂದರೆ ಅದಕ್ಕೆ ಕಂಪನಿಯಿಂದ ಸಾಕಷ್ಟು ಹಣ ವೆಚ್ಚವಾಗಿ ಲಾಭ ಕಡಿಮೆಯಾಗುತ್ತಿತ್ತು. ಹೀಗಾಗಿ ಭೋಪಾಲ್ ದುರಂತಕ್ಕೆ ಕಾರಣವಾದದ್ದು ಕೇವಲ ಅನುದ್ದೇಶಪೂರ್ವಕ ನಿರ್ಲಕ್ಷ್ಯ (Criminal negiligence) ವಲ್ಲ, ಅನಿಲ ಸೋರಿಕೆಯಂತ ದುರಂತ ಯಾವಾಗ ಬೇಕಾದರೂ ಸಂಭವಿಸಬಹುದೆಂಬ ಪೂರ್ವತಿಳಿವಳಿಕೆ ಇದ್ದರೂ ಅದನ್ನು ತಡೆಯದೆ ಸಾವಿರಾರು ಜನರ ಸಾವಿಗೆ ಕಂಪನಿಯೇ ನೇರವಾಗಿ ಕಾರಣವಾದ್ದರಿಂದ ಅದು 10 ವರ್ಷಗಳ ಶಿಕ್ಷೆಯನ್ನು ವಿಧಿಸುವ "ಸಾವಿಗೆ ಕಾರಣ"ವೆಂದು ದಂಡನೆ ವಿಧಿಸಬಹುದಾದ (culpable homicide) ಅಪರಾಧ.



ಚಾರ್ವಾಕ

ಶಿವಸುಂದರ್

ಆದರೂ ನಮ್ಮ ನ್ಯಾಯಾಂಗ ಮತ್ತು ಸರ್ಕಾರಗಳು ಈ ಪ್ರಕರಣದಲ್ಲಿ ನಡೆದುಕೊಂಡ ರೀತಿ ಈ ದೇಶ ನಿಜಕ್ಕೂ ಒಂದು ಸ್ವತಂತ್ರ, ಸಾರ್ವಭೌಮೀ ಗಣರಾಜ್ಯವೇ ಎಂದು ಅನುಮಾನ ತರಿಸುವಂತಿದೆ. ಉದಾಹರಣೆಗೆ ಇಂಥಾ ಘನಘೋರ ವಿಪತ್ತಿಗೆ ಕಾರಣವಾದ ಯೂನಿಯನ್ ಕಾರ್ಬೈಡ್ ಕಂಪನಿಯ ಮೇಲೆ ಸಾವಿಗೆ ಕಾರಣವಾದ ಅಪರಾಧ ಹೊರಿಸಬಾರದೆಂದೂ, ಕೇವಲ ನಿರ್ಲಕ್ಷ್ಯದ ಅಪರಾಧ ಮಾತ್ರ ಹೊರಿಸಬೇಕೆಂದೂ ಆದೇಶಿಸಿದ್ದು ಸುಪ್ರೀಂ ಕೋರ್ಟ್. 15,000 ಕೋಟಿ ಪರಿಹಾರ ಕೇಳಿದ್ದರೂ ಅದನ್ನು ಕೇವಲ 1500 ಕೋಟಿಗೆ ಇಳಿಸಿ ಅಂತಿಮ ತೀರ್ಮಾನ ನೀಡಿದ್ದೂ ಸಹ ಸುಪ್ರಿಂ ಕೋರ್ಟೇ. ಇದಕ್ಕೆ ಪ್ರತಿಫಲವಾಗಿ ಆಗಿನ ಸುಪ್ರೀಮ್ ಕೋರ್ಟಿನ ನ್ಯಾಯಮೂರ್ತಿ ಆರ್.ಎಸ್. ಪಾಠಕ್‌ರನ್ನು ಅಮೆರಿಕ ಹೇಗ್‌ನ ಅಂತಾರಾಷ್ಟ್ರೀಯ ನ್ಯಾಯಾಲಯದ ಮುಖ್ಯಸ್ಥರನ್ನಾಗಿಸಿತು. ಇಂಥಾ ಅನಾಹುತಕ್ಕೆ ಪ್ರಧಾನ ಕಾರಣನಾದ ಮಾಲೀಕ ಆಂಡರ್‌ಸನ್‌ನನ್ನು ಘಟನೆ ನಡೆದ ಮೂರೇ ದಿನಗಳಲ್ಲಿ ಅತ್ಯಂತ ಸುರಕ್ಷಿತವಾಗಿ ಅಮೆರಿಕಕ್ಕೆ ಖಾಸಗಿ ಜೆಟ್ ವಿಮಾನದಲ್ಲಿ ಹಾರಿಹೋಗಲು ಅವಕಾಶ ಕೊಟ್ಟದ್ದು ಈ ದೇಶದ ಪ್ರಧಾನಿ. ನಂತರ ಯೂನಿಯನ್ ಕಾರ್ಬೈಡ್ ಕಂಪನಿಯನ್ನು ಡೌ ಎಂಬ ಬೃಹತ್ ರಾಸಾಯನಿಕ 2001ರಲ್ಲಿ ಕೊಂಡುಕೊಂಡಿತು. ಆಗ ಅದು ಯೂನಿಯನ್ ಕಾರ್ಬೈಡ್ ಕಂಪನಿ ಮಾಡಿದ ಯಾವ ಅನಾಹುತಗಳಿಗೂ ತಾನು ಬಾಧ್ಯಸ್ಥನಲ್ಲ, ಕೇವಲ ಅದರ ಆಸ್ತಿಪಾಸ್ತಿಗಳಿಗೆ ಮಾತ್ರ ತಾನು ಒಡೆಯ ಎಂದು ಹೇಳಿದಾಗಲೂ ಅದರ ರಕ್ಷಣೆಗೆ ನಿಂತದ್ದು ಟಾಟಾ ನೇತೃತ್ವದಲ್ಲಿ ಈ ದೇಶದ ಎಲ್ಲಾ ದೊಡ್ಡ ಉದ್ಯಮಪತಿಗಳು. ಈ ದ್ರೋಹದ ಸರಮಾಲೆಯ ಅಂತಿಮ ಘಟ್ಟವೇ ಮೊನ್ನೆ ಬಂದ ತೀರ್ಪು.



"ಕೆಳಹಂತದ ನ್ಯಾಯಾಲಯ ಇದಕ್ಕಿಂತ ಹೆಚ್ಚಿನ ಶಿಕ್ಷೆಯನ್ನು ಕೊಡಲು ಸಾಧ್ಯವಿರಲಿಲ್ಲ ಹಾಗೂ ನಮ್ಮ ಕಾನೂನಿನಲ್ಲಿ ಈ ಬಗೆಯ ಅಪರಾಧಗಳಿಗೆ ಇದಕ್ಕಿಂತ ಹೆಚ್ಚಿನ ಶಿಕ್ಷೆಯನ್ನು ಕೊಡಲು ಅವಕಾಶವೇ ಇಲ್ಲ" ಎಂದೆಲ್ಲಾ ಈ ತೀರ್ಪಿನ ಬಗ್ಗೆ ಕಾನೂನು ಪಂಡಿತರು ವ್ಯಾಖ್ಯಾನ ಮಾಡುತ್ತಿದ್ದಾರೆ. ಇದು ವಾಸ್ತವವಲ್ಲ, ಏಕೆಂದರೆ ಕೆಳಗಿನ ಕೋರ್ಟುಗಳು ಅಪರಾಧ ಪ್ರಮಾಣವನ್ನು ಕುರಿತು ಸರ್ಕಾರಕ್ಕೇ ಆದೇಶ ನೀಡಬಹುದಿತ್ತು, ಸರ್ಕಾರಕ್ಕೆ ಮೇಲ್ಮನವಿ ಸಲ್ಲಿಸಲು ಆದೇಶಿಸಿ ಜಾಮೀನು ನಿರಾಕರಿಸಬಹುದಿತ್ತು, ಆದರೆ ಸುಪ್ರೀಂ ಕೋರ್ಟೇ ಕಂಪನಿ ಪರ ಮೇಲ್ಪಂಕ್ತಿ ಹಾಕಿಕೊಟ್ಟಮೇಲೆ ಕೆಳಹಂತದ ನ್ಯಾಯಾಲಯ ಏನು ಮಾಡಲು ಸಾಧ್ಯ?

ಕಾರ್ಬೈಡ್ ತೀರ್ಪು ಇಂದು ನಾವು ಎದುರಿಸುತ್ತಿರುವ ಅತಿದೊಡ್ಡ ಸವಾಲನ್ನು ಮುಂದೆ ತಂದಿದೆ. ವಾಸ್ತವವಾಗಿ ಭೋಪಾಲ್‌ನಲ್ಲಿ ಏನೇನೂ ಕಾನೂನು ಬಾಹಿರವಾಗಿತ್ತೋ ಅದನ್ನೆಲ್ಲಾ ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನಗಳು, ವಿಶೇಷ ಆರ್ಥಿಕ ವಲಯಗಳು ಕಾನೂನುಬದ್ಧಗೊಳಿಸುತ್ತಿವೆ. ಇದು ಅತ್ಯಂತ ಮುಖ್ಯವಾದ ಸವಾಲು. ಏಕೆಂದರೆ ಭೋಪಾಲ್ ದುರಂತ ಸಂಭವಿಸಿದ್ದು ಈ ದೇಶದಲ್ಲಿ ವಿದೇಶಿ ಬಂಡವಾಳವೇ ಅಭಿವೃದ್ಧಿಯ ಸಾರಥಿ ಎಂಬ ಜಾಗತೀಕರಣದ ಯುಗ ಪ್ರಾರಂಭವಾಗುವುದಕ್ಕೆ ಒಂದು ದಶಕಕ್ಕೆ ಮುಂಚೆ. ಆಗಲೇ ವಿದೇಶಿ ಬಂಡವಾಳವು ಸರ್ಕಾರದ ಅಧೀನಕ್ಕೆ ಒಳಪಡುವುದಿಲ್ಲ ಎಂದು ಘೋಷಿಸುತ್ತಿದ್ದವು. ಉದಾಹರಣೆಗೆ ಯೂನಿಯನ್ ಕಾರ್ಬೈಡ್ ಮಾಲೀಕ ಆಂಡರ್‌ಸನ್ ತಾನು ಭಾರತದ ಕಾನೂನಿಗೆ ಅಧೀನನಲ್ಲ ಎಂದು ಹೇಳಿದ್ದು ಅಂದು ಕಾನೂನುಬಾಹಿರವಾಗಿತ್ತು, ಇಂದು ಜಾಗತಿಕರಣ ಪ್ರಾರಂಭವಾದ ನಂತರ ಈ ದೇಶಕ್ಕೆ ಬರುತ್ತಿರುವ ವಿದೇಶಿ ಕಂಪನಿಗಳು ತಮ್ಮ ಮತ್ತು ಸರ್ಕಾರದ ನಡುವೆ ಬರುವ ತಗಾದೆಗಳಿಗೆ ಈ ದೇಶದ ಕಾನೂನು ಅನ್ವಯವಾಗಬಾರದೆಂದು ಶರತ್ತನ್ನೇ ವಿಧಿಸುತ್ತಾರೆ. ಹಾಗೆಯೇ ಈ ದೇಶದ ಕಾನೂನಿನಲ್ಲೇ ಅದಕ್ಕೆ ಸೂಕ್ತವಾದ ತಿದ್ದುಪಡಿಗಳನ್ನು ಮಾಡಿಕೊಳ್ಳಲಾಗಿದೆ. ಈಗ ಬಹುಪಾಲು ವಿದೇಶಿ ಬಂಡವಾಳಗಳು ಬರುತ್ತಿರುವುದೇ ವಿಶೇಷ ಆರ್ಥಿಕ ವಲಯಗಳಲ್ಲಿ. ಇದರ ಬಗ್ಗೆ 2005ರಲ್ಲಿ ಮಾಡಲಾಗಿರುವ ಕೇಂದ್ರೀಯ ಶಾಸನದ ಪ್ರಕಾರ ಭಾರತದ ಯಾವುದೇ ಪರಿಸರ ಮತ್ತು ಕಾರ್ಮಿಕ ಕಾನೂನು ಇಲ್ಲಿ ಅನ್ವಯವಾಗು ವುದೇ ಇಲ್ಲ, ಅವುಗಳನ್ನು ಈ ದೇಶದ ಶಾಸನದ ಪ್ರಕಾರ "ವಿದೇಶಿ ಪ್ರದೇಶ"ವೆಂದೇ ಪರಿಗಣಿಸಲಾಗುವುದು.

ಎಲ್ಲಕ್ಕಿಂತಲೂ ಹೆಚ್ಚಾಗಿ ಇತ್ತೀಚೆಗೆ ಅಮೆರಿಕದೊಂದಿಗೆ ಮಾಡಿಕೊಂಡ ಒಡಂಬಡಿಕೆ ಅನ್ವಯ ಜಾರಿಯಾಗಿರುವ "ನಾಗರಿಕ ಅಣುಸ್ಥಾವರ ಅವಘಡ ಕಾನೂನು" ಯೂನಿಯನ್ ಕಾರ್ಬೈಡ್ ದುರಂತಕ್ಕಿಂತಲೂ ಅಪಾಯಕಾರಿಯಾಗಿದೆ. ಇದರ ಪ್ರಕಾರ ಭಾರತದಲ್ಲಿ ಮುಂದೆ ವಿದೇಶಿ ಅಣುಶಕ್ತಿ ಕಂಪನಿಗಳು ಯಾವುದೇ ದುರಂತ ಉಂಟುಮಾಡಿದರೂ ಅವರ ಮೇಲೆ ಕ್ರಿಮಿನಲ್ ಮೊಕದ್ದಮೆ ಹೂಡದಂಥ ಮತ್ತು ಪರಿಹಾರ ಮೊತ್ತ 400 ಕೋಟಿಗಿಂತಲೂ ಹೆಚ್ಚಿಗೆ ಆಗ್ರಹಿಸದಂಥ ಶಾಸನವನ್ನು ಸ್ವತಂತ್ರ ಭಾರತ ಸರ್ಕಾರವೇ ಜಾರಿ ಮಾಡಿದೆ.

ಇಂದು ಜಾಗತಿಕ ಬಂಡವಾಳ ಹೂಡಿಕೆದಾರರ ಸಮ್ಮೇಳನದ ಮೂಲಕ 350ಕ್ಕೂ ಹೆಚ್ಚು ಕಂಪನಿಗಳು ಇಂಥದೇ ವಿಶೇಷ ಆರ್ಥಿಕ ವಲಯಗಳಲ್ಲಿ ಯಾವುದೇ ಸಾಮಾಜಿಕ ಹೊಣೆಗಾರಿಕೆಗಳ ಜವಾಬ್ದಾರಿ ಇಲ್ಲದೆ, ಸರ್ಕಾರದ ನಿಯಂತ್ರಣಗಳಿಂದ ಮುಕ್ತವಾಗಿ ಬರಲಿವೆ. ಯೂನಿಯನ್ ಕಾರ್ಬೈಡ್ ಕಂಪನಿಯ ದುರಂತದಿಂದ ಈ ದೇಶ ಏನೂ ಕಲಿತಿಲ್ಲ ಎನ್ನುವುದಕ್ಕೆ ಇದೇ ಸಾಕ್ಷಿ. ಯೂನಿಯನ್ ಕಾರ್ಬೈಡ್ ದುರಂತದಿಂದ ಏನಾದರೂ ಪಾಠ ಕಲಿಯಬೇಕೆಂದರೆ ಅದು ಬಂಡವಾಳಕ್ಕೆ ಸಮಾಜ, ಸರ್ಕಾರ, ಕಾರ್ಮಿಕ ಮತ್ತು ಪರಿಸರ ಹೊಣೆಗಾರಿಕೆಗಳಿಂದ ಮುಕ್ತವಾದ ಪರವಾನಗಿ ಕೊಡಬಾರದೆಂಬುದೇ ಆಗಿದೆ. ಆದರೆ ಸರ್ಕಾರ, ನ್ಯಾಯಾಂಗ ಈ ಜಾಗತೀಕರಣದ ಕಾಲಘಟ್ಟದಲ್ಲಿ ಅದಕ್ಕೆ ತದ್ವಿರುದ್ಧವಾದ ದಿಕ್ಕಿನಲ್ಲಿ ನಡೆದಿವೆ.

ಹೀಗಾಗಿ ಭೋಪಾಲ್ ದುರಂತ ಕೇವಲ ಭೂತಕಾಲದ ಸಂಗತಿಯಲ್ಲ, ನಾವು ಎಚ್ಚರಗೊಳ್ಳದಿದ್ದರೆ ಅದು ಭಾರತದ ಸಾಮೂಹಿಕ ಭವಿಷ್ಯವೂ ಆಗಿಬಿಡುತ್ತದೆ.

ನೋ ಕಾಮೆಂಟ್ಸ್

"ಭಾರತದ ಅಭಿವೃದ್ಧಿ ದರ ಏನೇ ಇರಲಿ, ಅವು ಯಾವುವೂ ರೈತನ ಕೊಳ್ಳುವ ಶಕ್ತಿಯನ್ನು ಹೆಚ್ಚಿಸುವುದಿಲ್ಲ, ಎಲ್ಲಿಯತನಕ ರೈತರ ಕೊಳ್ಳುವ ಶಕ್ತಿ ಹೆಚ್ಚುವುದಿಲ್ಲವೋ ಅಲ್ಲಿಯತನಕ ಭಾರತ ರೈತನ ಬಾಧೆ ತಪ್ಪುವುದಿಲ್ಲ"

- ಡಾ. ಅಭಿಜಿತ್ ಸೇನ್, ಯೋಜನಾ ಆಯೋಗದ ಸದಸ್ಯ

"ಭಾರತ ವರ್ಲ್ಡ್‌ಕಪ್ ಫುಟ್‌ಬಾಲಿನಲ್ಲಿ ಯಾವತ್ತು ಆಡಬಹುದು ಎಂದು ನಾನು ಹೇಳಲಾರೆ. ಆದರೆ ಒಂದನ್ನು ಮಾತ್ರ ಗ್ಯಾರಂಟಿಯಾಗಿ ಹೇಳಬಲ್ಲೆ, ಈ ದೇಶದಲ್ಲಿ ಫುಟ್‌ಬಾಲ್ ಆಟಕ್ಕೆ ಕೊಡುತ್ತಿರುವ ಸೌಕರ್ಯ ಹೀಗೆ ಮುಂದುವರೆದರೆ ಭಾರತ ಎಂದೆಂದಿಗೂ ವರ್ಲ್ಡ್‌ಕಪ್‌ನಲ್ಲಿ ಆಡಲು ಸಾಧ್ಯವಾಗುವುದಿಲ್ಲ ಎಂದು ಖಚಿತವಾಗಿ ಹೇಳಬಲ್ಲೆ"

- ಬಾಬ್ ಹಾಟನ್, ಟೀಮ್ ಇಂಡಿಯಾದ ಫುಟ್‌ಬಾಲ್ ಕೋಚ್

"2014ರ ಫುಟ್‌ಬಾಲ್ ಮ್ಯಾಚ್ ನಡೆಯುವುದು ಬ್ರೆಜಿಲ್‌ನಲ್ಲಿ, ಅದರಲ್ಲಿ 207 ರಾಷ್ಟ್ರೀಯ ತಂಡಗಳು 31 ಸ್ಥಾನಕ್ಕೆ ಪೈಪೋಟಿ ನಡೆಸುತ್ತವೆ. ಆದರೆ ಇದರಲ್ಲಿ ಭಾರತದ ಸ್ಥಾನ 132ನೆಯದು."

- ವರದಿ

"ಅಸ್ಪೃಶ್ಯರು ಅನುಭವಿಸುತ್ತಿರುವ ಅಪಮಾನ, ಯಾತನೆ, ತಾತ್ಸಾರ, ಗೋಳು ಚಿದಾನಂದಮೂರ್ತಿಗಳಿಗೆ ಹೇಗೆ ಅರ್ಥವಾದೀತು? ಇದು ಅವರು ಶಾಸನಗಳನ್ನು ಓದಿ ಪಿಹೆಚ್‌ಡಿ ಪಡೆದಷ್ಟು ಸುಲಭವಾದ ವಿಷಯವಲ್ಲ. ಮತಾಂತರಕ್ಕೆ ಸಂಘಪರಿವಾರದವರು ಅಂಟಿಸಿರುವ ಬಲವಂತ ಮತ್ತು ಆಮಿಷ ಎಂಬ ಕಳಂಕಗಳ ಬಗ್ಗೆ ತೀರ್ಪು ನೀಡಲು ನ್ಯಾಯಾಲಯಗಳಿವೆ. ಅದರ ಬಗ್ಗೆ ಚಿಮೂ ತಲೆಕೆಡಿಸಿಕೊಳ್ಳದಿರಲಿ."

- ಮ.ನ. ಜವರಯ್ಯ

"ಪ.ಬಂಗಾಳದ ಜನತೆಗೆ ಬದಲಾವಣೆ ಬೇಕು. ನಿಜ. ಆದರೆ ಅದಕ್ಕೆ ಮಮತಾ ಬ್ಯಾನರ್ಜಿಯ ತೃಣಮೂಲ ಕಾಂಗ್ರೆಸ್ ಉತ್ತರವೇ ಎಂಬುದು ಖಂಡಿತ ನನಗೆ ಗೊತ್ತಿಲ್ಲ, ನಾನು ಅದರ ಬಗ್ಗೆ ನನ್ನ ಸ್ವಾತಂತ್ರ್ಯವನ್ನು ಉಳಿಸಿಕೊಳ್ಳಬಯಸುವೆ."

- ಅಪರ್ಣಾ ಸೇನ್

"ಭೂಪಾಲ್ ದುರಂತವನ್ನು ಒಂದು ಟ್ರಾಫಿಕ್ ಆಕ್ಸಿಡೆಂಟ್ ಎಂಬಂತೆ ಪರಿಗಣಿಸಲಾಗುತ್ತಿದೆ. ಇದೊಂದು ನ್ಯಾಯಾಂಗ ದುರಂತ. ಸರ್ಕಾರಗಳು ಮಾಡಿರುವ ದ್ರೋಹ."

- ಸಾತಿನಾಥ್ ಸಾರಂಗಿ, ಭೂಪಾಲಿನ ಕಾರ್ಯಕರ್ತ

"ಜೆಡಿಎಸ್ ಜೊತೆಗೆ ಯಾವತ್ತಿಗೂ ಮೈತ್ರಿ ಮಾಡಿಕೊಳ್ಳುವುದು ಬೇಡ ಎಂಬ ಮಾತನ್ನು ಸಂಸದ ವಿಶ್ವನಾಥ್ ಧೈರ್ಯವಿದ್ದರೆ ಎಐಸಿಸಿ ಅಧಿನಾಯಕಿ ಸೋನಿಯಾ ಗಾಂಧಿ ಮುಂದೆ ಹೇಳಲಿ."

- ವೈ.ಎಸ್.ವಿ ದತ್ತ

"ರಾಜ್ಯ ಸರ್ಕಾರ ಶ್ರೀಮಂತರನ್ನು ಮತ್ತಷ್ಟು ಶ್ರೀಮಂತರನ್ನಾಗಿಸಲು ಶ್ರಮಿಸುತ್ತಿದೆ. ಸಿರಿವಂತ ಮಠಗಳಿಗೆ ಹಣಕೊಡಲು ಅವರಿಗೆ ಹಣದ ಕೊರತೆ ಇದೆಯೇ?"

- ಈಶ್ವರಾನಂದ ಸ್ವಾಮೀಜಿ, ಹೊಸದುರ್ಗ

ನಂಬಿದ್ರೆನಂಬಿ ಬಿಟ್ರೆಬಿಡಿ

"ರಾಜ್ಯದ ಎಲ್ಲಾ ಜಿಲ್ಲೆಗಳಲ್ಲೂ ರಾಷ್ಟ್ರೀಯ ಕಾನೂನು ಶಾಲೆಗಳನ್ನು (ನ್ಯಾಷನಲ್ ಲಾ ಸ್ಕೂಲ್) ತೆರೆಯಲಾಗುವುದು."

- ವೀರಪ್ಪ ಮೊಯಿಲಿ

"ರಾಜ್ಯದಲ್ಲಿ 2 ಕೋಟಿ. ಎಕರೆ ಕೃಷಿ ಭೂಮಿ ಇದೆ. ಕೈಗಾರಿಕೆಗಳಿಗೆ ನಾವು ಕೇವಲ ಒಂದು ಲಕ್ಷ ಎಕರೆಗಿಂತ ಹೆಚ್ಚಿನ ಜಮೀನನ್ನು ಕೊಡುತ್ತಿಲ್ಲ ಮತ್ತು ಅವೆಲ್ಲಾ ಒಣಭೂಮಿ."

- ಯಡಿಯೂರಪ್ಪ

"ನೆರೆಸಂತ್ರಸ್ತರ ಹಣದ ಅನ್ಯ ಬಳಕೆ ಆಗಿದೆ ಅಷ್ಟೆ. ಆದರೆ ಅದು ದುರ್ಬಳಕೆ ಅಲ್ಲ."

- ದೇಶಪಾಂಡೆ

"ನಾವು ನಿಮಗೆ ಚಂದ್ರನನ್ನು ತಂದುಕೊಡುತ್ತೇವೆ ಎಂದು ಭರವಸೆ ನೀಡುವುದಿಲ್ಲ. ಆದರೆ ನೀವು ಚಂದ್ರನಷ್ಟೇ ಎತ್ತರಕ್ಕೆ ಬೆಳೆಯಲು ಬೇಕಾದ ವೇದಿಕೆಯನ್ನು ಈ ನೆಲದಲ್ಲೇ ಸೃಷ್ಟಿಸಿಕೊಡುತ್ತೇವೆ."

- ನರೇಂದ್ರ ಮೋದಿ

ನಿಮ್ಮ ಕಿವಿಗೆ ಬಿದ್ದದ್ದು ಅಷ್ಟೆ!

"ಗಾಂಧೀಜಿ ತನ್ನನ್ನು ಸನಾತನ ಹಿಂದೂ ಎಂದು ಹೇಳಿಕೊಂಡಿದ್ದಾರೆ. ಹೀಗಾಗಿ ಹಿಂದೂ ಧರ್ಮದವರು ತಮ್ಮ ಅಸ್ತಿತ್ವ ಹೇಳಿಕೊಂಡು ತಲೆ ಎತ್ತಿ ಓಡಾಡಬಹುದು."

- ಚಿದಾನಂದಮೂರ್ತಿ

ವಿಷಪೂರಿತ ತೀರ್ಪು


The Bhopal Gas Tragedy
1984 - ?

1984 ರ ...ಬರ್ 2-3 ...ಾತ್ರಿ ...ಾನಿಯನ್ ...ರ್ಬೈಡ್ ಎಂಬ ...ಪನಿ ಭೋಪಾಲಿನ ...00 ಕ್ಕೂ ಹೆಚ್ಚು ...ದಿಗೆ ಮಿಥೈಲ್ ...ಾಸಯನೇಟ್ ಎಂಬ ಅನಿಲವನ್ನು ಕುಡಿಸಿ ...ದು ಹಾಕಿತ್ತು. ಆದಾಗಿ ... ವರ್ಷಗಳ ನಂತರ ನಮ್ಮ ...ರಗಳ ಇಬ್ಬಂದಿತನ, ...ಕೀಯ ಪಕ್ಷಗಳ ...ಜವಾಬ್ದಾರಿತನ ಮತ್ತು ...ಂಕೋರ್ಟಿನ ...ಕ್ಷತೆಯಿಂದಾಗಿ ಮೊನ್ನೆ ...ಪಾಲಿನ ನ್ಯಾಯಾಲಯವೊಂದು ... ಮಾರಣಹೋಮದಲ್ಲಿ ...ಕುಳಿದರೂ ನರಕ ಸದೃಶ ಜೀವನವನ್ನು ...ಸುತ್ತಿರುವವರಿಗೆ ನ್ಯಾಯ ನೀಡಿ, ...ಾಧಿಗಳಿಗೆ ಶಿಕ್ಷೆಯನ್ನು ನೀಡುವ ಬದಲಾಗಿ ...ಗಡುಕರಿಗೆ ಎರಡು ವರ್ಷಗಳ ಸಜೆಯನ್ನು ...ತ್ರ ಘೋಷಿಸುವ ಮೂಲಕ ಸಂತ್ರಸ್ತರು ನ್ಯಾಯ ...ಸ್ಥೆಯಲ್ಲಿ ಇಟ್ಟಿದ್ದ ಭರವಸೆಯನ್ನು ಮತ್ತೊಮ್ಮೆ ...ಕ್ಷಿಣ್ಯವಾಗಿ ಕೊಂದು ಹಾಕಿದೆ.

...ಭೋಪಾಲ್ ಅನಿಲ ದುರಂತಕ್ಕೆ ಸಂಬಂಧಿಸಿದಂತೆ ...ಗ ಬಿದ್ದಿರುವ ತೀರ್ಪು ಕುರಿತಂತೆ ಶಿವಸುಂದರ್ ...ು ತಮ್ಮ 'ಚಾರ್ವಾಕ' ಅಂಕಣದಲ್ಲಿ ಬರೆದಿದ್ದಾರೆ. ...ೂ ನಾನು ಇಲ್ಲಿ ಇನ್ನೂ ಒಂದಿಷ್ಟನ್ನು ಹೇಳಬೇಕಿದೆ ...ುತ್ತಿದೆ.

...ಮ್ಮ ದೇಶದಲ್ಲಿ ಸಾವಿನಲ್ಲೂ ಹೇಗೆ ವರ್ಗಭೇದ ...ಲಾಗುತ್ತದೆಂಬುದಕ್ಕೆ ಒಂದು ಉದಾಹರಣೆ ನೋಡಿ. ...ಚೆಗೆ ಮಂಗಳೂರಿನಲ್ಲಿ ಸಂಭವಿಸಿದ ವಿಮಾನ ...ತದಲ್ಲಿ 156 ಜನ ಸಾವಿಗೀಡಾದರು. ಅವರೆಲ್ಲರೂ ...ಮ ವರ್ಗ ಅಥವಾ ಮೇಲುವರ್ಗದವರಾಗಿದ್ದರು. ...ದುರಂತದಲ್ಲಿ ಮಡಿದ 150 ಹತಭಾಗ್ಯರಿಗೆ ಸರ್ಕಾರ ... ಇಪ್ಪತ್ತೇ ದಿನಗಳಲ್ಲಿ ಸುಮಾರು ಒಂಭತ್ತು ಕೋಟಿ ...ಯಿಗಳನ್ನು ಪರಿಹಾರದ ರೂಪದಲ್ಲಿ ನೀಡಿತು.

...ಮಂಗಳೂರಿನ ವಿಮಾನ ದುರಂತದಲ್ಲಿ ಮಡಿದವರಷ್ಟೇ ...ಾಗ್ಯರು ಭೋಪಾಲ್ ಅನಿಲ ದುರಂತದಲ್ಲಿ ಮಡಿದ ...ಾರು ಜನ. ಆದರೆ ಆ ದುರಂತದಲ್ಲಿ ಸತ್ತ ಬಹಳಷ್ಟು ...ಬಡವರು, ಕೂಲಿ ಕಾರ್ಮಿಕರು, ಗುಡಿಸಲುಗಳಲ್ಲಿ ...ುತ್ತಿದ್ದ ಕೆಲ ವರ್ಗದವರು. ಹಾಗೆಯೇ ಆ ದುರಂತದಲ್ಲಿ ...ತರಾದ ಐದೂವರೆ ಲಕ್ಷ ಜನರೂ ಕಡುಬಡವರು. ...ನ ಮಾತ್ರ ಪರಿಹಾರಕ್ಕಾಗಿ 26 ವರ್ಷಗಳ ಕಾಲ ...ಬೇಕಾಯಿತು. ಆಗಲೂ ಅವರಿಗೆ ದೊರಕಿದ ...ಷ್ಟು? ತಲಾ 15,000 ರೂಪಾಯಿಗಳು ಮಾತ್ರ. ...ೆ ಆ ದುರಂತ ಸಂಭವಿಸಿ ಅವರ ಬದುಕೇ ...ನೂರಾಗಿದ್ದರೂ ಅಂದಿನಿಂದ ಇಂದಿನತನಕ ಅವರು ...ವಿಸಿದ ಯಾತನೆಗೆ ನೀಡಿದ ಪರಿಹಾರ: ಪ್ರತಿದಿನಕ್ಕೆ ಒಂದೂವರೆ ರೂಪಾಯಿಗಳು!

...ಾರತದಲ್ಲೇ ಬಡ ಭಾರತೀಯರ ಜೀವಕ್ಕೆ ಬೆಲೆ ...ದ್ದರೆ, ಇನ್ನು ಅಮೆರಿಕಾದಂತಹ ದೇಶಗಳಿಗೆ ಎಲ್ಲಾ ...ೀಯರ ಜೀವಕ್ಕೆ ಕಿಂಚಿತ್ತೂ ಬೆಲೆ ಇಲ್ಲ. 1984 ರಲ್ಲಿ ...ಸಿದ ಭೋಪಾಲ್ ಅನಿಲ ದುರಂತದಿಂದಾಗಿ 8000 ...ತ್ತು 5,25,000 ಜನ ಬಾಧಿತರಾಗಿದ್ದಕ್ಕೆ ಕೊನೆಗೂ ...ಯನ್ ಕಾರ್ಬೈಡ್ ಕಂಪನಿ ಪರಿಹಾರವಾಗಿ ಕೊಟ್ಟಿದ್ದು ...ಮಿಲಿಯನ್ ಡಾಲರ್- ಅಂದರೆ 1,500 ಕೋಟಿ ...ಯಿಗಳನ್ನು ಮಾತ್ರ (ಇದೇ ದಿನವೊಂದಕ್ಕೆ 1.50 ...ಯಿ ಲೆಕ್ಕವಾಗಿದ್ದು). ಈ ಪರಿಹಾರ ಹಣವನ್ನು ... ರಲ್ಲಿ ಸಮುದ್ರದಲ್ಲಿ ಸಂಭವಿಸಿದ ಎಕ್ಸಾನ್ ಮೊಬಿಲ್ ...ಸೋರಿಕೆ ಪ್ರಕರಣದೊಂದಿಗೆ ಹೋಲಿಸಿ ನೋಡಿ. ...ಾಲ್ ಅನಿಲ ದುರಂತವು ಪ್ರಪಂಚದಲ್ಲೇ ಅತಿದೊಡ್ಡ ...ುಕ ದುರಂತವಾಗಿದ್ದರೆ, ಎಕ್ಸಾನ್ ಮೊಬಿಲ್ ...ತವನ್ನು ಪರಿಸರದ ಮೇಲೆ ಆದ ಅತಿದೊಡ್ಡ ...ಗಳಲ್ಲಿ ಒಂದು ಎಂದೇ ಪರಿಗಣಿಸಲಾಗಿದೆ. ಆಗ ...ಕದ ನ್ಯಾಯಾಲಯವು ಎಕ್ಸಾನ್ ಕಂಪನಿ ವಿರುದ್ಧ ... 795 ಬಿಲಿಯನ್ ಡಾಲರ್‌ಗಳಷ್ಟು ದಂಡವನ್ನು ...ತ್ತು! ಅಂದರೆ ಭಾರತದ ಸಂತ್ರಸ್ತರಿಗೆ ಯೂನಿಯನ್ ಕಾರ್ಬೈಡ್ ನೀಡಿದ್ದಕ್ಕಿಂತ 345 ಮಿಲಿಯನ್ ಡಾಲರ್‌ಗಳಷ್ಟು ಹೆಚ್ಚಿಗೆ!!

ಭೋಪಾಲ್‌ನಲ್ಲಿ ಮಡಿದ ಭಾರತೀಯರಿಗೂ ಅಮೆರಿಕದ ಮಾಲೀಕತ್ವದ ಯೂನಿಯನ್ ಕಾರ್ಬೈಡ್ ಕಂಪನಿಗೂ ಯಾವುದೇ ಸಂಬಂಧ ವಿಲ್ಲ ಎಂಬಂತಲೇ ವರ್ತಿಸಿಕೊಂಡು ಬಂದಿರುವ ಈ ಕಂಪನಿಯು ತಾನು ಎಸಗಿದ ಕೊಲೆಗಳಿಂದ ಬಚಾವಾಗಲು ಮಾಡಿದ ಷಡ್ಯಂತ್ರಗಳು ಒಂದೆರಡಲ್ಲ. ಅವುಗಳಲ್ಲಿ ಪ್ರಮುಖವಾದದ್ದು 2000 ರಲ್ಲಿ ಯೂನಿಯನ್ ಕಾರ್ಬೈಡ್ ಕಂಪನಿಯನ್ನೇ ಡೌ ಎಂಬ ಮತ್ತೊಂದು ಕಂಪನಿಗೆ ಮಾರಿದ್ದು. ಇದನ್ನು ಡೌ ಕಂಪನಿಯು ಕೊಂಡಿದ್ದೇ ಯೂನಿಯನ್ ಕಾರ್ಬೈಡ್‌ನ ಯಾವ ಹೊಣೆಗಾರಿಕೆಗೂ ತಾನು ಜವಾಬ್ದಾರನಲ್ಲ ಎಂಬ ಷರತ್ತಿನ ಮೇಲೆ.

ಇಂತಹ ಡೌ ಕಂಪನಿಯು ಇವತ್ತು-ಅಂದರೆ ಭೋಪಾಲ್ ದುರಂತ ಸಂಭವಿಸಿದ 26 ವರ್ಷಗಳ ನಂತರ- ಭೋಪಾಲ್ ಕಾರ್ಖಾನೆಯ ಆವರಣದಲ್ಲಿ ಇನ್ನೂ ಉಳಿದಿರುವ ವಿಷಕಾರಕ ವಸ್ತುಗಳನ್ನು ತೆಗೆಯಬೇಕೆಂದೂ, ಆ ಮೂಲಕ ಇವತ್ತಿಗೂ ಆ ಕಾರ್ಖಾನೆಯ ಸುತ್ತಲಿನ ಗಾಳಿ ಮತ್ತು ನೀರು ಕಲುಷಿತವಾಗುತ್ತಿರುವುದನ್ನು ತಡೆಯಬೇಕೆಂದೂ ಭೋಪಾಲ್ ಜನ ಒತ್ತಾಯಿಸುತ್ತಿದ್ದಾರೆ. ಆದರೆ ಆ ಕಾರ್ಖಾನೆಯ ಆವರಣವನ್ನು ಸ್ವಚ್ಛಗೊಳಿಸಲು ಕನಿಷ್ಠ 50 ಕೋಟಿ ರೂಪಾಯಿ ವೆಚ್ಚವಾಗುತ್ತದೆ. ಡೌನಂತಹ ಬಹುರಾಷ್ಟ್ರೀಯ ಕಂಪನಿಗೆ 50 ಕೋಟಿ ರೂಪಾಯಿಗಳು ಜುಜುಬಿ ಮೊತ್ತ. ಆದರೆ ಅಷ್ಟನ್ನೂ ವೆಚ್ಚ ಮಾಡಿ, ಅಲ್ಲಿನ ಜನರ ಬದುಕನ್ನು ಒಂದಿಷ್ಟು ಸುಧಾರಿಸಲೂ ಡೌ ಸಿದ್ಧವಿಲ್ಲ.

ಡೌ ಕಂಪನಿಗೆ ಭಾರತೀಯರಾಗಲಿ, ಭೋಪಾಲಿಗರಾಗಲೀ ಮುಖ್ಯವಲ್ಲವಾದ್ದರಿಂದ ಅದು ಈ ಸ್ವಚ್ಛತಾ ಕಾರ್ಯವನ್ನು ಕೈಗೆತ್ತಿಕೊಳ್ಳುವುದಿಲ್ಲ ಎಂದು ಹಠ ಹಿಡಿದಿದೆ. ಡೌ ಕಂಪನಿಯ ಈ ಹಠಮಾರಿ ಧೋರಣೆಗೆ ಕುಮ್ಮಕ್ಕು ನೀಡುತ್ತಿರುವುದು 'ಭಾರತೀಯ ಉದ್ಯಮಿಗಳು. ಅದರಲ್ಲೂ ಪ್ರಮುಖವಾಗಿ ತಾನು ಅಪ್ಪಟ ಭಾರತೀಯ, ಭಾರತದ ಬಗ್ಗೆ ಅಪಾರ ಕಾಳಜಿ ಹೊಂದಿರುವ ಕಂಪನಿ ಎಂದೇ ಬಿಂಬಿಸಿಕೊಳ್ಳುವ ಟಾಟಾ ಕಂಪನಿ ಡೌ ಕಂಪನಿಯ ಪರವಾಗಿ ವಾದಿಸುತ್ತಿದೆ. ವಿದೇಶಿ ಕಂಪನಿಗಳ ಮೇಲೆ ಇಂತಹ 'ದುಂದು' ವೆಚ್ಚಗಳನ್ನು ಹೇರಿದರೆ ಭಾರತಕ್ಕೆ ವಿದೇಶಿ ಬಂಡವಾಳ ಬರುವುದು ಕಷ್ಟ ಎಂದು ಟಾಟಾ ಕಂಪನಿ ಭಾರತ ಸರ್ಕಾರದ ಮೇಲೆ ಒತ್ತಡ ತಂದಿದೆ. ಹೇಗೂ ನಮ್ಮ ಪ್ರಧಾನಿ ಮನಮೋಹನ್ ಸಿಂಗ್ ಮತ್ತು ಗೃಹ ಮಂತ್ರಿ ಪಿ. ಚಿದಂಬರಂ ಅವರಿಗೂ ಭಾರತೀಯರ ಸುರಕ್ಷತೆಗಿಂತ ವಿದೇಶಿ ಬಂಡವಾಳವೇ ಮುಖ್ಯವಾಗಿರುವುದರಿಂದ ಅವರೂ ಟಾಟಾ-ಡೌ ಕಂಪನಿಗಳ ಒತ್ತಡಕ್ಕೆ ಮನ ಸೋತಿದ್ದಾರೆ!


ಅಂದಹಾಗೆ ಇದೇ ಡೌ ಕಂಪನಿಯ ಜೊತೆಗೆ ಟಾಟಾ ಕಂಪನಿಯು ಪಶ್ಚಿಮ ಬಂಗಾಳದಲ್ಲಿ ಒಂದು ರಸಾಯನಿಕ ಘಟಕವನ್ನು ಸ್ಥಾಪಿಸುತ್ತಿದೆ!! ಭಾರತೀಯರಿಗೆ ಎಷ್ಟು ನಷ್ಟವಾದರೇನು? ತಮಗೆ ಹೆಚ್ಚು ಲಾಭ ಬಂದರೆ ಸಾಕು ಎಂಬ ಧೋರಣೆ ಟಾಟಾ ಮತ್ತು ಡೌ ಎಂಬ ರಣಹದ್ದು ಕಂಪನಿಗಳದ್ದು.

ಮೊನ್ನಿನ ತೀರ್ಪು ಹೊರಬಿದ್ದ ನಂತರ ಕಾಂಗ್ರೆಸ್ ಪಕ್ಷವನ್ನು ಬಿಜೆಪಿ ತರಾಟೆಗೆ ತೆಗೆದುಕೊಳ್ಳುತ್ತಿದೆ. ಆದರೆ ಇದೇ ಬಿಜೆಪಿ ಕೇಂದ್ರದಲ್ಲಿ ಅಧಿಕಾರದಲ್ಲಿದ್ದಾಗ ಭೋಪಾಲ್ ಸಂತ್ರಸ್ತರಿಗೆ ಯಾವ ಸಹಾಯವನ್ನೂ ಮಾಡಲಿಲ್ಲ. ಅಷ್ಟೇ ಅಲ್ಲ, ಬಿಜೆಪಿ ನೇತೃತ್ವದ ಎನ್‌ಡಿಎ ಸರ್ಕಾರ ಅಧಿಕಾರದಲ್ಲಿದ್ದಾಗ ಅಂದರೆ ಪರಮ ಚೆಡ್ಡಿ ವಾಜಪೇಯಿ ಪ್ರಧಾನಿ ಆಗಿದ್ದಾಗ ಡೌ ಕಂಪನಿಯ ಮುಖ್ಯಸ್ಥನನ್ನು ಗಣರಾಜ್ಯೋತ್ಸವದ ಸಮಾರಂಭಕ್ಕೆ ಆಹ್ವಾನಿಸಿತ್ತು! ಮಾತ್ರವಲ್ಲ, ಸಾವಿರಾರು ಜನರ ಸಾವಿಗೆ ಕಾರಣನಾಗಿದ್ದೂ ಅಮೆರಿಕಕ್ಕೆ ಓಡಿಹೋಗಿದ್ದ ಯೂನಿಯನ್ ಕಾರ್ಬೈಡ್‌ನ ಮುಖ್ಯಸ್ಥ ವಾರೆನ್ ಆಂಡರ್ಸನ್ ಅನ್ನು ಭಾರತಕ್ಕೆ ಒಪ್ಪಿಸಬೇಕೆಂದು ಒಮ್ಮೆಯೂ ಬಿಜೆಪಿ ಸರ್ಕಾರ ಅಮೆರಿಕವನ್ನು ಕೇಳಿಕೊಂಡಿರಲಿಲ್ಲ!

ಇದೆಲ್ಲದರಿಂದ ಹಲವು ವಿಚಾರಗಳು ಸ್ಪಷ್ಟವಾಗುತ್ತವೆ. ಅವುಗಳೇನೆಂದರೆ ಯಾವ ರಾಜಕೀಯ ಪಕ್ಷ ಅಧಿಕಾರಕ್ಕೆ ಬಂದರೂ ಅವುಗಳಿಗೆ ಅಮೆರಿಕದೊಂದಿಗೆ ಗಳಸ್ಯ-ಕಂಠಸ್ಯ ಸಂಬಂಧ ಮತ್ತು ವಿದೇಶಿ ಬಂಡವಾಳ ಹರಿದುಬರುವುದು ಮುಖ್ಯವೇ ಹೊರತು ಇಲ್ಲಿನ ಜನರ ಬದುಕಾಗಲಿ, ಅವರಿಗೆ ರಕ್ಷಣೆ ನೀಡಬೇಕೆಂಬುದಾಗಲಿ, ಸಂತ್ರಸ್ತರಿಗೆ ನ್ಯಾಯ ಒದಗಿಸಬೇಕೆಂಬುದಾಗಲಿ ಮುಖ್ಯವೇ ಇಲ್ಲ.

ಚೆರ್ನೋಬಲ್ ಅಣುಸ್ಥಾವರ ಸೋರಿಕೆಗಿಂತಲೂ, ಅಮೆರಿಕದ ಥ್ರೀ ಮೈಲ್ಸ್ ಐಲೆಂಡಿನಲ್ಲಿ ಸಂಭವಿಸಿದ ಅಣು ದುರಂತಕ್ಕಿಂತಲೂ ಭೀಕರ ಮತ್ತು ಬರ್ಬರವಾಗಿದ್ದ ಭೋಪಾಲ್ ಅನಿಲ ದುರಂತ ಮತ್ತೆ ಎಂದೂ ಸಂಭವಿಸದಿರಲಿ ಎಂಬುದು ಎಲ್ಲಾ ಪ್ರಜ್ಞಾವಂತರ ಅಭಿಪ್ರಾಯವಾಗಿದೆ. ಆದರೆ ಪ್ರಜ್ಞೆ ಎಂಬುದು ನಮ್ಮ ಸರ್ಕಾರಕ್ಕಾಗಲಿ, ರಾಜಕೀಯ ಪಕ್ಷಗಳ ನಾಯಕರಿಗಾಗಲಿ ಇಲ್ಲ. ಆದ್ದರಿಂದಲೇ ಬರುವ ದಿನಗಳಲ್ಲಿ ಭೋಪಾಲ್ ದುರಂತಕ್ಕಿಂತಲೂ ದೊಡ್ಡ ಪ್ರಮಾಣದ ದುರಂತಗಳಿಗೆ ದಾರಿ ಮಾಡಿಕೊಡುವಂತಹ; ಭೋಪಾಲ್‌ಗೆ ಸಂಬಂಧಿಸಿದಂತೆ ಆದ 'ಅನ್ಯಾಯ'ದ ತೀರ್ಪುಗಳೂ ಮತ್ತೆ ಪುನರಾವರ್ತನೆ ಆಗುವಂತಹ ಪರಿಸ್ಥಿತಿಯನ್ನು ನಿರ್ಮಿಸಲು ಸರ್ಕಾರ ಹೊರಟಿದೆ. ಅದಕ್ಕೆ ಎಡಪಕ್ಷಗಳ ಹೊರತಾಗಿ ಇತರೆ ಪಕ್ಷಗಳೂ ಬೆಂಬಲ ನೀಡುತ್ತಿವೆ. ಅದೇ 'Civil Liability of Nuclear Damages Bill' ಎಂಬ ಮಸೂದೆ.

ಈ ಮಸೂದೆ ಜಾರಿಗೆ ಬಂದರೆ ಭಾರತದ ವಿದ್ಯುತ್ ಕೊರತೆಯನ್ನು ನೀಗಿಸುವ ನೆಪದಲ್ಲಿ ದೇಶದ ವಿವಿಧ ಕಡೆ ಅಮೆರಿಕದ ಕಂಪನಿಗಳು ಸ್ಥಾಪಿಸಲಿರುವ ಅಣುಸ್ಥಾವರಗಳಲ್ಲಿ





© EPA

ಅವಘಢ ಸಂಭವಿಸಿದರೆ ಆ ಸ್ಥಾವರವನ್ನು ನಿರ್ಮಿಸಿದ ಅಥವಾ ಅವುಗಳಿಗೆ ಯುರೇನಿಯಂ ಅನ್ನು ಸರಬರಾಜು ಮಾಡಿದ ಕಂಪನಿಗಳು ಜವಾಬ್ದಾರಿಯಾಗುವುದಿಲ್ಲ. ಮಾತ್ರವಲ್ಲ, ಆ ಕಂಪನಿಗಳ ವಿರುದ್ಧ ಯಾವ ಕ್ರಿಮಿನಲ್ ಮೊಕದ್ದಮೆಯನ್ನೂ ಹೂಡುವಂತಿಲ್ಲ! ಅವಘಡದಲ್ಲಿ ಅದೆಷ್ಟೇ ಜನ ಸತ್ತರೂ, ಅದೆಷ್ಟೇ ಪರಿಸರ ಹಾನಿಯಾದರೂ, ಹೆಚ್ಚೆಂದರೆ ಆ ಕಂಪನಿಗಳ ವಿರುದ್ಧ ಸಿವಿಲ್ ಮೊಕದ್ದಮೆಯನ್ನು ಹೂಡಿ ಅವರಿಗೆ ಶಿಕ್ಷೆಯಾಗುವಂತೆ ಕೇಳುವ ಬದಲಾಗಿ ಒಂದಿಷ್ಟು ಪರಿಹಾರ ಕೊಡಿ ಎಂದಷ್ಟೇ ಕೇಳಬಹುದು.

ಇದಕ್ಕಿಂತ ನಾಚಿಕೆಗೇಡಿನ ಸಂಗತಿ ಯಾವುದೆಂದರೆ



ಕಂಡಹಾಗೆ
■ ಗೌರಿ ಲಂಕೇಶ್
editorlankesh@gmail.com

ಅಣುಸ್ಥಾವರ ಉತ್ಪಾದಿಸುವ ವಿದ್ಯುತ್ ಅನ್ನು ಭಾರತ ಸರ್ಕಾರದ 'ಅಣು ವಿದ್ಯುತ್ ನಿಗಮ' ಕೊಂಡುಕೊಳ್ಳುವುದರಿಂದ ಅಂತಹ ಪರಿಹಾರವನ್ನು ನೀಡುವ ಜವಾಬ್ದಾರಿ ಕೂಡ ಈ ನಿಗಮದ್ದೇ ಆಗಿರುತ್ತದೆಯೇ ಹೊರತು ಆ ಸ್ಥಾವರವನ್ನು ಸ್ಥಾಪಿಸಿದ ಅಮೆರಿಕದ ಕಂಪನಿಯು ಜವಾಬ್ದಾರಿ ಆಗಿರುವುದಿಲ್ಲ.

ಭೋಪಾಲ್ ಅನಿಲ ದುರಂತಕ್ಕೆ ಯೂನಿಯನ್ ಕಾರ್ಬೈಡ್ ಕೊನೆಗೂ ಕೊಟ್ಟಿದ್ದು 1500 ಕೋಟಿ ರೂಪಾಯಿಗಳು ಎಂಬುದನ್ನು ಮತ್ತೊಮ್ಮೆ ನೆನಪಿಸಿ ಈ ಹೊಸ ಮಸೂದೆಯಲ್ಲಿನ ಇನ್ನೊಂದು ಪ್ರಮುಖ ಅಂಶದತ್ತ ಗಮನ ಹರಿಸಬಹುದು. ಈ ಮಸೂದೆಯ ಪ್ರಕಾರ ಯಾವುದೇ ಅಣುಸ್ಥಾವರದಲ್ಲಿ ಅವಘಡ ಸಂಭವಿಸಿದರೆ ಅದರ ಅಮೆರಿಕ ಕಂಪನಿಯು ಹೆಚ್ಚೆಂದರೆ ಜುಜುಬಿ 300 ಕೋಟಿ ರೂಪಾಯಿಗಳನ್ನು ಕೊಟ್ಟರೆ ಸಾಕು. ಇನ್ನುಳಿದ 2300 ಕೋಟಿ ರೂಪಾಯಿಗಳನ್ನು ಭಾರತ ಸರ್ಕಾರವೇ ಭರಿಸುತ್ತದೆ. ಇದರರ್ಥ: ಜನರ ಮಾರಣಹೋಮಕ್ಕೆ ಕಾರಣ ಅಮೆರಿಕದ ಕಂಪನಿಯಾದರೂ ಶಿಕ್ಷೆಗೆ ಗುರಿಯಾಗುವುದು ತೆರಿಗೆ ಕಟ್ಟುವ ಭಾರತದ ಬಡ ಪ್ರಜೆಗಳು!

ಅಮೆರಿಕದ ಬಂಡವಾಳಶಾಹಿಗಳ ಫುಟ್‌ರಗ್ ಆಗಿರುವ ಭಾರತದಲ್ಲಿ ಭೋಪಾಲ್ ಅನಿಲ ದುರಂತ ಸಂಭವಿಸಿ ಸಾವಿರಾರು ಜನ ಸಾಯುತ್ತಾರೆ. ಆದರೂ ವಾರೆನ್ ಆಂಡರ್ಸನ್ ತರಹದ ಕೊಲೆಗಡುಕರು ಆರಾಮಾಗಿರುತ್ತಾರೆ; ಇತರೆ ಸಿಬ್ಬಂದಿಗಳಿಗೆ ಎರಡು ವರ್ಷ ಸಜೆ ಮಾತ್ರ ಸಿಕ್ಕು ಅವರೂ ಜಾಮೀನಿನ ಮೇಲೆ ಬಿಡುಗಡೆಗೊಳ್ಳುತ್ತಾರೆ. ಏಕೆಂದರೆ ಅಭಿವೃದ್ಧಿಯ ಹೆಸರಲ್ಲಿ ಭಾರತ ಸರ್ಕಾರಕ್ಕೆ ಇವರ ಬಂಡವಾಳ ಬೇಕಾಗಿದೆ.

ಹಾಗೆಯೇ, ಸುಪ್ರೀಂ ಕೋರ್ಟ್ ಕೂಡ ನಮ್ಮ ದೇಶಕ್ಕೆ ವಿದೇಶಿ ಬಂಡವಾಳ ಹರಿದು ಬರಬೇಕೆಂದರೆ, ನರ್ಮದಾ ಡ್ಯಾಮಿನ ಎತ್ತರವನ್ನು ಹೆಚ್ಚಿಸಬೇಕೆಂದೂ, ಆ ಡ್ಯಾಮ್ ಯೋಜನೆಯಿಂದಾಗಿ ಲಕ್ಷಾಂತರ ಜನ ನಿರಾಶ್ರಿತರಾದರೂ ಅವರಿಗೆ ಪುನರ್ ವಸತಿ ಕಲ್ಪಿಸಿದರೆ ಸಾಕೆಂದೂ ಹೇಳುತ್ತದೆ.

ಅದೇ ನೀತಿ ಈಗಲೂ ಮುಂದುವರೆದಿದೆ. ಭಾರತ ಅಭಿವೃದ್ಧಿ ಹೊಂದಬೇಕೆಂದರೆ ದಂಡಕಾರಣ್ಯದ ಕಾಡುಗಳಲ್ಲಿ, ಗುಡ್ಡಗಳಲ್ಲಿ ಇರುವ ಅಮೂಲ್ಯ ಅದಿರನ್ನು ಹೊರತೆಗೆದು ವೇದಾಂತ, ಎಸ್ಸಾರ್, ಟಾಟಾದಂತಹ ಕಂಪನಿಗಳಿಗೆ ನೀಡಬೇಕಿದೆ. ಆ ಕಾರ್ಯಾಚರಣೆಗೆ ಅಡ್ಡಿ ಬರುವ ಆದಿವಾಸಿಗಳನ್ನು ಕಾಡುಗಳಿಂದ ಒದ್ದೋಡಿಸಬೇಕಿದೆ, ಇಲ್ಲವೆಂದರೆ ನಮ್ಮ ಪೊಲೀಸರೇ ನಮ್ಮವರನ್ನು ಕೊಂದು ಹಾಕಬೇಕಿದೆ....

ಭಾರತ ಸರ್ಕಾರಕ್ಕೆ, ಇಲ್ಲಿನ ರಾಜಕೀಯ ಪಕ್ಷಗಳಿಗೆ ಎಲ್ಲಿಯತನಕ ಭಾರತದ ಪ್ರಜೆಗಳು ಮುಖ್ಯವಾಗುವುದಿಲ್ಲವೋ ಅಲ್ಲಿಯತನಕ ಭೋಪಾಲ್ ಅನಿಲ ದುರಂತಗಳು ಮತ್ತೆ ಮತ್ತೆ ಸಂಭವಿಸುತ್ತಲೇ ಇರುತ್ತವೆ.....


ಇದೆಲ್ಲದಕ್ಕೆ ಪರಿಹಾರವೆಂದರೆ ನಮ್ಮ ರಾಜಕೀಯ, ಸಾಮಾಜಿಕ, ಆರ್ಥಿಕ ವ್ಯವಸ್ಥೆಯಲ್ಲಿ ಮೂಲಭೂತವಾದ ಬದಲಾವಣೆಗಳನ್ನು ತರುವುದು.

ಆದರೆ ಒಂದು ದೊಡ್ಡ ಕ್ರಾಂತಿ ಇಲ್ಲದೆ ಆ ಮೂಲಭೂತ ಬದಲಾವಣೆಗಳು ಸಾಧ್ಯವಿಲ್ಲ, ಅಲ್ಲವೇ?


ನಟಿ ಅಮೂಲ್ಯ

ಅಮೂಲ್ಯ ಮತ್ತು ರತ್ನಜಾರ ಈ 'ಫೋಟೋ ಪ್ರಕರಣ'ದ ವಾಸನೆ 'ಲಂಕೇಶ್'ಗೆ ತಿಂಗಳ ಹಿಂದೆಯೇ ಅಪ್ಪಳಿಸಿತ್ತು. 'ರತ್ನಜಾ ಮದುವೆ ಕ್ಯಾನ್ಸಲ್' ಎಂಬ ಸಣ್ಣ ವರದಿಯಲ್ಲಿ ರತ್ನ ಮಹಾರಾಜನಿಗೆ ನಟಿಯೊಬ್ಬಳೊಂದಿಗೆ ಅಫೇರು ಇದೆ ಎಂಬುದನ್ನೂ ಪತ್ರಿಕೆ ದಾಖಲಿಸಿತ್ತು. ಈಗ ಆ ಸುದ್ದಿಗೆ ಮತ್ತಷ್ಟು ಬಲ ಬಂದಿದೆ ಅಷ್ಟೇ... "ಕನ್ನಡ ಚಿತ್ರರಂಗ ಉದ್ಧಾರವಾದರೆ ಅದು ನನ್ನಿಂದ ಮಾತ್ರ ಸಾಧ್ಯ", "ಇಡೀ ಚಿತ್ರರಂಗದಲ್ಲಿ ನನಗಿಂತ ಮಿಗಿಲಾದ ಬುದ್ಧಿವಂತ ನಿರ್ದೇಶಕನಿಲ್ಲ" ಎಂದೆಲ್ಲ ಬೂಸಿ ಬಿಡುತ್ತಿದ್ದ ರತ್ನಜನ 'ಕಾಮಿಸಂ' ಈಗ ಇಡೀ ರಾಜ್ಯಕ್ಕೇ ಗೊತ್ತಾಗಿದೆ.

ನೆನಪಿರಲಿ, ಇದು ರತ್ನನ ಕಾಮಿಸಂ!


ರತ್ನಜಾ

"ಪ್ರಪಂಚದಲ್ಲಿ ಹುಟ್ಟಿರೋ ಏಕೈಕ ಸಭ್ಯಸ್ಥ ನಾನೇ" ಎಂದು ಪೋಸು ಕೊಡುತ್ತಿದ್ದ ದುರಹಂಕಾರದ ರತ್ನಜಾನ ಅಸಲಿ ಜಾತಕ ಈಗ ಹೊರಬಿದ್ದಿದೆ.

"ಕನ್ನಡ ಚಿತ್ರರಂಗ ಉದ್ಧಾರವಾದರೆ ಅದು ನನ್ನಿಂದ ಮಾತ್ರ ಸಾಧ್ಯ", "ಇಡೀ ಚಿತ್ರರಂಗದಲ್ಲಿ ನನಗಿಂತ ಮಿಗಿಲಾದ ಬುದ್ಧಿವಂತ ನಿರ್ದೇಶಕನಿಲ್ಲ" ಎಂದೆಲ್ಲ ಬೂಸಿ ಬಿಡುತ್ತಿದ್ದ ರತ್ನಜನ 'ಕಾಮಿಸಂ' ಈಗ ಇಡೀ ರಾಜ್ಯಕ್ಕೇ ಗೊತ್ತಾಗಿದೆ.

ಈಗತಾನೆ ಕಣ್ಣು ಬಿಡುತ್ತಿರುವ ಎಳೇ ನಾಯಕಿ ಅಮೂಲ್ಯಳೊಂದಿಗೆ ರತ್ನಜಾ ರತಿಚೇಷ್ಟೆ ಮಾಡುತ್ತಿರುವ ಫೋಟೋ ಎಲ್ಲೆಡೆ ಕಾಣಿಸಿಕೊಂಡಿದೆ.

ಈ ರತ್ನಜಾ ದುರಹಂಕಾರಿ, ಹುಚ್ಚ ಮಹಾನ್ ಹುಂಬ ಎಂಬ ವಿಚಾರ ಚಿತ್ರರಂಗ ಮತ್ತು ಮಾಧ್ಯಮದವರಿಗೆ ಯಾವತ್ತೋ ಗೊತ್ತಾಗಿತ್ತು. ಆದರೆ ಈತ ವಿಕೃತದ ಆಸಾಮಿ, ತನ್ನ ತೃಪೆಗಾಗಿ 'ಮಗುವಿನಂಥ' ಮುಗ್ಧ ಹುಡುಗಿಯರನ್ನು ಬಳಸಿಕೊಳ್ಳಲೂ ಹೇಸದವನು ಎಂಬುದು ಈಗಷ್ಟೇ ಜಾಹೀರಾಗಿದೆ.

ಈಗ ಮಾಧ್ಯಮಗಳಿಗೆ ಸರಬರಾಜಾಗಿರುವ ಫೋಟೋವನ್ನು ನೋಡಿದರೆ ರತ್ನಜಾನನ್ನು ಚುಂಬಿಸುತ್ತಿರುವುದು ನಟಿ ಅಮೂಲ್ಯಳಂತೆ ಕಾಣುತ್ತಿದೆ.

ಹಾಗೆ ನೋಡಿದರೆ ಅಮೂಲ್ಯ ಮತ್ತು ರತ್ನಜಾರ ಈ 'ಫೋಟೋ ಪ್ರಕರಣ'ದ ವಾಸನೆ 'ಲಂಕೇಶ್'ಗೆ ತಿಂಗಳ ಹಿಂದೆಯೇ ಅಪ್ಪಳಿಸಿತ್ತು, 'ರತ್ನಜಾ ಮದುವೆ ಕ್ಯಾನ್ಸಲ್' ಎಂಬ ಸಣ್ಣ ವರದಿಯಲ್ಲಿ ರತ್ನ ಮಹಾರಾಜನಿಗೆ ನಟಿಯೊಬ್ಬಳೊಂದಿಗೆ ಅಫೇರು ಇದೆ ಎಂಬುದನ್ನೂ ಪತ್ರಿಕೆ ದಾಖಲಿಸಿತ್ತು.

ಈಗ ಆ ಸುದ್ದಿಗೆ ಮತ್ತಷ್ಟು ಬಲ ಬಂದಿದೆ ಅಷ್ಟೇ...


ರತ್ನಜಾ ಬ್ಲಾಕ್‌ಮೇಲ್!


ಈಗ ಹಬ್ಬಿರುವ ಸುದ್ದಿಯ ಪ್ರಕಾರ 'ಪ್ರೇಮಿಸಂ' ಚಿತ್ರದ ಶೂಟಿಂಗ್ ಬೆಳಗಾವಿಯಲ್ಲಿ ನಡೆಯುತ್ತಿದ್ದಾಗ ಈ ಪ್ರಕರಣ ನಡೆಯಿತಂತೆ. ತನ್ನ ತೃಪೆಗೆ ಅಮೂಲ್ಯಳನ್ನು ಬಲವಂತವಾಗಿ ಚುಂಬಿಸಿದ ರತ್ನಜಾ ಸ್ವತಃ ತಾನೇ ಅದನ್ನು ತನ್ನ ಮೊಬೈಲ್‌ನಲ್ಲಿ ಸೆರೆಹಿಡಿದನಂತೆ. ನಂತರ ಅದನ್ನೇ ಉಪಯೋಗಿಸಿಕೊಂಡು "ನನ್ನೊಂದಿಗೆ ಸಂಪೂರ್ಣ ಸಹಕರಿಸದಿದ್ದರೆ, ಇದನ್ನು ಪಬ್ಲಿಶ್ ಮಾಡುತ್ತೇನೆ" ಎಂದು ಆಕೆಯನ್ನು ಹೆದರಿಸುತ್ತಿದ್ದನಂತೆ.

ಆದರೆ ಆನಂತರ ಆ ಮೊಬೈಲ್ ಮೈಸೂರಿನಲ್ಲಿ ಕಳೆದುಹೋಯಿತಂತೆ. ಅದನ್ನು ಕದ್ದ ಕಳ್ಳ ಆ ಮೊಬೈಲ್‌ಅನ್ನು ಬೆಂಗಳೂರಿನ ನ್ಯಾಷನಲ್ ಮಾರ್ಕೆಟ್‌ನಲ್ಲಿರುವ ಯಾರಿಗೋ ಕೊಟ್ಟನಂತೆ. ಆಗ ಅದರಲ್ಲಿದ್ದ ಫೋಟೊ ಅನ್ನು ಗುರುತಿಸಿದ ವ್ಯಕ್ತಿಯೊಬ್ಬ "ಹಣ ಕೊಡದಿದ್ದರೆ ಇದನ್ನು ಬಹಿರಂಗ ಮಾಡುತ್ತೇನೆ" ಎಂದು ರತ್ನಜಾನನ್ನು ಹೆದರಿಸಿದನಂತೆ. ಆತ ಹೆಚ್ಚು ಹಣ ಅಪೇಕ್ಷಿಸಿದ್ದರಿಂದ ರತ್ನಜಾ ಕಾಸು ಕೊಡಲು ನಿರಾಕರಿಸಿದನಂತೆ.

ಅದಕ್ಕೆ, ಸಣ್ಣದಾಗಿ ಬ್ಲಾಕ್‌ಮೇಲ್ ಮಾಡುವ ಉದ್ದೇಶದಿಂದ ಈಗ ರತ್ನಜಾ ಸೆರೆಹಿಡಿದಿದ್ದ ಚಿತ್ರಗಳಲ್ಲಿ ಒಂದು ಫೋಟೋವನ್ನು ಬಿಟ್ಟಿದ್ದಾನಂತೆ.

ಇದು ಸದ್ಯ ಹೊಗೆಯಾಡುತ್ತಿರುವ ಸುದ್ದಿ...






ರತ್ನಜಾನ ತಿಮಿರು

ಅದು 2005ನೇ ವರ್ಷ. ರತ್ನಜನ ಮೊದಲನೇ ನಿರ್ದೇಶನದ 'ನೆನಪಿರಲಿ' ಚಿತ್ರದ ಆಡಿಯೋ ರಿಲೀಸ್ ಕಾರ್ಯಕ್ರಮ ಏರ್ಪಾಡಾಗಿತ್ತು. ಕೋಣನಕುಂಟೆ, ದೊಡ್ಡಕಲ್ಲಸಂದ್ರದ ಬಳಿಯ ರೆಸಾರ್ಟ್ ಒಂದರಲ್ಲಿ ನಡೆದ ಆ ಕಾರ್ಯಕ್ರಮಕ್ಕೆ ಆಗಷ್ಟೇ ರಾಷ್ಟ್ರ ಪ್ರಶಸ್ತಿ ಪಡೆದಿದ್ದ ನಟಿ ತಾರಾ ಅವರನ್ನು ಕರೆಸಲಾಗಿತ್ತು. ತಾರಾ ಮೇಡಮ್ಮು ಆ ಸಂಜೆಯ ಧೋ ಎನ್ನುವ ಮಳೆಯಲ್ಲಿ, ಹಾಳು ರಸ್ತೆಯಲ್ಲಿ ಹಾದು ಬರುವುದು ಕೊಂಚ ಲೇಟಾಯಿತು. ಅಷ್ಟಕ್ಕೇ ಮುನಿಸಿಕೊಂಡ ರತ್ನಜಾ ತಾರಾ ಅವರಿಗೆ ಸಣ್ಣ ಸ್ವಾಗತವನ್ನೂ ತೋರದೆ ಅವಮಾನಿಸಿದ್ದ. ಆಗ ಇದು ದೊಡ್ಡ ವಿವಾದವಾಗಿತ್ತು.

ಕಳೆದ ವರ್ಷ ನವೆಂಬರ್ ತಿಂಗಳಲ್ಲಿ ಚಾಮರಾಜಪೇಟೆಯ ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಹಂಸಲೇಖಾ ತಮ್ಮ ದೇಸೀ ತಂಡದಿಂದ ರಾಜ್ಯೋತ್ಸವ ಕಾರ್ಯಕ್ರಮ ಹಮ್ಮಿಕೊಂಡಿದ್ದರು. ಆ ಕಾರ್ಯಕ್ರಮಕ್ಕೆ ಆಗಿನ ಚಲನಚಿತ್ರ ವಾಣಿಜ್ಯ ಮಂಡಳಿಯ ಅಧ್ಯಕ್ಷೆ ಜಯಮಾಲಾರನ್ನು ಆಹ್ವಾನಿಸಿದ್ದರು. ಆದರೆ ಅದ್ಯಾವ ಕಾರಣಕ್ಕೂ ಜಯಮಾಲಾ ಅಂದಿನ ಕಾರ್ಯಕ್ರಮಕ್ಕೆ ಆಗಮಿಸಲಿಲ್ಲ.



ಆ ಕಾರ್ಯಕ್ರಮದ ನಿರೂಪಣೆಗೆ ನಿಂತ ಈ ದುರಹಂಕಾರಿ ಮನುಷ್ಯ ಏನೆನ್ನಬೇಕು? "ಅಯ್ಯೋ, ಅವರು ಬರದೇ ಇರೋದು ತುಂಬಾ ಒಳ್ಳೇದಾಯ್ತು ಬಿಡಿ. ಅವರು ಬಂದ್ರೇನೇ ನಮ್ ಕಾರ್ಯಕ್ರಮ ನಡೆಯೋದಾ?" ಅಂದಿದ್ದ.

ಪುಟ್ಟಣ್ಣನ ತುಂಡು!

ರತ್ನಜಾನಿಗೆ ತಾನು ಕಣಗಾಲು ಪುಟ್ಟಣ್ಣನ ಉಳಿಕೆ ತುಂಡು ಎಂಬ ಭ್ರಮೆ ಮೊದಲಿನಿಂದಲೂ ಇದೆ. ಇವನ ಅದೃಷ್ಟಕ್ಕೆ ಈತನ ಮೊದಲ ಸಿನಿಮಾ 'ನೆನಪಿರಲಿ' ನೂರು ದಿನ ಓಡಿಬಿಟ್ಟಿತು. ಆದರೆ ಚಿತ್ರದ ನಿರ್ಮಾಪಕ ಅಜಯ್ ಗೌಡನಿಗೆ ನಾಲ್ಕಾಣೆಯ ಲಾಭವೂ ಆಗಿರಲಿಲ್ಲ, ಬಂದ ಆದಾಯ ಅಲ್ಲಲ್ಲಿಗೇ ಸರಿಹೋಗಿತ್ತು. 'ನೆನಪಿರಲಿ' ಚಿತ್ರ ಹೇಳಿಕೊಳ್ಳುವಷ್ಟು ಚೆಂದಗೆ ಇರಲಿಲ್ಲವಾದರೂ ಆ ಚಿತ್ರಕ್ಕೆ ಹಂಸಲೇಖಾ ಬರೆದ ಹಾಡುಗಳು, ಮ್ಯೂಸಿಕ್ ಹಿಟ್ ಆಗಿ ಪ್ರೇಕ್ಷಕರನ್ನು ಆಕರ್ಷಿಸಿತ್ತು, 'ಕೂರಕ್ ಕುಕ್ರಳ್ಳಿ ಕೆರೆ, ತೇಲಕ್ ಕಾರಂಜಿ ಕೆರೆ' ಎಂಬ ಮೈಸೂರಿನ ವರ್ಣನೆಯ ಹಾಡಿನಿಂದಲೇ ಮೈಸೂರಿನ 'ಶಾಂತಲಾ' ಚಿತ್ರಮಂದಿರದಲ್ಲಿ ಈ ಚಿತ್ರ ನೂರು ದಿನ ಓಡಿತ್ತು. ಜೊತೆಗೆ ಪ್ರೇಮ್ ಎಂಬ ಸುರದ್ರೂಪಿ ನಟನ ಹೊಸ ಮುಖ ಎಲ್ಲರನ್ನೂ ಅಟ್ರಾಕ್ಟ್ ಮಾಡಿತ್ತು.

ಹೀಗೆ ಈ ಸಿನಿಮಾ ಗೆದ್ದಿದ್ದೇ ಬಂತು, ರತ್ನಜನನ್ನು ಹಿಡಿದು ನಿಲ್ಲಿಸುವುದೇ ಅಸಾಧ್ಯವಾಯಿತು. "ನಾನು ಆಧುನಿಕ ಪುಟ್ಟಣ್ಣ ಕಣಗಾಲು", "ತಮಿಳಿನ ಕೆ. ಬಾಲಚಂದರ್‌ರ ಮಟ್ಟದ ಪ್ರಬುದ್ಧತೆ ನನಗಿದೆ" ಎಂದು ಬೀಗಲು ಶುರು ಹಚ್ಚಿಕೊಂಡ. ಈತನ ಎರಡನೇ ಸಿನಿಮಾ 'ಹೊಂಗನಸು' ಶುರುವಾಗೋ ಹೊತ್ತಿಗೆ ಇವನ ಐಲಾಟಗಳು ಮಿತಿ ಮೀರಿದ್ದವು.

ಒಂದು ದಿನ ಚಿತ್ರೀಕರಣದ ವೇಳೆ ರತ್ನಜ ಹೇಳಿದಂತೆ ನಟ ಪ್ರೇಮ್ ನಟಿಸಲಿಲ್ಲ ಎಂಬ ಒಂದೇ ಕಾರಣಕ್ಕೆ ಕೈಲಿದ್ದ ಟ್ರಾಲಿ ರಾಡನ್ನೇ ತೆಗೆದು ಪ್ರೇಮ್‌ಕಡೆಗೆ ಬೀಸಿದ್ದ. ಪುಣ್ಯಕ್ಕೆ ಅದು ಗುರಿತಪ್ಪಿದ್ದರಿಂದ ಪ್ರೇಮ್ ಅಪಾಯದಿಂದ ಪಾರಾಗಿದ್ದ. ತನ್ನ ಚಿತ್ರದಲ್ಲಿ ನಟಿಸಲು ಬಂದ ಹಿರಿಯ ಕಲಾವಿದರಿಗೂ ತಲೆ ಮೇಲೆ ಹೊಡೆಯೋದು ರತ್ನಜಾನಿಗೆ ಒಂಥರಾ ಶೋಕಿಯಾಗಿಬಿಟ್ಟಿತು.


'ಹೊಂಗನಸು' ಬಿಡುಗಡೆಯಾದಾಗ ಆ ಚಿತ್ರದ ಬಗ್ಗೆ 'ಲಂಕೇಶ್' ಸೇರಿದಂತೆ ಬಹುತೇಕ ಪತ್ರಿಕೆಗಳು ಅದನ್ನು ವಿಮರ್ಶೆ ಮಾಡಿ ಅದೊಂದು ಕೆಟ್ಟ ಚಿತ್ರವೆಂದು ಬರೆದವು. ಉದಯವಾಣಿಗೆ ಲಕ್ಷಾಂತರ ರೂಪಾಯಿಯ ಜಾಹೀರಾತು ಮತ್ತು ರೂಪತಾರಾ ಪತ್ರಿಕೆಯ ಆಗಿನ ಮುಖ್ಯಸ್ಥನ ಸೊಂದಿಲಿಗೆ ಹೇರಳವಾದ ಕಡುಬು ತುರುಕಿದ್ದರಿಂದ ಆ ಪತ್ರಿಕೆ ಮಾತ್ರ 'ಇದು ಜಗತ್ತಿನ ಅದ್ಭುತ ಸಿನಿಮಾಗಳಲ್ಲಿ ಒಂದು' ಎಂಬಂತೆ ಈ ತಿರುಪೆ ಡೈರೆಕ್ಟರ್ ರತ್ನಜಾನನ್ನು ವಾಕರಿಕೆ ಬರುವಷ್ಟು ಹೊಗಳಿತ್ತು.

ವಿಮರ್ಶಕರ ಟೀಕೆಗಳನ್ನು ಸಹಿಸಿಕೊಳ್ಳಲು, ಅರ್ಥ ಮಾಡಿಕೊಳ್ಳಲು ರತ್ನಜನಿಗೆ ಆಗಲಿಲ್ಲ. ಕೋಪೋದ್ರಿಕ್ತನಾದ ರತ್ನಜಾ 'ಪತ್ರಿಕೆಗಳ ವಿಮರ್ಶೆಯನ್ನು ನಂಬಬೇಡಿ. ನಮ್ಮದು ತುಂಬಾ ಒಳ್ಳೇ ಸಿನಿಮಾ. ಪತ್ರಕರ್ತರಿಗೆ ಬುದ್ಧಿ ಇಲ್ಲ. ಪತ್ರಿಕೆಗಳು ಹೊಗಳಿದ ಸಿನಿಮಾ ಗೆದ್ದುಬಿಡೊಲ್ಲ, ತೆಗಳಿದ ಸಿನಿಮಾ ಸೋಲಲ್ಲ...' ಎಂಬಂತಹ ಹುಚ್ಚುಚ್ಚಾದ, ದೊಡ್ಡ ಸೈಜಿನ ಜಾಹೀರಾತುಗಳನ್ನು ಪ್ರಕಟಿಸಿದ್ದ.

ಇಂಡಸ್ಟ್ರಿಯವರೇ ಕಾರಣ!

"ಈ ಫೋಟೋ ಹೀಗೆ ಬಹಿರಂಗಗೊಳ್ಳಲು ಇಂಡಸ್ಟ್ರಿಯವರೇ ಕಾರಣ" ಎಂದು ಅಮೂಲ್ಯ ದೂರುತ್ತಿದ್ದಾಳೆ. ಇಂಡಸ್ಟ್ರಿ ಎಂದರೆ ಯಾರು? ಎಂಬುದೇ ಪ್ರಶ್ನೆ.

'ಚೈತ್ರದ ಚಂದ್ರಮ' ನಂತರ ಅಮೂಲ್ಯ ಮತ್ತು ನಿರ್ದೇಶಕ ಎಸ್.ನಾರಾಯಣ್ ನಡುವಿನ ಸಂಬಂಧ ಹಳಸಿತ್ತು. 'ಚೈತ್ರದ ಚಿಲಿಪಿಲಿ' ಚಿತ್ರದ ಪತ್ರಿಕಾಗೋಷ್ಠಿಯಲ್ಲಿ ನಾಣಿ "ಇವತ್ತಿನ ನಟಿಯರು ಬೆಳೆಯುವ ತನಕ ಮಾತ್ರ ನಮ್ಮಂಥ ನಿರ್ದೇಶಕರನ್ನು ಬಳಸಿಕೊಳ್ಳುತ್ತಾರೆ. ನಂತರ ನಮ್ಮ ಬಳಿಯೇ ಕೇವಲವಾಗಿ ವರ್ತಿಸುತ್ತಾರೆ. ನಾನೇ ಬೆಳೆಸಿದ ನಾಯಕಿಯೊಬ್ಬಳು ನನಗೆ ಅವಮರ್ಯಾದೆ ಮಾಡಿದಳು, ಕಾಲ್‌ಶೀಟ್‌ಗಾಗಿ ನನ್ನ ಮ್ಯಾನೇಜರ್‌ನನ್ನು ಕಳಿಸಿದರೆ, ಅರ್ಧದಿನ ಕೂರಿಸಿಕೊಂಡು ಕಡೆಗೆ 'ಕಾಲ್‌ಶೀಟ್ ಬೇಕಿದ್ದರೆ ನಿಮ್ಮ ಡೈರೆಕ್ಟರನ್ನೇ ಕಳಿಸು' ಎಂದಿದ್ದಾಳೆ" ಎಂದು ಪರೋಕ್ಷವಾಗಿ ಅಮೂಲ್ಯಳನ್ನು ಜರೆದಿದ್ದರು. ಇದರಿಂದ ಮುನಿಸಿಕೊಂಡಿದ್ದ ನಾಣಿ, ಅಮೂಲ್ಯಳ ತಂದೆ ಕೆಂಪರಸು ಸತ್ತಾಗಲೂ ಅವರ ಅಂತಿಮ ದರ್ಶನಕ್ಕೆ ಹೋಗಿರಲಿಲ್ಲ.




"ನಾರಾಯಣ್ ಅಂಕಲ್ ಬರ್ತಾರೆ ಅಂತ ನಾವು ಶವ ಇಟ್ಟು ಕಾದರೂ ಅವರು ಬರಲಿಲ್ಲ" ಎಂದು ಅಮೂಲ್ಯ ಕೂಡಾ ನಾಣಿ ವಿರುದ್ಧ ಕಿಡಿಕಾರಿದ್ದಳು. ಈಗ ಅಮೂಲ್ಯ 'ಇಂಡಸ್ಟ್ರಿಯವರದ್ದೇ ಕೆಲಸ' ಎಂದು ಕರಾರುವಾಕ್ಕಾಗಿ ಆರೋಪಿಸುತ್ತಿರುವುದನ್ನು ನೋಡಿದರೆ, ಈಕೆ ನಾಣಿಯನ್ನೇ ಟಾರ್ಗೆಟ್ ಮಾಡುತ್ತಿದ್ದಾಳಾ ಎಂಬ ಅನುಮಾನ ಮೂಡುತ್ತದೆ.

ಅಮೂಲ್ಯ ನಾಣಿಯ ಸಂಪರ್ಕದಿಂದ ಕಳಚಿಕೊಳ್ಳುತ್ತಿದ್ದಂತೆಯೇ ರತ್ನಜನಿಗೆ ಹೆಚ್ಚು ಆಪ್ತಳಾದಳು. ಅಮೂಲ್ಯಳ ಅಣ್ಣ ದೀಪಕ್ ಮಾಲೀಕತ್ವದ 'ಸಿನಿಸ್ಪರ್ಶ' ಎಂಬ ಎಡಿಟಿಂಗ್ ಸ್ಟುಡಿಯೋದ ಉದ್ಘಾಟನೆ ಮಾಡಿದ್ದೂ ರತ್ನಜನೇ.

ರತ್ನಜ ಮಲ್ಲೇಶ್ವರದ ಕಡೆಗೆ ಹೋದಾಗಲೆಲ್ಲ ಅಮೂಲ್ಯಳ ಮನೆಗೆ ಒಂದು ವಿಸಿಟ್ ಹಾಕಿ ಊಟ-ತಿಂಡಿ ಮುಗಿಸಿಕೊಂಡು ಹೋಗುತ್ತಿದ್ದ, ಟೀವಿ ಸಂದರ್ಶನಗಳಿಗೂ ಖುದ್ದು ರತ್ನಜನೇ ಬಂದು ಅಮೂಲ್ಯಳನ್ನು ಕರೆದೊಯ್ಯುತ್ತಿದ್ದ. ಆ ವಿಚಾರ ತೀರಾ ಗೌಪ್ಯವಾಗಿಲ್ಲದಿದ್ದರೂ ರತ್ನಜ, ಅಮೂಲ್ಯಳ ಮೇಲೆ ಕೆಟ್ಟ ಕಣ್ಣು ಬೀರಿದ್ದಾನೆ ಎಂದು ಯಾರೂ ಅಂದಾಜಿಸಿರಲಿಲ್ಲ.

ಮದುವೆ ಮುರಿದುಬಿದ್ದದ್ದೇಕೆ?

'ನೆನಪಿರಲಿ', 'ಹೊಂಗನಸು' ಮತ್ತು 'ಪ್ರೇಮಿಸಂ' ಎಂಬ ಮೂರು ಸಿನಿಮಾಗಳನ್ನು ನಿರ್ದೇಶಿಸಿರುವ ರತ್ನಜಾ ವಿದ್ಯಾವಂತ, ಪ್ರಜ್ಞಾವಂತ ಎಂಬ ಕಾರಣಕ್ಕೆ ಎಡಿಟರ್ ಕೆಂಪರಾಜು ತಮ್ಮ ನಾದಿನಿಯನ್ನು ಆತನಿಗೆ ಕೊಟ್ಟು ಮದುವೆ ಮಾಡಲು ಉದ್ದೇಶಿಸಿದ್ದರು.




ರತ್ನಜನೂ ಅದಕ್ಕೆ ಒಪ್ಪಿದ್ದ. ಮಂಡ್ಯದ ತಮ್ಮ ಮನೆಯಲ್ಲೇ ಕೆಂಪರಾಜು ನಿಶ್ಚಿತಾರ್ಥವನ್ನೂ ಮಾಡಿದ್ದರು. ಆಗ ರತ್ನಜ ವಿಚಿತ್ರವಾಗಿ ವರ್ತಿಸಿದ್ದ. "ನಿಶ್ಚಿತಾರ್ಥಕ್ಕೇ ಆಗಲಿ ಮದುವೆಗೇ ಆಗಲಿ ಯಾರೂ ಹೆಚ್ಚು ಜನ ಬರಬಾರದು. ಮದುವೆ ಗೋಪಾಲಸ್ವಾಮಿ ಬೆಟ್ಟದಲ್ಲಿ ಸರಳವಾಗಿ ನಡೆಯಬೇಕು. ಯಾವ ನೆಂಟರನ್ನೂ ಮದುವೆಗೆ ಕರೆಯಬಾರದು" ಎಂದು ರತ್ನಜಾ ಹಠ ಹಿಡಿದ. ನಿಶ್ಚಿತಾರ್ಥಕ್ಕೂ ಸಹ ತನ್ನ ಮನೆಯವರು ಮತ್ತು ಸೋದರ ಮಾವರನ್ನು ಮಾತ್ರ ಕರೆದುಕೊಂಡು ಬಂದಿದ್ದ. ಅಷ್ಟೇ ಅಲ್ಲ "ಈ ಮದುವೆ ವಿಚಾರವನ್ನು ಎಲ್ಲೂ ಹೇಳಬೇಡಿ" ಎಂದೂ ಕೇಳಿಕೊಂಡಿದ್ದ. ಇದನ್ನೆಲ್ಲ ಕಂಡು ಕೆಂಪರಾಜು ಅವರಿಗೆ ಈತನ ಬಗ್ಗೆ ಅನುಮಾನಗಳು ಕಾಣಿಸಿಕೊಂಡಿದ್ದು.

ನಿಶ್ಚಿತಾರ್ಥ ಮುಗಿದ ಕೆಲವೇ ತಿಂಗಳಲ್ಲಿ ಮದುವೆ ಕಾರ್ಯ ನಡೆಯುವುದು ಸಂಪ್ರದಾಯ. ಆದರೆ ರತ್ನಜಾ ಮಾತ್ರ "ನನ್ನ 'ಪ್ರೇಮಿಸಂ' ಸಿನಿಮಾ ಮುಗಿಯಲಿ" ಎಂದು ನೆಪ ನೀಡುತ್ತಾ ಮದುವೆಯನ್ನು ಮುಂದಕ್ಕೆ ಹಾಕುತ್ತಲೇ ಬಂದ. ಆ ಚಿತ್ರ ಬಿಡುಗಡೆಯಾಗಿ ತೋಪಾದರೂ ಮದುವೆಯಾಗುವ ಮನಸನ್ನು ಮಾತ್ರ ರತ್ನಜಾ ಮಾಡಲಿಲ್ಲ. ಎಂಗೇಜ್‌ಮೆಂಟ್ ಮುಗಿಸಿ ವರ್ಷ ಕಳೆದರೂ ಈ ಪುಜೆ ಮದುವೆಯಾಗೋ ಗಳಿಗೆ ಕೂಡಿ ಬರುತ್ತಿಲ್ಲ ಎಂಬುದನ್ನು ತಿಳಿದ ಕೆಂಪರಾಜು "ನಿನ್ನ ಸಹವಾಸವೇ ಬೇಡ. ನಮ್ಮ ಹುಡುಗಿಗೆ ಬೇರೆ ಹುಡುಗನನ್ನು ನೋಡ್ಕೋತೀವಿ" ಎಂದು ರತ್ನಜನನ್ನು ಉಗಿದಟ್ಟಿದರು.


ಪತ್ರಕರ್ತರು ..... ಮಕ್ಕಳು!

ರತ್ನಜ ಮೊದಲಿನಿಂದಲೂ ಪತ್ರಕರ್ತರೊಂದಿಗೆ ವೈಷಮ್ಯ ...ಸಿಕೊಂಡುಬಂದಿದ್ದ. ತನ್ನ ಆಪ್ತರೊಂದಿಗೆ "ಪತ್ರಕರ್ತರು ...... ಮಕ್ಳು. ನನ್ನ ಸಿನಿಮಾ ವಿರುದ್ಧ ...ದಿಯುತ್ತಾರೆ" ಎಂದು ಕಾರಿಕೊಳ್ಳುತ್ತಿದ್ದ. ...ಹೊಂಗನಸು' ಚಿತ್ರದ ಹೀನಾಯ ಸೋಲಿನ ...ತರ "ನಾನು ಇನ್ನು ಮುಂದೆ ನನ್ನ ...ರ್ದೇಶನದ ಚಿತ್ರಗಳ ಪತ್ರಿಕಾಗೋಷ್ಠಿಗೆ ...ಹೋದೇ ಇಲ್ಲ" ಎಂದೂ ಶಪಥಗೈದಿದ್ದ. ...ದರೆ ಆತನ ಮೂರನೆ ಚಿತ್ರ 'ಪ್ರೇಮಿಸಂ' ...ಂಭವಾದಾಗ ತನ್ನ ಗುರು ಹಂಸಲೇಖಾ ...ಂದಿಗೆ ಬಂದು "ಇನ್ನು ಮುಂದೆ ನಾನು ...ಧ್ಯಮದವರನ್ನು ಕೀಳಾಗಿ ಕಾಣುವುದಿಲ್ಲ" ...ದು ಹೇಳಿ ಎಲ್ಲರ ಕ್ಷಮೆ ಯಾಚಿಸಿದ್ದ. ...ಸ್ ಕೂಡಾ ತನ್ನ ಶಿಷ್ಯನ ಪರ ವಕಾಲತ್ತು ವಹಿಸಿ ...ಬಿವಳಿಕೆ ಇಲ್ಲದ ಹುಡುಗನ ತಪ್ಪನ್ನು ಹೊಟ್ಟೆಗಾಕಿಕೊಂಡು ...ನ್ನಿಸಿ" ಎಂದು ವಿನಂತಿಸಿದ್ದರು.


ಅಜಯ್‌ಗೌಡ

ಪ್ರಾಣಮಿತ್ರ!

ರತ್ನಜಾ ಮೂಲತಃ ಮಂಡ್ಯದವನು. ಮಂಡ್ಯ ಮತ್ತು ...ಮ್ಮೂರಿನ ನಡುವೆ ಇರುವ ಹನ್ನೆರೆ ಎಂಬ ಸಣ್ಣ ಹಳ್ಳಿ ...ತನ ಜನ್ಮಸ್ಥಾನ. ಈತನಿಗೆ ಒಬ್ಬ ಅಣ್ಣ ...ತ್ತು ಇಬ್ಬರು ಅಕ್ಕಂದಿರೂ ಇದ್ದಾರೆ. ...ನ ಮೂಲ ಹೆಸರು ಹೆಚ್.ಪಿ.ಪ್ರಕಾಶ. ...ಸಲೇಖಾ ಈ ಶಿಷ್ಯ ಮಹಾಶಯನಿಗೆ ...ದೀಕ್ಷೆ ಕೊಟ್ಟಾಗ 'ರತ್ನಜಾ' ಎಂಬ ...ರನ್ನು ನಾಮಕರಣ ಮಾಡಿದರು.


ಹಂಸಲೇಖ

ಇಂಜಿನಿಯರಿಂಗ್ ಮುಗಿಸಿದ ನಂತರ ...ಎಸ್ ಪರೀಕ್ಷೆಗೆ ಕೂತು ಅಲ್ಲೂ ರತ್ನಜಾ ...ನಾಗಿದ್ದ. ಆತನಿಗೆ ಸರ್ಕಾರಿ ಪೋಸ್ಟಿಂಗ್ ...ಡಾ ಸಿಕ್ಕಿತ್ತು. ಆದರೆ ಈತನಿಗಂಟಿದ್ದ ...ನಿಮಾ ಹುಚ್ಚಿನಿಂದ ಸರ್ಕಾರದ ಕೆಲಸಕ್ಕೆ ...ಹೋಗಲಿಲ್ಲ. ಸೀದಾ ಗಾಂಧಿನಗರಕ್ಕೆ ಬಂದು ತಿರುಗಲು ...ರ ಮಾಡಿದ. ಎಸ್.ವಿ. ರಾಜೇಂದ್ರ ಸಿಂಗ್ ಬಾಬು ಅಸಿಸ್ಟೆಂಟ್ ಡೈರೆಕ್ಟರಾಗಿ ಸೇರಿಕೊಂಡು ಕುರಿಗಳು, ...ತಿಗಳು ಮತ್ತು ಕತ್ತೆಗಳು ಎಂಬ ಮೂರು ಅನಿಮಲ್ ...ಸ್‌ಗೆ ಕೆಲಸ ಮಾಡಿದ್ದ.

...ತನ್ನ ಸ್ನೇಹಿತ ಈ ಪಾಟಿ ಸಿನಿಮಾ ಹುಚ್ಚು ...ಸಿಕೊಂಡಿರುವುದನ್ನು ಕಂಡ ಅವನ ಪ್ರಾಣಮಿತ್ರ ಅಜಯ್ ... "ನಾನೇ ಸಿನಿಮಾ ನಿರ್ಮಿಸ್ತೀನಿ, ನೀನು ಡೈರೆಕ್ಟ್ ಮಾಡು" ಎಂದರು. ಅಜಯ್ ಗೌಡ ಶ್ರೀಮಂತ ಕುಟುಂಬದ ಹುಡುಗ. ತೀರಾ ಚಿಕ್ಕ ವಯಸ್ಸಿನಿಂದಲೂ ರತ್ನಜನ ಒಟ್ಟಿಗೇ ಓದಿದವರು. ಇವರ ತಂದೆ ಫಾರೆಸ್ಟ್ ಡಿಪಾರ್ಟ್‌ಮೆಂಟ್‌ನಲ್ಲಿ ಉನ್ನತ ಅಧಿಕಾರಿಯಾಗಿದ್ದವರು. ಅಜಯ್ ಗೌಡನಿಗೆ ದುಡ್ಡು ಸಂಪಾದನೆಗೆ ಹಲವಾರು ಉದ್ಯಮಗಳಿವೆ. ಮಲ್ಲೇಶ್ವರಂ ಸಂಪಿಗೆ ರಸ್ತೆಯಲ್ಲಿರುವ 'ರಸ ಹೋಟೆಲ್' ಕೂಡಾ ಇವರ ಮಾಲೀಕತ್ವದ್ದೇ. ರಾಜಾಜಿನಗರದಲ್ಲಿ ಸಣ್ಣ ರೂಮು ಮಾಡಿಕೊಂಡಿದ್ದ ರತ್ನಜಾನಿಗೆ ಬಸವೇಶ್ವರ ನಗರದಲ್ಲಿ ಮನೆಯನ್ನು ಕೊಟ್ಟು, ಓಡಾಡಲಿಕ್ಕೆ ಕಾರು ಕೊಡಿಸಿದ್ದೂ ಅಜಯ್‌ಗೌಡನೇ.

'ನೆನಪಿರಲಿ' ಸಿನಿಮಾ ನೂರು ದಿನ ಓಡಿದರೂ ಯಾರೂ ರತ್ನಜನನ್ನು ನಂಬಿ ಹೊಸ ಸಿನಿಮಾಕ್ಕೆ ಯಾರು ದುಡ್ಡು ಹಾಕಲಿಲ್ಲ. ಆಗ ಮತ್ತದೇ ಅಜಯ್ ಗೌಡ 'ಹೊಂಗನಸು'ಗೆ ಕಾಸು ಹಾಕಿದರು. 'ಹೊಂಗನಸು' ಅಟ್ಟರ್ ಫ್ಲಾಪ್ ಆದರೂ ಮುಂದಿನ 'ಪ್ರೇಮಿಸಂ'ಗೂ ಮತ್ತೆ ಬಂಡವಾಳ ಹೂಡಿದರು. ಎರಡೂ ಚಿತ್ರಗಳು ಅಜಯ್ ಗೌಡನ ಹಣವನ್ನು ಮುಂಡಾಮೋಚಿದರೂ ಅದರ ಬಗ್ಗೆ ರತ್ನಜಾ ತಲೆ ಕೆಡಿಸಿಕೊಳ್ಳಲಿಲ್ಲ. ಅದಕ್ಕೆ ತಕ್ಕಂತೆ ಅಜಯ್ ಗೌಡ ಕೂಡ ರತ್ನಜಾನ ಮುಂದಿನ ಚಿತ್ರವನ್ನೂ ನಿರ್ಮಿಸುವ ಭರವಸೆ ನೀಡಿದ್ದರು.

ಚಪ್ಪಲೀಲಿ ಹೊಡೆದಿದ್ದ....

ತಾನು ಮಹಾ ಸಾಚಾ ಎಂಬಂತೆ ಆಡುತ್ತಿದ್ದ ರತ್ನಜಾನ ಸೆಟ್‌ನಲ್ಲಿ ಯಾರಾದರೂ ಸ್ವಲ್ಪ ಪೋಲಿ ಮಾತಾಡಿದರೂ ಅವರ ಮೇಲೆ ಎಗರಿಬೀಳುತ್ತಿದ್ದ. ಆದರೆ ಒಳಗೊಳಗೆ ಆತನದ್ದು ವಕ್ರ ಬುದ್ಧಿ. ಅದು ಸಾಬೀತಾಗಿದ್ದು ಪ್ರೇಮ್-ರಕ್ಷಿತಾ ಮದುವೆಯಾದಾಗ 'ಥೂ ಇವರಿಬ್ಬರಿಗೂ ಮದುವೆ ಬೇರೆ ಕೇಡು' ಎಂದು ಆತ ಗೊಣಗಿದಾಗ. ಆಗ ಆತನ ಸ್ನೇಹಿತನೊಬ್ಬ "ನೀನು ಹೀಗೇ ಯಾವ ಹುಡುಗಿ ಹಿಂದೆ ಹೋಗ್ತೀಯೋ" ಎಂದಿದ್ದಕ್ಕೆ ಆತನ ಮುಖಾಮೂತಿ ನೋಡದೆ, ಸ್ನೇಹಿತ ಎಂದೂ ನೋಡದೆ ಅವನ ಮುಖಕ್ಕೆ ಚಪ್ಪಲಿಯಲ್ಲಿ ಹೊಡೆದುಬಿಟ್ಟಿದ್ದ.

ಈಗ ರತ್ನಜಾನ ಅಸಲೀ ಬಂಡವಾಳ ಬೀದಿಗೆ ಬಿದ್ದಿದೆ...

● ಅರುಣ್ ಕುಮಾರ್.ಜಿ
arunodayagc@gmail.com




ಆಕೆಯಿನ್ನೂ ಅಪ್ರಾಪ್ತೆ!

ನಿಜಕ್ಕೂ ಅಮೂಲ್ಯಳನ್ನು ರತ್ನಜಾ ಲೈಂಗಿಕವಾಗಿ ಬಳಸಿಕೊಂಡಿದ್ದರೆ ಕಾನೂನಿನ ಪ್ರಕಾರ ಅದರ ಸಂಪೂರ್ಣ ಆರೋಪ ರತ್ನಜಾ ಮೇಲೇ ಬೀಳುತ್ತದೆ. ಯಾಕೆಂದರೆ ಅಮೂಲ್ಯಳಿಗಿನ್ನೂ ಹದಿನೆಂಟು ವರ್ಷಗಳು ತುಂಬಿಲ್ಲ. ಅಪ್ರಾಪ್ತ ವಯಸ್ಸಿನ ಹೆಣ್ಣುಮಗಳ ಒಪ್ಪಿಗೆ ಪಡೆದು ಅವರೊಂದಿಗೆ ಲೈಂಗಿಕ ಕ್ರಿಯೆಯಲ್ಲಿ ತೊಡಗಿದರೂ ಕಾನೂನು ಅದನ್ನು ಅತ್ಯಾಚಾರ ಎಂದೇ ಪರಿಗಣಿಸುತ್ತದೆ.

ಒಂದುವೇಳೆ ರತ್ನಜಾ-ಅಮೂಲ್ಯ ಇಬ್ಬರೂ ಈ ಪ್ರಕರಣದಲ್ಲಿ ಭಾಗಿಯಾಗಿರುವುದು ನಿಜವಾದರೆ ಅವರಿಬ್ಬರೂ ಪರಸ್ಪರ ಒಪ್ಪಿಕೊಂಡು ಅಮೂಲ್ಯಳಿಗೆ ಹದಿನೆಂಟು ತುಂಬಿದ ನಂತರ ಸಹಬಾಳ್ವೆ ನಡೆಸುವುದೇ ಉತ್ತಮ.

ಹಾಗೂ‌ಮ್ಮ ರತ್ನಜಾ ಅಮೂಲ್ಯಳನ್ನು ಉಪಯೋಗಿಸಿಕೊಂಡಿದ್ದು ನ್ಯಾಯಾಂಗದ ದೃಷ್ಟಿಯಲ್ಲಿ ಸಾಬೀತಾದರೆ ರತ್ನ ಮಹಾರಾಜರಿಗೆ ಜೈಲೂಟ ಗ್ಯಾರಂಟಿ!

ಬೇಂದ್ರೆ ಬರೆದ ಕೆಟ್ಟ ಕವನ ವಾಮನ!



ವರಕವಿ ದ.ರಾ. ಬೇಂದ್ರೆಯವರು ವರಬೇಡಿ ಪಡೆದಂತಿರುವ ವಾಮನ ಬೇಂದ್ರೆಯವರು ತಮ್ಮ ತಂದೆಯವರ ಸಾಹಿತ್ಯ ಸಂಪತ್ತಿಗೆ ಮಾಡುತ್ತಿರುವ ಶ್ರಾದ್ಧ ನೋಡಿ ನಗಬೇಕೊ ಅಥವಾ ವಿಷಾದದಿಂದ ಸುಮ್ಮನಿರಬೇಕೊ ತಿಳಿಯುತ್ತಿಲ್ಲ.

ಈ ಹಿಂದೆ ಬೇಂದ್ರೆ ಪ್ರಕಟಿಸಿದ, ಅಪ್ಪಟ ಕಾವ್ಯದ ಕಂಪು ಬೀರುತ್ತಿದ್ದ ಸಂಕಲನಗಳಲ್ಲಿ ಕೆಲವನ್ನು ವಾಮನ ಬೇಂದ್ರೆ ಮತ್ತೆ ಪ್ರಕಟಿಸಿದ್ದಾರೆ. ಕಳೆದ ಶತಮಾನದಲ್ಲಿ ಪ್ರಕಟವಾಗುತ್ತಿದ್ದ ಮಗ್ಗಿ ಪುಸ್ತಕದಂತೆ ಕಾಣುವ ಈ ಕಾವ್ಯ ಸಂಕಲನಗಳ ಪೈಕಿ ನಮಗೆ ಸಿಕ್ಕಿದ 'ಮತ್ತೆ ಶ್ರಾವಣಾ' ಎಂಬ ಸಂಗ್ರಹ ನೋಡಿ ಆಘಾತವಾಯ್ತು.

ತೀರಾ ಉತ್ಸಾಹದ ಅಪ್ರಬುದ್ಧ ಹೈಸ್ಕೂಲಿನ ಕವಿ ಕೂಡ ತನ್ನ ಸಂಗ್ರಹವನ್ನು ಇಷ್ಟು ಕೆಟ್ಟದಾಗಿ ಪ್ರಕಟಿಸಲಾರ. 'ಮತ್ತೆ ಶ್ರಾವಣಾ' ಎಂಬ ಈ ಸಂಕಲನದ ಸಂಪಾದಕ ವಾಮನ ಬೇಂದ್ರೆ. ಈ ಸಾಲು ಮುಖಪುಟದಲ್ಲಷ್ಟೇ ಅಲ್ಲ, ಪ್ರತಿ ಪೇಜಿನ ಕೆಳಗೂ ಇದೆ. ಈ ಚೇಷ್ಟೆಯನ್ನು ಕ್ಷಮಿಸೋಣವೆಂದರೆ, ವರಕವಿ ಕಾವ್ಯ ಬರೆಯಲು ಕಾರಣ, ಸಂದರ್ಭ ಮತ್ತು ಕಳೆದ ಶತಮಾನದ ಆದಿಭಾಗದಲ್ಲಿ ಬರೆದ ಕವನಗಳೆಂದು ವಾಮನ ಟಿಪ್ಪಣಿ ಬರೆದಿದ್ದಾರೆ. ಇಂತಹ ಕವನಗಳು ನಿಜಕ್ಕೂ ಬೇಂದ್ರೆ ಬರೆದರೆ ಎಂಬ ಅನುಮಾನಗಳೆಲ್ಲಾ ಉಂಟಾಗುತ್ತಿರುವ ಈ ಕವನಗಳ ಬಗ್ಗೆ ಕಾವ್ಯದ ವಿಮರ್ಶಕರೆ ಹೇಳಬೇಕಿದೆ.

ನಲವತ್ತೆಂಟು ಪುಟದ ಈ ಸಂಕಲನಕ್ಕೆ ಡಾ. ಕೆ.ಎಸ್. ಶರ್ಮ ಎಂಟು ಪುಟದ ಮುನ್ನುಡಿ ಬರೆದಿದ್ದಾರೆ. ಅಲ್ಲದೆ ಇದೀಗ ತಾನೆ ಗೆರೆ ಎಳೆಯಲು ಕಲಿಯುತ್ತಿರುವವರು ಬರೆದಂತಹ ಚಿತ್ರಗಳಿವೆ. ಈ ಪುಸ್ತಕದಲ್ಲಿ ಆಡಿಕೊಳ್ಳಬಹುದಾದ ಬಹಳಷ್ಟು ಸಾಮಗ್ರಿಗಳಿವೆ. ಇದೆಲ್ಲವನ್ನು ಗಮನಿಸಿದರೆ ಒಬ್ಬ ಮಹಾಕವಿಗೆ ಇದಕ್ಕಿಂತಲೂ ಅಗೌರವ ತೋರಲು ಸಾಧ್ಯವಿಲ್ಲ ಅನ್ನಿಸುತ್ತದೆ.

ಧಾರವಾಡದ ಕಡೆಯ ಕವಿಗಳನ್ನು ಈ ವಾಮನ ಬೇಂದ್ರೆ ಬಗ್ಗೆ ಕೇಳಿದರೆ "ಬೇಂದ್ರೆ ಸುಮ್ಮಸುಮ್ಮನೆ ವಾಮನ ಎಂದು ಹೆಸರಿಟ್ಟಿಲ್ಲ ಕಂಡ್ರೀ. ಮಗನ ಮನೋಗತವನ್ನು ಅರಿತೆ ವಾಮನ ಎಂದು ಕರೆದರು" ಎಂದು ತಮಾಷೆ ಮಾಡುತ್ತಾರೆ.

ಮತ್ತೊಂದು ಸುದ್ದಿ ಕುವೆಂಪು ಯೂನಿವರ್ಸಿಟಿ ಕಡೆಯಿಂದ ಬಂದಿದೆ. ಕುವೆಂಪು ವಿವಿಯ ಪಠ್ಯ ಸಮಿತಿ ಬೇಂದ್ರೆ ಕವನವೊಂದನ್ನು ಬಳಸಿಕೊಳ್ಳುವ ಸಲುವಾಗಿ ವಾಮನ ಬೇಂದ್ರೆಗೆ ಪತ್ರ ಬರೆಯಿತಂತೆ. ಅದಕ್ಕೆ ವಾಮನರು "ವರಕವಿ ಬೇಂದ್ರೆಯವರ ಕವನವನ್ನು ನೀವು ಬಳಸಿಕೊಳ್ಳುವುದಾದರೆ, ಕವನದ ಪ್ರತಿ ಸಾಲಿಗೆ ಸಂಭಾವನೆ ಕೊಡುತ್ತೀರೊ, ಇಡೀ ಕವನಕ್ಕೆ ಸಂಭಾವನೆ ಕೊಡುತ್ತೀರೊ, ಇಲ್ಲ ಒಂದು ಪಂಕ್ತಿಗೆ ಇಷ್ಟೆಂದು ಕೊಡುತ್ತಿರೊ? ಯಾವುದಕ್ಕೂ ಪತ್ರ ಮುಖೇನ ತಿಳಿಸಿ. ಈ ಬಗ್ಗೆ ಫೋನ್ ಮಾಡಬೇಡಿ. ನನಗೆ ಕಿವಿ ಕೇಳಿಸುವುದಿಲ್ಲ" ಎಂಬ ಪತ್ರ ಬರೆದರಂತೆ.

ಕುವೆಂಪು ವಿವಿಯ ಕನ್ನಡ ವಿಭಾಗದ ಜನ ಈ ಪತ್ರವನ್ನು ನೋಡಿ ನಕ್ಕು ಸುಮ್ಮನಾದರಂತೆ.

ವರಕವಿಯ ಕಾವ್ಯವನ್ನ ಅವರ ಪುತ್ರ ಮಾರಿಕೊಳ್ಳುವುದರ ಬಗ್ಗೆ ಯಾರ ತಕರಾರೂ ಇಲ್ಲ, ಆದರೆ ಕವಿಯ ಸಾಲಿನ ಶ್ರೇಷ್ಠತೆಯನ್ನು ಕಾಪಾಡುವುದು ಬೇಡವೆ?

ಕನ್ನಡ ಕಾವ್ಯಲೋಕಕ್ಕೆ ಇನ್ನು ಏನೇನು ತಮಾಷೆಗಳು ಕಾದಿವೆಯೋ ಏನೊ? ಏಕೆಂದರೆ ಈಚೆಗೆ ಒಬ್ಬ ತರುಣ ಕವಿ ತನ್ನ ಕಾವ್ಯಶಕ್ತಿಯನ್ನೆಲ್ಲಾ ಬಸಿದು ಒಂದು ಕವನಸಂಕಲನ ಹೊರತಂದ. ಅದರಲ್ಲಿ 189 ಜನರಿಗೆ ಕೃತಜ್ಞತೆ ಹೇಳಿದ್ದ. ಜೊತೆಗೆ ಕನ್ನಡದ ಹೆಸರಾಂತ ಸಾಹಿತಿಗಳ ಸುಮಾರು 29 ಹಿನ್ನಡಿ, ಬೆನ್ನಡಿಗಳೂ ಇದ್ದವು.

ಇದೊಂದು ವಿಷಯದಲ್ಲಿ ವಾಮನರೇ ವಾಸಿ. ಏಕೆಂದರೆ ಈತ ಡಾ. ಕೆ.ಎಸ್. ಶರ್ಮರನ್ನು ಮಾತ್ರ ನೇಮಿಸಿಕೊಂಡಿದ್ದಾರೆ!

● ಬಿ.ಚಂ.

ನೆಲಮಂಗಲದ ಕ್ರಿಮಿನಲ್ಸ್ ಹಟ್ಟಿಮಂಜನ ಅಟ್ಟಹಾಸ


ಬಂಡೆಮಂಜ


ನೆಲಮಂಗಲದ ಹಂತಕ ಪಡೆಗಳಿಗೀಗ ಹೆಣ್ಣೂ ಬೇಕು ಹಣವೂ ಬೇಕು. ತಮ್ಮ ಮನೆ ಹೆಣ್ಣುಮಕ್ಕಳ ಮಾನ ರಕ್ಷಣೆಗೆ ನಿಂತವರು ಒಂದೋ ಕೊಲೆಯಾಗಬೇಕು ಅಥವಾ ಜೈಲಿಗೇ ಹೋಗಿ ಹಂತಕ ದೊರೆಗೆ ತಪ್ಪು ಕಾಣಿಕೆ ಸಲ್ಲಿಸಿ ಬರಬೇಕು. ನೆಲಮಂಗಲವೆಂಬ ಊರಿನ ಸರ್ವನಾಶಕ್ಕೆ ಇದಕ್ಕಿಂತ ಬೇಕೆ? ಊರಿಗೆ ಊರೇ ಕ್ರಿಮಿನಲ್ ನಶೆಗೆ ಬಿದ್ದಾಗ ಪೊಲೀಸರು ತಾನೇ ಏನು ಮಾಡಲು ಸಾಧ್ಯ? ಸದ್ಯಕ್ಕಿದು ನಿಲ್ಲುತ್ತಾ? ಇನ್ನೆಷ್ಟು ಹೆಣ ಬೀಳಬೇಕು?

ಕೊಲೆಗಡುಕ ಪಡೆಗಳ ಜಿದ್ದಾಜಿದ್ದಿ ಕೊನೆಗೆ ನೆಲಮಂಗಲವೆಂಬ ಊರನ್ನು ಯಾವ ಗತಿಗೆ ತಂದು ನಿಲ್ಲಿಸಿದೆ ಎಂಬುದಕ್ಕೆ ಇದೊಂದು ಸಣ್ಣ ಉದಾಹರಣೆಯಷ್ಟೇ.

ಯಾರೋ ಗೂರ್ಖಾ ಪುಂಡನೊಬ್ಬ ಲೋಕಲ್ ಕಾಲೇಜು ಕನ್ಯೆಯೊಬ್ಬಳನ್ನು ನಡುರಸ್ತೆಯಲ್ಲೇ ಕೈಹಿಡಿದು ಪೀಡಿಸಿದನೆಂದರೆ ಆಕೆಯ ತಂದೆಯಾದವನು ಅದನ್ನು ಪ್ರಶ್ನಿಸುವುದೇ ಇಲ್ಲಿ ಮಹಾಪರಾಧ! ಇನ್ನಾರೋ ಯುವತಿಯೊಬ್ಬಳಿಗೆ ರೌಡಿಯೊಬ್ಬ ಕಾಟ ಕೊಡುತ್ತಿದ್ದಾನೆಂದು ಆಕೆಯ ಚಿಕ್ಕಪ್ಪ ಅದೂ ಪೊಲೀಸ್ ಇಲಾಖೆಯಲ್ಲಿರುವಾತ ರಕ್ಷಣೆಗೆ ಬಂದನೆಂದರೆ ಆತನ ಪ್ರಾಣಕ್ಕೇ ಸಂಚಕಾರ!

ನೆಲಮಂಗಲದ ಹಂತಕ ಪಡೆಗಳಿಗೀಗ ಹೆಣ್ಣೂ ಬೇಕು ಹಣವೂ ಬೇಕು. ತಮ್ಮ ಮನೆ ಹೆಣ್ಣುಮಕ್ಕಳ ಮಾನ ರಕ್ಷಣೆಗೆ ನಿಂತವರು ಒಂದೋ ಕೊಲೆಯಾಗಬೇಕು ಅಥವಾ ಜೈಲಿಗೇ ಹೋಗಿ ಹಂತಕ ದೊರೆಗೆ ತಪ್ಪು ಕಾಣಿಕೆ ಸಲ್ಲಿಸಿ ಬರಬೇಕು.

ಇಷ್ಟಾಗ್ಯೂ ರೌಡಿಗಳ ಕಣ್ಣಿಗೆ ಬಿದ್ದ ಹುಡುಗಿಯರು ಬಚಾವು ಎಂದೇನಲ್ಲ!


ಚಿತ್ತನಗೆರೆ ಶಂಕರ

ಚಿತ್ತನಗೆರೆಯ ಕಿರಾತಕ ಶಂಕ್ರ, ಆತನ ಬಂಟ ಹಟ್ಟಿ ಮಂಜ, ಆತನ ಅಣ್ಣ ಹಟ್ಟಿಮುನಿ, ಯಶವಂತಪುರದ ಆಟೋ ಸ್ವಾಮಿ, ಜಯನಗರದ ಮಂಜ, ಹಟ್ಟಿ ಮಂಜನ ಬಾಮೈದ ಅರ್ಜುನ, ಮೆಂಟಲ್ ರಘು; ಹೀಗೆ ಸಾಗುವ ನೆಲಮಂಗಲದ ಸುಪಾರಿ ಹಂತಕರ ಪಟ್ಟಿಯಲ್ಲಿ ಅರ್ಧ ಮಂದಿ ಸದ್ಯ ಜೈಲಲ್ಲಿದ್ದರೆ ಇನ್ನರ್ಧ ನೆಲಮಂಗಲದಲ್ಲಿ ಹಾವಳಿಗಿಳಿದಿದ್ದಾರೆ. ಪಾಪ, ನೆಲ ಮಂಗಲದ ನಿಷ್ಠುರಿ ಡಿವೈಎಸ್‌ಪಿ ಧರಣೇಂದ್ರ ಮತ್ತು ಇನ್ಸ್‌ಪೆಕ್ಟರ್ ಯತಿರಾಜು ಅದೆಷ್ಟು ಅಂತ ರೌಡಿಗಳನ್ನು ಎಳೆತಂದು ರಿಪೇರಿ ಮಾಡುತ್ತಾರೆ?

ಊರಿಗೆ ಊರೇ ಕುಲಗೆಟ್ಟು ನಿಂತಾಗ ಒಂದೋ ರೌಡಿಯಾಗಬೇಕು ಅಥವಾ ರೌಡಿಗಳಿಗೆ ಕಪ್ಪ ತೆತ್ತು ತೆಪ್ಪಗಿರಬೇಕು. ಇದು ಬಿಟ್ಟು ಮೂರನೇ ಸಾಧ್ಯತೆಯೆಂಬುದು ಇಲ್ಲವೇ ಇಲ್ಲ. ಇದಕ್ಕೆ ತಾಜಾ ಉದಾಹರಣೆಯೆಂತಿದ್ದರೆ ಅದು ಪ್ರಿಂಟರ್ ಬಸವರಾಜು. ಆತನ ಒಬ್ಬಳೇ ಮಗಳು ಸುಮನ (ಹೆಸರು ಬದಲಿಸಿದೆ) ಎಂಬಾಕೆ ದಾಸನಪುರದ ಕಾಲೇಜಿಗೆ ಹೋಗುತ್ತಾಳೆ. ಈಕೆಯ ಬೆನ್ನಿಗೆ ಬಿದ್ದವನು ನಗರೂರ್ ಕಾಲೋನಿಯ ಶೇರ್ ಬಹಾದ್ದೂರ್ ಎಂಬಾತನ ಮಗ ಕುಮ್ಮರಾಜ್ ಎಂಬ ಗೂರ್ಖಾ ಪುಂಡ. ಕಾಲೇಜಿಗೆ ಹೋಗಿ ಬರುವಾಗೆಲ್ಲ ಪೀಡಿಸುತ್ತಿದ್ದ ಕುಮ್ಮರಾಜ್ ಏಪ್ರಿಲ್ 20 ರಂದು ಹುಚ್ಚೆದ್ದು ನಡುರಸ್ತೆಯಲ್ಲೇ ಸುಮನಳ ಕೈಹಿಡಿದು ಎಳೆದ. ಕಂಗಾಲಾದ ಹುಡುಗಿ ಬೇರೆ ಗತಿಯಿಲ್ಲದೇ ತನ್ನ ತಂದೆಗೆ ಹೇಳಿಕೊಂಡು ಕಣ್ಣೀರಿಟ್ಟಿದ್ದಾಳೆ.

ಯಾವ ತಂದೆ ತಾನೇ ಕೈಕಟ್ಟಿ ಕೂರಲು ಸಾಧ್ಯ? ರೊಚ್ಚಿಗೆದ್ದ ಬಸವರಾಜ್ ಗೂರ್ಖಾ ಪುಂಡನನ್ನು ಹಿಡಿದು ನಾಲ್ಕು ಬಾರಿಸಿಬಿಟ್ಟ. ಅಲ್ಲಿಗೆ ಕಾಟ ತಪ್ಪಿ ತೆಂದೇ ಬಸವರಾಜು ಲೆಕ್ಕ ಹಾಕಿದ್ದ. ಆದರೆ ಒದೆ ತಿಂದ ಗೂರ್ಖಾ ಪುಂಡ ಚಿತ್ತನಗೆರೆ ಶಂಕ್ರನ ಬಂಟ ಹಟ್ಟಿ ಮಂಜನ ಬಾಮೈದ ಅರ್ಜುನನ ಛೇಲಾ. ಇದಾಗಿ ವಾರಕ್ಕೇ ಬಸವರಾಜು ಮೊಬೈಲಿಗೆ ಜೈಲಿನಿಂದ ಕರೆ ಬಂದಿದೆ. ಅತ್ತಿಂದ ಆವಾಜು ಹಾಕಿದ ಹಟ್ಟಿ ಮಂಜ 'ನಮ್ ಹುಡುಗನ ಮೇಲೆ ಕೈ ಮಾಡೋಕ್ಕೆ ಎಷ್ಟಯ್ಯಾ ಧೈರ್ಯ ನಿನಗೆ? ನೀನೂ ನಿನ್ನ ಮಗಳೂ ಉಳೀಬೇಕು ಅಂದ್ರೆ... ಮುಚ್ಕೊಂಡು ಎರಡು ಲಕ್ಷ ತಂದುಕೊಡು. ಇಲ್ಲಾಂದ್ರೆ, ಗೊತ್ತಲ್ಲ? ಅಂಥಾ ಯಡಿಯೂರಪ್ಪನ ಗನ್‌ಮ್ಯಾನ್‌ನನ್ನೇ ಬಿಟ್ಟಿಲ್ಲ, ನಿನ್ನ ಉಳಿಸ್ತೀನಾ?.....'

ಯಾವತ್ತು ಹಟ್ಟಿ ಮಂಜನ ಧಮಕಿ ಬಂತೋ ಕುಸಿದುಬಿದ್ದ ಬಸವರಾಜು ಪರಪ್ಪನ ಅಗ್ರಹಾರ ಜೈಲಿಗೇ ಹೋಗಿ ಒಂದೂವರೆ ಲಕ್ಷ ಕೊಟ್ಟು ಬಂದ. ತನ್ನ ಮಗಳನ್ನು ಉಳಿಸಿಕೊಳ್ಳಲು ಆತನಿಗುಳಿದದ್ದು ಇದೊಂದೇ ದಾರಿ.

ಬಸವರಾಜು ಪೊಲೀಸ್ ರಕ್ಷಣೆ ಕೋರಬಹುದಿತ್ತು, ಆದರೆ ಹಟ್ಟಿ ಮಂಜನ ಗ್ಯಾಂಗ್ ಕೆಲದಿನಗಳ ಹಿಂದಷ್ಟೇ ಪೊಲೀಸ್ ಪೇದೆಯೊಬ್ಬನನ್ನೇ ಅರೆಜೀವ ಮಾಡಿಹಾಕಿತ್ತು, ಅದೂ ಕೂಡ ಹುಡುಗಿ ವಿಷಯಕ್ಕೆ. ಹಟ್ಟಿ ಮಂಜನ ಅಣ್ಣ ಮುನಿರಾಜು ಹಿಮಾಲಯ ಡ್ರಗ್ ಕಂಪೆನಿಯ ಕೆಲಸಗಾರ ಮಾರಯ್ಯನ ಮಗಳು ರೇಷ್ಮಾಳನ್ನು ಪೀಡಿಸುತ್ತಿದ್ದ. ಇದು ಗೊತ್ತಾಗಿ ಮಾರಯ್ಯ ತನ್ನ ಮಗಳನ್ನು ಹೊರಕ್ಕೆ ಕಳಿಸುವುದನ್ನೇ ನಿಲ್ಲಿಸಿಬಿಟ್ಟ. ನಿನ್ನ ಮಗಳನ್ನು ಕೆಲಸಕ್ಕೆ ಕಳಿಸದೇ ಹೋದ್ರೆ ನಿನ್ನನ್ನೇ ಎತ್ತುತ್ತೀವಿ ಗೊತ್ತಾಯ್ತಾ? ಎಂದು ಹಟ್ಟಿ ಮಂಜನ ಅಣ್ಣ ಫೋನ್ ಮಾಡಿ ಹಾವಳಿಯಿಟ್ಟ. ಇದು ಮಾರಯ್ಯನ ತಮ್ಮ ಪೊಲೀಸ್ ಪೇದೆ ಗಂಗರಾಜ್‌ಗೆ ಗೊತ್ತಾಗಿದೆ. ಗಂಗರಾಜ್ ಮುಖ್ಯಮಂತ್ರಿ ಯಡಿಯೂರಪ್ಪನವರ ಬೆಂಗಾವಲು ಪಡೆಯಲ್ಲಿ ಗನ್ ಮ್ಯಾನ್ ಆಗಿದ್ದ. ತಕ್ಷಣವೇ ಜೈಲಲ್ಲಿದ್ದ ಹಟ್ಟಿ ಮಂಜನಿಗೆ ಗಂಗರಾಜು ಫೋನ್ ಮಾಡಿದ್ದೇ ನಮ್ಮ ಮನೆ ಹೆಣ್ಣುಮಕ್ಕಳ ವಿಷಯಕ್ಕೇನಾದ್ರೂ ಬಂದರೆ ನಿನ್ನನ್ನ ಸುಮ್ಮನೇ ಬಿಡಲ್ಲ ಎಂದು ಬಯ್ದಿದ್ದಾನೆ.


ಚಿತ್ತನಗೆರೆ ಸೀನ

ಅಷ್ಟೇ; ಹಾಗೇ ಗಂಗರಾಜು ಗದರಿಸಿದ ಕೆಲವೇ ಗಂಟೆಗಳಲ್ಲಿ ಶಂಕ್ರನ ಹುಡುಗರು ಗಂಗರಾಜು ಮೇಲೆ ಅಟ್ಯಾಕ್ ಮಾಡಿ ಸಿಕ್ಕಸಿಕ್ಕಲ್ಲಿ ಕತ್ತರಿಸಿದ್ದರು. ಸಕಾಲದಲ್ಲಿ ಆಸ್ಪತ್ರೆ ಸೇರದೇ ಹೋಗಿದ್ದರೆ ಗಂಗರಾಜು ಬದುಕಿರುತ್ತಿರಲಿಲ್ಲ. ಗಂಗರಾಜು ಚಲನವಲನದ ಬಗ್ಗೆ ಆವತ್ತು ಹಟ್ಟಿ ಮಂಜನ ಗ್ಯಾಂಗಿಗೆ ಚಿತ್ತನಗೆರೆಯ ಹಟ್ಟಿ ಹುಡುಗರೇ ಮಾಹಿತಿ ಕೊಟ್ಟಿದ್ದರು. ಇಷ್ಟಾಗ್ಯೂ ಗಂಗರಾಜು ಮೇಲೆ ದಾಳಿ ನಡೆಸಿದ ರೌಡಿಗಳ್ಯಾರೂ ಈತನಕ ಸಿಕ್ಕುಬಿದ್ದಿಲ್ಲ. ಮುಖ್ಯಮಂತ್ರಿಗೆ ಗನ್‌ಮ್ಯಾನ್ ಆಗಿದ್ದವನನ್ನೇ ಬಿಡಲಿಲ್ಲ ಎಂದ ಮೇಲೆ ಪ್ರಿಂಟರ್ ಬಸವರಾಜುಗೆ ತನ್ನ ಮಗಳನ್ನು ಉಳಿಸಿಕೊಳ್ಳಲು ಬೇರೆ ದಾರಿಯಾದರೂ ಎಲ್ಲಿದ್ದೀತು?

ಇದು ನೆಲಮಂಗಲದ ಕ್ರಿಮಿನಲ್ ಗ್ಯಾಂಗುಗಳ ಅಟ್ಟಹಾಸಕ್ಕೆ ಒಂದೆರಡು ನಿದರ್ಶನಗಳಷ್ಟೇ. ಚಿತ್ತನಗೆರೆ ಸೀನನ ಗ್ಯಾಂಗ್ ಛಿದ್ರಗೊಂಡು ಆತನ ಬಲಗೈ ಬಂಟನಂತಿದ್ದ ಚಿತ್ತನಗೆರೆ ಶಂಕ್ರನೇ ತಿರುಗಿಬಿದ್ದ. ಆತನಕ ಚಿತ್ತನಗೆರೆಯ ಕಾಂಗ್ರೆಸ್ ಕುರುಬರನ್ನು ಒಬ್ಬೊಬ್ಬರಾಗಿ ಮುಗಿಸಿ ಹಾಕಿದ ಸೀನ ಮತ್ತು ಶಂಕ್ರರ ರಕ್ತದಾಹಕ್ಕೆ ಕೊನೆಗೆ ಸೀನನ ಅಕ್ಕನ ಗಂಡ ಹ್ಯಾಡಾಳು ದೇವಿಯೇ ಬಲಿಯಾದ. ದೇವಿ ಅಲಿಯಾಸ್ ದೇವೇಂದ್ರಪ್ಪನನ್ನು ಮುಗಿಸಿದ್ದು ಸೀನನೇ ಸಾಕಿ ಬೆಳೆಸಿದ್ದ ರಣಪಾತಕಿ ಶಂಕ್ರ!

ಚಿತ್ತನಗೆರೆಯ ಕುರುಬರ ವಿರುದ್ಧ ಶುರುವಾದ ರಕ್ತಪಾತ ಒಂದು ಹಂತಕ್ಕೆ ಬಂದು ನಿಂತಿತೆನ್ನುವಾಗಲೇ ಸೀನ ಮತ್ತು ಶಂಕ್ರರ ಜಿದ್ದಾಜಿದ್ದಿ ಶುರುವಾಯಿತು. ಹ್ಯಾಡಾಳು ದೇವಿಯ ಮಗ ಹರ್ಷ, ಸೀನನ ಅಕ್ಕನ ಮಗ ಬಂಡೆ ಮಂಜ, ಚಿತ್ತನಗೆರೆ ಅನಂತ, ಬೀರ, ಹುತ್ತುಕುಂಟೆ ರಾಜ; ಮುಂತಾದವರೆಲ್ಲ ಸೀನನ ಬೆನ್ನಿಗೆ ನಿಂತರೆ; ಹಟ್ಟಿ ಮಂಜ, ಯಶವಂತಪುರದ ಆಟೋ ಸ್ವಾಮಿ, ಜಯನಗರದ ಮಂಜ, ಹಟ್ಟಿ ಮುನಿ, ರಾಬರಿ ರಘು, ಮೆಂಟಲ್ ರಘು, ಪುನೀತ, ವಿನೋದ, ಪ್ರವೀಣ, ಬಾಂಬ್ ಜಗ್ಗನ ತಮ್ಮ ಶರವಣ, ಚೀಣಿಮೂರ್ತಿ ಮುಂತಾದವರೆಲ್ಲ ಶಂಕ್ರನ ಜೊತೆಯಾದರು.

ನೆಲಮಂಗಲದ ಹಂತಕರ ವಿಷಯದಲ್ಲಿ ಬೆಂಗಳೂರು ಅಂಡರ್‌ವರ್ಲ್ಡೇ ಇಬ್ಭಾಗಗೊಂಡಿತ್ತು. ಕಡಬಗೆರೆಯ ಪಾಯ್ಸನ್ ರಾಮನ ಪಡೆ ಶಂಕ್ರನ ಬೆನ್ನಿಗೆ ನಿಂತರೆ ಸೀನ ಸೈಲೆಂಟ್ ಸುನೀಲನ ಜೊತೆ ಕೈಜೋಡಿಸಿಬಿಟ್ಟ. ಈ ಎರಡೂ ಗ್ಯಾಂಗ್‌ಗಳು ತಮ್ಮತಮ್ಮಲ್ಲೇ ಬಡಿದಾಡಿಕೊಂಡಿದ್ದರೆ ಅದು ಬೇರೆಯದೇ ಕತೆಯಾಗುತ್ತಿತ್ತು. ಆದರೆ ಗ್ಯಾಂಗ್ ಸಾಕಲು ದುಡ್ಡು ಬೇಕಲ್ಲ; ನೆಲಮಂಗಲದ ಪ್ರತಿಯೊಂದು ಲ್ಯಾಂಡ್ ಡೀಲು, ಕಾಲೇಜು ಹುಡುಗರ ಕಚ್ಚಾಟ, ಹುಡುಗೀರ ಖಯಾಲಿ, ಗಂಡ ಹೆಂಡತಿ ಜಗಳ; ಹೀಗೆ ಪ್ರತಿಯೊಂದಕ್ಕೂ ಶಂಕ್ರ ಕೈ ಹಾಕತೊಡಗಿದ.

ಸೈಕಲ್ ರವಿಯ ಬಂಟ ಶ್ರೀರಾಂಪುರದ ಪೂಣೆಕಣ್ಣನನ್ನು ಕೊಂದದ್ದು ಯಾರು?

ನಾವು ಮರ್ಡರ್ ಆಗೋದಂತೂ ಗ್ಯಾರಂಟಿ. ಸುಂಸುಮ್ನೆ ಸಾಯೋಕ್ಯಾಗುತ್ತಾ? ಮೊದಲು ಸೀನನ್ನ ತೆಗೀತೀವಿ. ನಂತ್ರ ದೇವಿ ಮಗ ಹರ್ಷನ್ನ ಮುಗಿಸ್ತೀವಿ. ಆನಂತ್ರ ಆ ಬಂಡೆ ಮಂಜ ಇದ್ದಾನಲ್ಲ–ಅವನನ್ನ ಮುಗಿಸ್ದೇ ಬಿಡ್ತೀವಾ? ಹೌದು, ನಾನೇ ಪುಟ್ಟ ಚನ್ನಪ್ಪನಿಗೆ ಆವಾಜ್ ಹಾಕಿ ಜೈಲಿಗೇ ದುಡ್ಡು ತರಿಸ್ಕೊಂಡಿದ್ದೀನಿ. ಯಾಕೆ ಗೊತ್ತಾ? ಸೀನನ್ನ ಮುಗಿಸೋದಕ್ಕೆ ಬಾಂಬುಗಳು ಬೇಕಲ್ವಾ? ಹೇಗಿದ್ರೂ ಸೀನ ಮುಂದಿನ ತಿಂಗಳು ರಿಲೀಜಾಗ್ತಾನೆ? ಅವ್ನ ಜೈಲಿಂದ ಹೊರಗೆ ಕಾಲಿಟ್ಟಿದ್ದೇ ತಡ ಜೈಲಿನ ಬಾಗಿಲಲ್ಲೇ ಬಾಂಬ್ ಹಾಕಿ ಮುಗಿಸ್ತೀವಿ....!

ಇದು ಜೈಲಲ್ಲಿ ಕೂತು ಕಂಡಕಂಡವರಿಗೆ ಫೋನ್ ಮಾಡಿ ಹಟ್ಟಿ ಮಂಜ ಹೂಂಕರಿಸುತ್ತಿರುವ ರೀತಿ. ನೆಲಮಂಗಲದ ಗ್ಯಾಂಗ್‌ವಾರ್ ಎಂಥಾ ಮಾರಕ ಸ್ಥಿತಿ ಮುಟ್ಟಿದೆಯೆಂಬುದಕ್ಕೆ ಪುರಾವೆ ಕೂಡ. ಸದ್ಯ ಶಂಕ್ರ ಮತ್ತು ಸೀನ ಇಬ್ಬರೂ ಜೈಲಲ್ಲಿದ್ದಾರೆ. ತನ್ನ ಅಕ್ಕನ ಗಂಡ ಹ್ಯಾಡಾಳು ದೇವಿಯನ್ನು ಮುಗಿಸಿದ ಶಂಕ್ರನನ್ನು ಸೀನನ ಗ್ಯಾಂಗ್ ಯಾವುದೇ ಕಾರಣಕ್ಕೂ ಬಿಡುವುದಿಲ್ಲ ಎಂಬುದು ಇಡೀ ನೆಲಮಂಗಲಕ್ಕೇ ಖಾತರಿಯಾಗಿದೆ. ಅದು ಗೊತ್ತಿದ್ದೇ ಶಂಕ್ರನ ಗ್ಯಾಂಗ್ ಕನಿಷ್ಠ ತಾವು ಉಳಿಯುವುದಕ್ಕಾದರೂ ಸೀನನ ಪಡೆಯನ್ನು ನಿಕಾಲಿ ಮಾಡಲೇಬೇಕು. ಇಬ್ಬರಿಗೂ ತೀರದ ದುಷ್ಮನಿ.

ಮೊನ್ನೆ ಪಂಚಾಯ್ತಿ ಚುನಾವಣೆಯಲ್ಲಿ ಚಿತ್ತನಗೆರೆಯ ನಾಲ್ಕಕ್ಕೆ ನಾಲ್ಕೂ ಸ್ಥಾನಗಳು ಸೀನನ ಪಾಲಾದ ಮೇಲೆ ಸೋತ ಶಂಕ್ರನ ಹತಾಶೆ ಮುಗಿಲು ಮುಟ್ಟಿದೆ. ಅದಕ್ಕೆ ಮುಖ್ಯ ಕಾರಣ ಅಂತಿದ್ದರೆ ಅದು ಬೆಂಗಳೂರಿನ ಶ್ರೀರಾಂಪುರದಲ್ಲಿ ಕಳೆದ ವಾರವಷ್ಟೇ ನಡುರಸ್ತೆಯಲ್ಲಿ ಹೆಣವಾದ ಪೂಣೆಕಣ್ಣಾ ಅಲಿಯಾಸ್ ಚಿಕ್ಕನ ಕಣ್ ರವಿ.


ಸೈಕಲ್ ರವಿ

ಈತ ಚಿತ್ತನಗೆರೆ ಶಂಕ್ರನ ಬಲಗೈ ಬಂಟನಂತಿದ್ದ, ಶಂಕ್ರನ ಪರವಾಗಿ ಸುಪಾರಿ ಪಡೆದು ಕುರುಬರ ನಾಯಕ ಪುಟ್ಟಸಂಪಯ್ಯನನ್ನು ಮುಗಿಸಿದ್ದು ಇದೇ ಪೂಣೆಕಣ್ಣಾ. ಅದೇನು ಒಳನಂಟೋ ಗೊತ್ತಿಲ್ಲ, ಹೀಗೆ ಶಂಕ್ರನಿಂದ ಸುಪಾರಿ ಪಡೆದು ಪುಟ್ಟಸಂಪಯ್ಯನನ್ನು ಮುಗಿಸಿದ ಪೂಣೆಕಣ್ಣಾ ಬೆಂಗಳೂರಿನ ವಿಷಯಕ್ಕೆ ಬಂದರೆ ಸೈಕಲ್ ರವಿ ಮತ್ತು ಮುಲಾಮ ಇಬ್ಬರಿಗೂ ಪರಮಾಪ್ತ. ಶ್ರೀರಾಂಪುರದ ನೀಲಗಿರಿ ಪಾಪಣ್ಣ ಲೇಔಟಿನಲ್ಲಿ ಈ ಪೂಣೆಕಣ್ಣಾ ಮತ್ತು ಕಪ್ಪೆ ರಾಮ ಇಬ್ಬರೂ ಸೇರಿಕೊಂಡು ಮುಲಾಮನನ್ನು ಮೆರೆದಾಡಿಸಿದ್ದರು. ಹಾಗೇ ಸೈಕಲ್ ರವಿ ಜೈಲು ಪಾಲಾದಾಗಲೆಲ್ಲ ಜೈಲಿಗೆ ಬಿರಿಯಾನಿ ಸರಬರಾಜು ಮಾಡಿಕೊಂಡಿದ್ದು, ಸೈಕಲ್ ರವಿಯ ಬೇಕುಬೇಡಗಳನ್ನೆಲ್ಲ ನಿಭಾಯಿಸುತ್ತಿದ್ದದ್ದು ಇದೇ ಪೂಣೆಕಣ್ಣಾ.


ಕತ್ರಿಗುಪ್ಪೆ ಲಿಂಗ

ಇಂಥಾ ಪೂಣೆಕಣ್ಣಾ ಶ್ರೀರಾಂಪುರದಿಂದ ಯಾವುದೋ ಕಾಲಕ್ಕೆ ನಾಪತ್ತೆಯಾದವನು ಮೇ 27 ಕ್ಕೆ ಇದ್ದಕ್ಕಿದ್ದಂತೆ ಶ್ರೀರಾಂಪುರದ ತನ್ನ ಮನೆಯಲ್ಲಿ ಪ್ರತ್ಯಕ್ಷನಾಗಿದ್ದ. ಅದೆಷ್ಟು ಬೇಗ ದುಷ್ಮನ್‌ಗಳಿಗೆ ಸುದ್ದಿ ಮುಟ್ಟಿತ್ತೋ ಗೊತ್ತಿಲ್ಲ; ಬೆಳಗ್ಗೆ ಹತ್ತು ಗಂಟೆಯ ಹೊತ್ತಿಗೆ ತನ್ನ ಮನೆ ಬಿಟ್ಟು ಶ್ರೀರಾಂಪುರದ ಆರನೇ ಕ್ರಾಸಿಗೆ ಬಂದ ಪೂಣೆಕಣ್ಣಾ ರವಿಯನ್ನು ರೌಡಿಪಡೆಯೊಂದು ಅಟ್ಯಾಕ್ ಮಾಡಿದ್ದೇ ನಡುರಸ್ತೆಯಲ್ಲೇ ಕೊಚ್ಚಿ ಹಾಕಿದೆ.

ಇದಾಗಿ ವಾರಕ್ಕೇ ತಾವೇ ಚಿಕ್ಕನಕಣ್ಣ ರವಿಯನ್ನು ಮುಗಿಸಿದ್ದೆಂದು ಐದು ಮಂದಿ ಶ್ರೀರಾಂಪುರ ಪೊಲೀಸರಿಗೆ ಸಿಕ್ಕಿಬಿದ್ದಿದ್ದಾರೆ. ಬಾಬು, ಭೂತ್ ಕುಟ್ಟಿ, ಸೆಲ್ವಾ, ಶರವಣ, ಮುರುಗನ್ ಎಂಬ ಈ ಐದೂ ಮಂದಿ ಹಂತಕರು ಇದೇ ಶ್ರೀರಾಂಪುರದ ಹಳೇ ರೌಡಿಗಳಾದ ಗಂಗಾ ಮತ್ತು ಲೋಗ ಎಂಬುವವರ ಶಿಷ್ಯರು. ಸದ್ಯ ಗಂಗಾ–ಲೋಗ ಎಸ್ಕೇಪಾಗಿದ್ದಾರೆ. ನಮಗೂ ಪೂಣೆಕಣ್ಣನಿಗೂ ಹಳೇ ಜಿದ್ದಿತ್ತು ಅದಕ್ಕೇ ಮುಗಿಸಿದೆವು ಎಂದು ಸಿಕ್ಕಿಬಿದ್ದವರು ಹೇಳುತ್ತಾದರೂ ಅದನ್ನು ಶ್ರೀರಾಂಪುರ ಪೊಲೀಸರು ನಂಬುತ್ತಿಲ್ಲ.

ಪೂಣೆಕಣ್ಣನ ಹತ್ಯೆ ಕತ್ರಿಗುಪ್ಪೆ ಲಿಂಗನ ಹತ್ಯೆಗೆ ಪ್ರತೀಕಾರವಾಗಿ ಸೈಕಲ್ ರವಿ ವಿರುದ್ಧ ಲಿಂಗನ ಶಿಷ್ಯ ಮಚ್ಚು ಮುನಿಯ ಕೈಗೊಂಡ ಪ್ರತೀಕಾರವಾ? ಅಥವಾ ಚಿತ್ತನಗೆರೆ ಶಂಕ್ರನ ವಿರುದ್ಧ ಸೀನ ಉರುಳಿಸಿದ ಮೊದಲ ವಿಕೆಟ್ಟಾ? ಅಥವಾ ಎರಡೂ ಸತ್ಯವಾ?

ಏಕೆಂದರೆ ಚಿತ್ತನಗೆರೆ ಸೀನ ಈಗ ಸೈಲೆಂಟ್ ಸುನೀಲನ ಜೊತೆ ದೋಸ್ತಿ ಸಾಧಿಸಿದ್ದಾನೆ. ಸೈಲೆಂಟ್ ಸುನೀಲನ ಶಿಷ್ಯ ಲೇಔಟ್ ಗುಂಡನೇ ಪೂಣೆಕಣ್ಣನ ಹತ್ಯೆಗೆ ಸೂತ್ರಧಾರನೆಂಬುದು ಇಡೀ ಶ್ರೀರಾಂಪುರದ ಗುಲ್ಲು. ಕತ್ರಿಗುಪ್ಪೆ ಲಿಂಗನ ಶಿಷ್ಯರು ಕೂಡ ಕೊರಂಗು–ಸುನೀಲನ ಸಿಂಡಿಕೆಟ್ಟಿನಲ್ಲಿದ್ದಾರೆ. ಹಾಗೆ ಚಿತ್ತನಗೆರೆ ಶಂಕ್ರ ಸೈಕಲ್ ರವಿ–ಮುಲಾಮರ ಸಿಂಡಿಕೇಟ್ಟಿನ ಪಾಯ್ಸನ್ ರಾಮನ ಜೊತೆ ಕೈ ಜೋಡಿಸಿದ್ದಾನೆ. ನೆಲಮಂಗಲದ ಜಿದ್ದಾಜಿದ್ದಿ ಹೇಗೆ ಬೆಂಗಳೂರು ಪಾಪಕೂಪದೊಳಗೆ ತಾಸು ಹೊಕ್ಕಾಗಿದೆ ಎಂಬುದಕ್ಕೆ ಇದು ನಿದರ್ಶನವಷ್ಟೆ.

ಹ್ಯಾಡಾಳು ದೇವಿ ಹತ್ಯೆಗೆ ಪ್ರತೀಕಾರ ಕೈಗೊಳ್ಳಲು ಚಿತ್ತನಗೆರೆ ಸೀನನ ಪಡೆ ರೌಂಡಿಂಗ್ ಆರಂಭಿಸಿ ಯಾವುದೋ ಕಾಲವಾಗಿದೆ. ದೇವಿ ಹತ್ಯೆಯಲ್ಲಿದ್ದ ಮತ್ತೊಬ್ಬ ಆರೋಪಿ ಯತೀಶ ಈಗಾಗಲೇ ಜೈಲಿಂದ ಹೊರಬಿದ್ದಿದ್ದಾನೆ. ಬಹುಶಃ ಆತನೇ ಮುಂದಿನ ಬಲಿಯಾ? ಹಾಗೊಮ್ಮೆ ಹಟ್ಟಿ ಮಂಜ ಕೂಡ ಜೈಲಿಂದ ಹೊರಬಿದ್ದನೆಂದರೆ ಸೀನನ ಗ್ಯಾಂಗ್ ಆತನ ಬೇಟೆಗೆ ಖಂಡಿತಾ ನಿಲ್ಲುತ್ತದೆ. ಅದು ಗೊತ್ತಿದ್ದೇ ಹಟ್ಟಿ ಮಂಜ ಮತ್ತು ಶಂಕ್ರ ಸೇರಿ ತಮಿಳುನಾಡಿನ ಜಗ್ಗನಿಂದ ಬಾಂಬುಗಳನ್ನು ತರಿಸಿದ್ದಾರಂತೆ. ಹಾಗೇ ಜಗ್ಗನಿಂದ ಬಾಂಬ್ ತಂದುಕೊಟ್ಟವನು ಇದೇ ನೆಲಮಂಗಲದ ಶರು ಅಲಿಯಾಸ್ ಶರವಣ. ಈತ ಜಗ್ಗನ ತಮ್ಮ.

ಮುಂದಿನ ತಿಂಗಳು 27 ಕ್ಕೆ ಸೀನ ಜೈಲಿಂದ ಬಿಡುಗಡೆಯಾಗುವುದು ಗ್ಯಾರಂಟಿಯಂತೆ. ಬಾಂಬುಗಳ ಗತಿ ಏನಾಗುತ್ತೊ? ಅದೆಷ್ಟು ರಕ್ತ ಹರಿಯುತ್ತೊ?

ಏಕೆಂದರೆ ಶಂಕ್ರನಿಗೆ ದುಡ್ಡಿನ ಬರ. ಚಿತ್ತನಗೆರೆ ನಾಗಲಿ, ಆತನ ಅಕ್ಕನ ಮಗ ಹರ್ಷ ಮತ್ತು ಟೆ ಮಂಜನಿಗಾಗಲಿ ದುಡ್ಡೂ ಕಾಸಿಗೆ ಬರವಿಲ್ಲ. ಂದಿರ ಆಸ್ತಿಯೇ ಬೇಕಾಬಟ್ಟೆ ಯಿದೆ. ಆದರೆ ಕ್ರನಿಗಾಗಲಿ, ಆತನ ಶಿಷ್ಯಂದಿರಿಗಾಗಲಿ ರ್ಜಿತವೆಂದು ಏನೇನೂ ಇಲ್ಲ. ದುಡ್ಡಿನ ದಾಹಕ್ಕೆ ಗುರು ಸೀನನ ವಿರುದ್ಧ ತಿರುಗಿ ಬಿದ್ದವನು. ದೇ ಸಂಬಂಧಿ ಹ್ಯಾಡಾಳು ದೇವಿಯನ್ನು ಗಿಸಿದವನು ಇನ್ನು ನೆಲಮಂಗಲದ ಸಣ್ಣಪುಟ್ಟ ಗಳಿಗೆ ಕೈಹಾಕದೇ ಇರುತ್ತಾನಾ?

ಚಿತ್ತನಗೆರೆ ಸೀನ ತಾನಾಯಿತು ತನ್ನ ಪಾಡಾಯಿತು ಮ ಜೈಲು ಹೊಕ್ಕು ಕೂತುಬಿಟ್ಟರೆ ಶಂಕ್ರ ಜೈಲಲ್ಲಿ ತೇ ಸುಲಿಗೆ ದಂಧೆಗೆ ಕೈಯಿಟ್ಟ. ಅದೂ ಸೀನನ್ನು ಗಿಸೇ ತೀರ್‍ತೀನಿ ಎಂದು ಕಂಡಕಂಡವರಿಂದ ಹಣ ತ್ತಿದ್ದ. ಅಂಥಾ ಬಿನ್ನಮಂಗಲ ಕೃಷ್ಣಪ್ಪನವರೇ ಶಂಕ್ರನ ತಾಳಲಾರದೇ ಐದು ಲಕ್ಷ ಕೊಟ್ಟು ಕೈ ಮುಗಿದರೆ, ಕೃಷ್ಣಪ್ಪನವರಿಂದ ಶಂಕ್ರನ ಬಂಟ ಹಟ್ಟಿ ಮಂಜ ಎರಡು ಲಕ್ಷ ಕಿತ್ತಿದ್ದ! ನೆಲಮಂಗಲದ ಜಮೀನ್ದಾರ ಚನ್ನಪ್ಪ ಹಟ್ಟಿ ಮಂಜನ ಧಮಕಿಗೆ ಹೆದರಿಕೊಂಡೇ ಗೆ ಹೋಗಿ ಐದು ಲಕ್ಷ ಕೊಟ್ಟು ಬಂದ. ಮಂಗಲದ ಮತ್ತೊಬ್ಬ ಖದೀಮ ಚಂದೂಲಾಲ್ ಕೂಡ ಜೈಲಿಗೇ ಹೋಗಿ ಐದು ಲಕ್ಷ ತೆತ್ತು ದ. ಬೆಂಗಳೂರು ಮಗ್ಗುಲಿನ ನೆಲಮಂಗಲ ಹೇಳಿಕೇಳಿ ಯಲ್ ಎಸ್ಟೇಟ್ ಹುತ್ತವಿದ್ದಂತೆ. ಯಾರ್‍ಯಾರು ಬಂದು ಏನು ಖರೀದಿಸುತ್ತಾರೋ ಅಂಥವರೆಲ್ಲರಿಗೂ ನಿಂದ ಶಂಕ್ರ ಮತ್ತು ಹಟ್ಟಿ ಮಂಜರ ಫೋನ್ ತ್ತಿತ್ತು. ಕೊನೆಕೊನೆಗೆ ನೆಲಮಂಗಲದಲ್ಲಿ ಸಣ್ಣ ಕೋಳಿ ಗಡಿ ಇಟ್ಟುಕೊಂಡಿದ್ದ ರಮೇಶನಂಥವರಿಗೂ ಳಿಗೆ ಐವತ್ತು ಸಾವಿರ ತಂದುಕೊಡು ಎಂದು ಫೋನ್ ಮಾಡಿ ಧಮಕಿ ಕೊಟ್ಟ.

ಕೋಳಿ ಅಂಗಡಿ ರಮೇಶನಾದರೂ ಎಲ್ಲಿಂದ ತಂದು ಕುತ್ತಾನೆ. ಧೈರ್ಯ ಮಾಡಿದ್ದೇ ಡಿವೈಎಸ್‌ಪಿ ಕೇಂದ್ರ ರಿಗೆ ದೂರು ಕೊಟ್ಟ. ಮೊದಲೇ ವಿಪರೀತ ಕೆಡಿಸಿಕೊಂಡಿದ್ದ ನಿಷ್ಠುರಿ ಪೊಲೀಸ್ ಅಧಿಕಾರಿ ಕೇಂದ್ರ, ರಮೇಶ ದೂರು ಕೊಟ್ಟದ್ದೇ ತಡ ವಿಶೇಷ ವಾರಂಟ್ ಮಾಡಿಸಿ ಶಂಕ್ರನನ್ನು ಜೈಲಿಂದ ಎಳೆದು ದು ನೆಲಮಂಗಲದ ಬೀದಿಬೀದಿಗಳಲ್ಲಿ ಮೆರವಣಿಗೆ ಬಿದ್ದಾರೆ. ಇಷ್ಟಾಗಿದ್ದೇ ಶಂಕ್ರ ಮೆತ್ತಗಾದನೇ ಹೊರತು ಬಂಟ ಹಟ್ಟಿ ಮಂಜನಿಗೆ ಬುದ್ಧಿ ಬರಲಿಲ್ಲ. ಬದಲು ಹಟ್ಟಿ ಮಂಜನ ಫೋನ್ ಶುರುವಾಯಿತು. ಾಯ್ತಿ ಚುನಾವಣೆಯಲ್ಲಿ ಆಗಷ್ಟೇ ಗೆದ್ದಿದ್ದ ಶೋದಮ್ಮನ ಮಗನಿಗೆ ಜೈಲಿಂದಲೇ ಥ್ರೆಟ್ ಮಾಡಿ ತಿಂಗಳೂ 50 ಸಾವಿರ ಕಳಿಸು ಎಂದ ಮಂಜನ ದ್ಧ ಯಶೋದಮ್ಮನ ಮಗನೇ ಬಂದು ಪೊಲೀಸರಿಗೆ ರು ಕೊಟ್ಟ. ಕೋರಮಂಗಲದ ಲ್ಯಾಂಡ್ ಡೀಲರ್ ಶ, ಕೋಟಿ ರಂಗಧಾಮ; ಹೀಗೆ ಅನೇಕ ರಿಯಲ್ ಟ್ ಕುಳಗಳಿಗೂ ಜೈಲಿಂದ ಬೆದರಿಕೆ ಕರೆ ಗಿದೆಯಂತೆ.

ಹೀಗೆ ಯಾರ್‍ಯಾರಿಗೆ ಜೈಲಲ್ಲಿ ಕೂತು ಹಟ್ಟಿ ಮಂಜ ಕಿ ಹಾಕುತ್ತಿದ್ದಾನೋ ಅವರ ಪೈಕಿ ಪೊಲೀಸರಿಗೆ ರು ಕೊಟ್ಟವರು ಬೆರಳೆಣಿಕೆಯಷ್ಟು ಮಾತ್ರ. ಮಿಕ್ಕವರು ದೇ ಜೈಲಿಗೇ ಹೋಗಿ ಕಾಣಿಕೆ ಸಲ್ಲಿಸಿ ಬರುತ್ತಾರೆ. ಸೀನ ರಾಮನಗರ ಜೈಲಲ್ಲಿ ಕಂಬಿ ಎಣಿಸುತ್ತಿದ್ದರೆ ಹಟ್ಟಿ ಮಂಜ, ಹಟ್ಟಿಮುನಿ, ಮೆಂಟಲ್ ರಘು, ೀ ಸ್ವಾಮಿ ಮುಂತಾದವರೆಲ್ಲ ಬೆಂಗಳೂರು, ವಾಡ, ಚಿತ್ರದುರ್ಗ ಇತ್ಯಾದಿ ಜೈಲುಗಳಲ್ಲಿ ಹೋಗಿದ್ದಾರೆ. ಪ್ರತಿಯೊಬ್ಬರ ಬಳಿಯೂ ಮೊಬೈಲ್ ನುಗಳಿವೆ. ಪ್ರತಿನಿತ್ಯ ಜೈಲಿಗೆ ಬಿರಿಯಾನಿ ನೆಯಾಗುತ್ತದೆ. ಹೊರಗೆ ಹುಡುಗರಿದ್ದಾರೆ. ಂಗಲದ ಪ್ರತಿ ಕಾಲೇಜಿನಲ್ಲೂ ವಿದ್ಯಾರ್ಥಿಗಳಲ್ಲೇ ಮತ್ತು ಶಂಕ್ರನ ಗ್ಯಾಂಗುಗಳಾಗಿ ಇಬ್ಭಾಗಗಳಾಗಿವೆ. ಪರಮಾವಧಿಯೆಂಬಂತೆ ಮೊನ್ನೆ ನಡೆದ ಪಂಚಾಯ್ತಿ ವಣೆಯಲ್ಲಿ ಚಿತ್ತನಗೆರೆಯಲ್ಲಿ ಸೀನ ತನ್ನ ತಾಯಿಯನ್ನು ದರೆ ಶಂಕ್ರ ಆಕೆಯ ವಿರುದ್ಧ ತನ್ನ ತಾಯಿಯನ್ನು ಸಿದ್ದ. ಸ್ವತಃ ಸೀನನೇ ನಿಂತಿದ್ದನಾದರೂ ಶಂಕ್ರನ ಬಂದ ಆತನ ವಿರುದ್ಧ ಆಂಜನಪ್ಪ ನಿಂತಿದ್ದ.


ಜನಕ್ಕೆ ಎಂಥಾ ದುರ್ಗತಿಯೆಂದರೆ ಶಂಕ್ರನಂಥ ರಿ ಹಂತಕನಿಗಿಂತಲೂ ಸೀನನೇ ವಾಸಿ ಎಂದು ಸಿಂಡಿಕೇಟಿನ ನಾಲ್ಕು ಪಂಚಾಯ್ತಿ ಸದಸ್ಯರನ್ನು ಮತ ದಿಂದ ಗೆಲ್ಲಿಸಿಬಿಟ್ಟರು. ಈಗ ಗೆದ್ದ ಪಂಚಾಯ್ತಿ ವನ್ನೇ ತಿಂಗಳಿಗೆ 50 ಸಾವಿರ ಕಳಿಸಿ ಇಲ್ಲದಿದ್ರೆ ಸ್ತೀವಿ ಎಂದು ಹಟ್ಟಿ ಮಂಜ ಧಮಕಿ ತ್ತಿದ್ದಾನೆ.

ಲಮಂಗಲವೆಂಬ ಊರಿನ ಸರ್ವನಾಶಕ್ಕೆ ಇದಕ್ಕಿಂತ ಊರಿಗೆ ಊರೇ ಕ್ರಿಮಿನಲ್ ನಶೆಗೆ ಬಿದ್ದಾಗ ೀಸರು ತಾನೇ ಏನು ಮಾಡಲು ಸಾಧ್ಯ? ಸದ್ಯಕ್ಕಿದು ಾ? ಇನ್ನೆಷ್ಟು ಹೆಣ ಬೀಳಬೇಕು?

• ರಾ. ಸೋಮನಾಥ್

ra.somanath2010@gmail.com

ಓಡುವ ಕುದುರೆ ಮಲ್ಯ ಮತ್ತು ಆತ್ಮಸಾಕ್ಷಿ... ಥೇ...ಥೇ..!



ರಾಜ್ಯ ಸಭೆಗೆ ಕರ್ನಾಟಕದಿಂದ ಆಯ್ಕೆಯಾಗುವ ನಾಲ್ಕನೇ ಅಭ್ಯರ್ಥಿ ಯಾರು ಎಂಬುದೇ ಸದ್ಯ ರಾಜಕೀಯ ವಲಯದಲ್ಲಿ ಚರ್ಚೆಯಾಗುತ್ತಿರುವ ವಿಷಯ. ಜೆಡಿಎಸ್ ಬೆಂಬಲಿತ ಮದ್ಯದ ದೊರೆ ವಿಜಯ ಮಲ್ಯ ಆಯ್ಕೆಯಾಗುತ್ತಾರೆಯೇ? ಅಥವಾ ಕಾಂಗ್ರೆಸ್‌ನ ಎರಡನೇ ಅಭ್ಯರ್ಥಿ ಟಿ.ವಿ ಮಾರುತಿ ಆಯ್ಕೆಯಾಗುತ್ತಾರೆಯೇ? ಕಳೆದ ವಾರ ಕಾಂಗ್ರೆ ಮತ್ತು ಜೆಡಿಎಸ್ ಮೈತ್ರಿ ಮುರಿದುಬಿದ್ದಾಗ ಬಿಜೆಪಿ ಮೂರನೇ ಅಭ್ಯರ್ಥಿಯಾಗಿ ಯಾರನ್ನಾದರೂ ಕಣಕ್ಕಿಳಿಸುವ ಮೂಲಕ ರಾಜಕೀಯ ಲಾಭ ಪಡೆಯಲು ಯತ್ನಿಸಬಹುದು ಎಂದು ಕೆಲ ರಾಜಕೀಯ ಪಂಡಿತರು ಲೆಕ್ಕಾಚಾರ ಹಾಕಿದ್ದರು. ಆದರೆ "ಯಾವುದೇ ಕಾರಣಕ್ಕೂ ನಾವು ಮೂರನೆಯ ಅಭ್ಯರ್ಥಿಯನ್ನು ಕಣಕ್ಕಿಳಿಸುವುದಿಲ್ಲ, ಹಾಗೆಯೇ ಬೇರೆ ಪಕ್ಷದ ಬೆಂಬಲ ಪಡೆದಿರುವ ಬೇರೆ ಯಾರಿಗೂ ನಮ್ಮ ಪಕ್ಷದ ಶಾಸಕರು ತಮ್ಮ ಮತಗಳನ್ನು ಚಲಾಯಿಸುವುದಿಲ್ಲ" ಎಂದು ಮುಖ್ಯಮಂತ್ರಿ ಯಡ್ಡಿ ಘೋಷಿಸಿದರು. ಯಡ್ಡಿ ನುಡಿದಂತೆ ನಡೆದುಕೊಂಡಿರುವ ಬಿಜೆಪಿ ಮೂರನೆಯ ಅಭ್ಯರ್ಥಿಯನ್ನು ಅಖಾಡಕ್ಕೆ ಇಳಿಸಿಲ್ಲವಾದ್ದರಿಂದ ಈಗ ರಾಜ್ಯಸಭಾ ಚುನಾವಣೆಗೆ ವಿಶೇಷವಾದ ರಂಗು ಬಂದಿದೆ.

ವಿಜಯ ಮಲ್ಯ ಈ ಹಿಂದೆ ರಾಜ್ಯಸಭೆಗೆ ಚುನಾಯಿತರಾದಾಗ, ಬಿಜೆಪಿಯ ಒಂಭತ್ತು ಜನ ಶಾಸಕರು ತಮ್ಮ ಪಕ್ಷದ ವಿಪ್‌ಅನ್ನು ಉಲ್ಲಂಘಿಸಿ ಕ್ರಾಸ್ ವೋಟಿಂಗ್ ಮಲ್ಯನಿಗೆ ಮಾಡುವ ಮೂಲಕ ಅವರನ್ನು ಗೆಲ್ಲಿಸಿದ್ದರು. ಅದಕ್ಕೆ ಕಾರಣ ಮಲ್ಯ ಆಗ ಬಿಜೆಪಿಯ ಶಾಸಕರಿಗೆ 'ಕೋಟ್ಯಾಂತರ' ರೂಪಾಯಿ ಬೆಲೆ ಬಾಳುವ 'ಸೂಟ್‌ಕೇಸ್'ಗಳನ್ನು ನೀಡಿದ್ದು ಎಲ್ಲರಿಗೂ ಗೊತ್ತಿರುವ ವಿಷಯ. ಹೀಗಾಗಿ ಈ ಬಾರಿ ಶಾಸಕರು ಪಕ್ಷಕ್ಕೆ ನಿಷ್ಠೆ ತೋರಿಸುತ್ತಾರೋ? ಅಥವಾ ಸೂಟ್‌ಕೇಸ್‌ಗೆ ನಿಷ್ಠೆ ತೋರಿಸುತ್ತಾರೋ? ಚೆಡ್ಡಿ ನಾಯಕರು ಹೊರಗಡೆ ಅದೆಷ್ಟೇ ಚೀರಾಟ ಮಾಡಿದರೂ ಕಳೆದ ಬಾರಿಯಂತೆ ಈ ಬಾರಿಯೂ ಹಣದ ಝಲಕ್ ತೋರಿಸುವ ಮೂಲಕ 'ನಾನು ಗೆದ್ದೇ ಗೆಲ್ಲುತ್ತೇನೆ' ಎಂಬ ವಿಶ್ವಾಸದಿಂದ ಮಲ್ಯ ಬೀಗುತ್ತಿದ್ದಾರೆ.

ಜನತಾ ದಳದ ರಾಜ್ಯಾಧ್ಯಕ್ಷ ಕುಮಾರಸ್ವಾಮಿ ಜೊತೆ ಬಂದು ತಮ್ಮ ನಾಮಪತ್ರ ಸಲ್ಲಿಸಿದ ಜೆಡಿಎಸ್ ಬೆಂಬಲಿತ ಅಭ್ಯರ್ಥಿ ವಿಜಯ ಮಲ್ಯರನ್ನು ತಾವು ಬೆಂಬಲಿಸುವುದಿಲ್ಲ ಎಂದು ಬಿಜೆಪಿ ನಾಯಕರು ಹೇಳುತ್ತಿದ್ದಾರೆ. ಕಾರಣ ಒಂದು ವೇಳೆ ಮಲ್ಯ ಗೆದ್ದರೆ ಅದು ದೇವೇಗೌಡರ ಗೆಲುವಾಗುತ್ತದೆಯೇ ವಿನಃ ಮಲ್ಯನ ಗೆಲುವಾಗುವುದಿಲ್ಲ ಎಂಬ ನಿಲುವು ಬಿಜೆಪಿ ನಾಯಕರದ್ದು.

ರಾಜ್ಯದಲ್ಲಿ ಬಿಜೆಪಿ ಅಧಿಕಾರಕ್ಕೆ ಬಂದನಂತರ ನಡೆದಿರುವ ಬಹುತೇಕ ಚುನಾವಣೆಗಳಲ್ಲಿ ಚೆಡ್ಡಿಗಳ ಪಕ್ಷಕ್ಕೆ ತೀವ್ರ ಪೈಪೋಟಿ ನೀಡಿರುವುದು ಜೆಡಿಎಸ್ ಪಕ್ಷವೇ ಹೊರತು ಕಾಂಗ್ರೆ ಅಲ್ಲ. ಇಂತಹ ಸಂದರ್ಭದಲ್ಲಿ ನಾಲ್ಕನೇ ಅಭ್ಯರ್ಥಿಯಾಗಿ ಮಲ್ಯ ಗೆದ್ದರೆ ದೇವೇಗೌಡರ ಬಲವೃದ್ಧಿಯಾದಂತೆ. ಅಷ್ಟೇ ಅಲ್ಲ, ರಾಜ್ಯ ಮಟ್ಟದಲ್ಲಿ ಬಿಜೆಪಿ ನಾಯಕರು ಮತ್ತು ದಳದ ನಾಯಕರು ಪರಸ್ಪರ ಸ್ನೇಹಹಸ್ತ ಚಾಚಿದ್ದಾರೆ ಎಂಬ ರಾಂಗ್ ಸಿಗ್ನಲ್ ತಮ್ಮ ಪಕ್ಷದ ಕಾರ್ಯಕರ್ತರಿಗೆ ಹೋಗುತ್ತದೆ ಎಂಬುದು ಚೆಡ್ಡಿಗಳ ಆತಂಕ. ಹಾಗಾದರೆ ಮುಂಬರುವ ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಇದು ದುಷ್ಪರಿಣಾಮ ಬೀರಬಹುದು. ಆಗ ಗೌಡರು ತಮ್ಮ ರಾಜಕೀಯ ತಂತ್ರಗಾರಿಕೆಯನ್ನು ಮೆರೆದು ಬಿಜೆಪಿಯಿಂದು ಜಿಲ್ಲಾ ಪರಿಷತ್ ಚುನಾವಣೆಗಳನ್ನು ಕಸಿದುಕೊಳ್ಳಬಹುದು ಎಂಬುದು ಚೆಡ್ಡಿ ಪಕ್ಷದ ಚಿಂತಕರ ಚಾವಡಿಯ ನಿಲುವಾಗಿದೆ. ಆ ಕಾರಣಕ್ಕಾಗಿಯೇ ಅದೇನೇ ಆದರೂ ತಮ್ಮ ಪಕ್ಷದ ಶಾಸಕರು ಹಣದಾಸೆಗೆ ಸೋತು ಕ್ರಾಸ್ ವೋಟಿಂಗ್ ಮಾಡಿಕೊಳ್ಳದಂತೆ ನೋಡಿಕೊಳ್ಳಲು ಯತ್ನಿಸುತ್ತಿದ್ದಾರೆ ಬಿಜೆಪಿ ನಾಯಕರು.

ಈ ಹಿಂದೆ ರಾಜ್ಯ ಸಭೆಗೆ ಮಲ್ಯ ಪ್ರಥಮ ಬಾರಿಗೆ ಸ್ಪರ್ಧಿಸಿದಾಗ, ಬಿಜೆಪಿಯ ಶಾಸಕರೊಂದಿಗೆ ಅನೇಕ ಪಕ್ಷೇತರ ಅಭ್ಯರ್ಥಿಗಳೂ ಆತನಿಂದ 'ಸೂಟ್‌ಕೇಸ್' ಪಡೆದು ಆತನ ಪರವಾಗಿ ಮತ ಹಾಕಿದ್ದರು. ಆದರೆ ಈ ಬಾರಿ ವರ್ತೂರು ಪ್ರಕಾಶ್ ಹೊರತುಪಡಿಸಿದರೆ ಎಲ್ಲಾ ಪಕ್ಷೇತರ ಶಾಸಕರು ಯಡ್ಡಿಯ ಚೆಡ್ಡಿ ಸರ್ಕಾರದಲ್ಲಿ ಮಂತ್ರಿಗಳಾಗಿರುವುದರಿಂದ ಅವರೆಲ್ಲ ಒಂದೆರಡು ಕೋಟಿಗಳಿಗೆ ತಮ್ಮ ಮತವನ್ನು ಮಾರಿಕೊಳ್ಳುವುದಿಲ್ಲ ಎಂಬ ಎಣಿಕೆ ಚೆಡ್ಡಿ ನಾಯಕರದ್ದು.

ಇನ್ನು ಕಾಂಗ್ರೆಸ್ ಪಕ್ಷದ ಮೊದಲ ಅಭ್ಯರ್ಥಿ ಆಸ್ಕರ್ ಫರ್ನಾಂಡಿಸ್ ಸುಲಭವಾಗಿ ಗೆದ್ದ ನಂತರ ಆ ಪಕ್ಷದ ಬಳಿ ಇಪ್ಪತ್ತೆಂಟು ಹೆಚ್ಚುವರಿ ಮತಗಳಿರುತ್ತದೆ. ಹಾಗೆಯೇ ನಲ್ವತ್ತಾರು ಜನ ಮೊದಲ ಪ್ರಾಶಸ್ತ್ಯದ ಮತಗಳನ್ನು ಚಲಾಯಿಸಿದ ನಂತರ ಎರಡನೇ ಪ್ರಾಶಸ್ತ್ಯದ ಮತವನ್ನು ಕಾಂಗ್ರೆಸ್‌ನ ಎರಡನೆ ಅಭ್ಯರ್ಥಿ ಟಿ.ವಿ. ಮಾರುತಿಗೆ ಹಾಕಿದರೆ ಮಾರುತಿಗೆ ಜಯ ಕಟ್ಟಿಟ್ಟ ಬುತ್ತಿ. ಇಂತಹ ಅತ್ಯಂತ ಕುತೂಹಲಕಾರಿ ಘಟ್ಟದಲ್ಲಿ ರಾಜ್ಯಸಭೆಯ ನಾಲ್ಕನೇ ಸ್ಥಾನದ ಚುನಾವಣೆ ನಡೆಯುತ್ತಿದೆ.

ಸರಳ ಮಾತಿನಲ್ಲಿ ಹೇಳುವುದಾದರೆ ದೇವೇಗೌಡರ ಜಾತ್ಯತೀತ ಜನತಾ ದಳದ ಎಲ್ಲಾ ಇಪ್ಪತ್ತಾರು ಶಾಸಕರು ಮದ್ಯದ ದೊರೆಗೆ ಮತ ಚಲಾಯಿಸಿದರೂ ಮಲ್ಯನಿಗೆ ಇನ್ನೂ ಇಪ್ಪತ್ತು ಮತಗಳ ಬೆಂಬಲ ಅಗತ್ಯವಿದೆ. ಈ ಮತಗಳನ್ನು ಮಲ್ಯ ಕಾಂಗ್ರೆಸ್ ಅಥವಾ ಬಿಜೆಪಿಯಿಂದಲೇ ಗಿಟ್ಟಿಸಬೇಕಾಗಿದೆ. ಆದರೆ ಅವು ಬಿಜೆಪಿಯಿಂದ ದೊರಕುವುದನ್ನು ತಡೆಯುವ ಮೂಲಕ ಒಂದೆಡೆ ದೇವೇ ಗೌಡರಿಗೂ, ಇನ್ನೊಂದೆಡೆ ಮದ್ಯೋದ್ಯಮಿ ಮಲ್ಯನಿಗೂ ಮುಖಭಂಗ ಮಾಡಲು ಬಿಜೆಪಿ ನಾಯಕರು ಹವಣಿಸುತ್ತಿದ್ದಾರೆ.

ಟಿ.ವಿ. ಮಾರುತಿಯನ್ನು ಗೆಲ್ಲಿಸಲೇಬೇಕು ಎಂದು ಕಾಂಗ್ರೆ ಹೈಕಮಾಂಡ್ ಕೂಡಾ ನಿರ್ಧರಿಸಿದಂತಿದೆ. ಅಕಸ್ಮಾತ್ ಮಾರುತಿ ಗೆದ್ದರೆ, ದೇವೇಗೌಡರ ಬ್ಲಾಕ್‌ಮೇಲ್ ರಾಜಕಾರಣಕ್ಕೆ ಸೋನಿಯಾ ಗಾಂಧಿ ನೀಡುವ ಪ್ರತ್ಯುತ್ತರವಾಗಲಿದೆ. ಅಲ್ಲಿಗೆ ದೇವೇಗೌಡ ರಾಜ್ಯದ ಕಾಂಗ್ರೆ ನಾಯಕರನ್ನು ಖುಷಿಪಡಿಸಿದಂತಾಗುತ್ತದೆ ಮಾತ್ರವಲ್ಲ ರಾಜ್ಯ ಕಾಂಗ್ರೆ ಪಕ್ಷಕ್ಕೆ ಹೊಸ ಉತ್ಸಾಹ ಮತ್ತು ಹುಮ್ಮಸ್ಸನ್ನು ತುಂಬಿದಂತಾಗುತ್ತದೆ ಎಂಬುದು ಕೂಡಾ ಕಾಂಗ್ರೆ ಹೈಕಮಾಂಡ್‌ಗೆ ಅರಿವಿದೆ.

ಆದರೆ ಅಕಸ್ಮಾತ್ ಮಾರುತಿ ಮುಗ್ಗರಿಸಿದರೆ ಅದರಿಂದ ದೇವೇಗೌಡರ ಜಂಘಾಬಲ ರಾಜ್ಯ ರಾಜಕೀಯದಲ್ಲಿ ವೃದ್ಧಿಸಿದಂತಾಗುತ್ತದೆ. ಒಂದು ರಾಷ್ಟ್ರ ಪಕ್ಷವನ್ನು ಯಃಕಶ್ಚಿತ್ ಒಂದು ಪ್ರಾದೇಶಿಕ ಪಕ್ಷ ಅಲ್ಲಾಡಿಸಿತು ಎಂದರೆ ಇದರಿಂದಾಗಿ ಕಾಂಗ್ರೆಗೆ ಆಗುವ ಮುಖಭಂಗ ಅಷ್ಟಿಷ್ಟಲ್ಲ.

ಇದೆಲ್ಲದರ ಮಧ್ಯೆ, ಕರ್ನಾಟಕದ ಶಾಸಕರ ಸ್ವಾಭಿಮಾನ ಮತ್ತು ಆತ್ಮಾಭಿಮಾನದ ಪ್ರಶ್ನೆಯೂ ಇದೆ.



ಈ ಶಾಸಕರು ತಮ್ಮ ಪಕ್ಷದ ವಿಪ್‌ಅನ್ನು ಉಲ್ಲಂಘಿಸದೆ, ಕ್ರಾಸ್ ವೋಟ್ ಮಾಡದೆ ತಮ್ಮ ಪಕ್ಷ ನಿಷ್ಠೆ ತೋರಿಸಿದರೆ ರಾಯಲ್ ಚಾಲೆಂಜ್‌ನ ಮಲ್ಯ ತನ್ನ ರಾಜಕೀಯ ಆಟ ಮುಗಿಸಿ ಔಟಾಗುವುದು ಖಂಡಿತ. ಆದರೆ ಹಣದ ಆಶೆಯನ್ನು ಹೊಂದಿರುವ ಶಾಸಕರಿಗೆ ಸ್ವಾಭಿಮಾನ ಎಂಬುದೇ ಇಲ್ಲದಂತಾಗಿ ಯಾರು ಹೆಚ್ಚು ಹಣಕೊಡುತ್ತಾರೋ ಅವರಿಗೆ ತಮ್ಮ ಮತಗಳನ್ನು ಮಾರಿಕೊಳ್ಳುವುದು ಈಗ ರೂಢಿಯಾಗಿದೆ.

ಆದ್ದರಿಂದ ತನ್ನ ಹಣದ ಬಲದಿಂದಲೇ ತನಗೆ ಬೇಕಾದ ಶಾಸಕರನ್ನು ಮಲ್ಯ ಬುಕ್ ಮಾಡಿಕೊಂಡು ಗೆದ್ದರೆ, ರಾಷ್ಟ್ರೀಯ ಪಕ್ಷಗಳಾದ ಬಿಜೆಪಿ ಮತ್ತು ಕಾಂಗ್ರೆಗೆ ಭಾರೀ ಮುಖಭಂಗವಾಗಲಿದೆ. ಇದಾದನಂತರ ಈ ಎರಡೂ ಪಕ್ಷಗಳಲ್ಲಿ ಭಿನ್ನಮತೀಯ ಚಟುವಟಿಕೆ ಆರಂಭವಾಗುವುದರಲ್ಲಿ ಸಂಶಯವೇ ಇಲ್ಲ.


ಕಾಂಗ್ರೆ ಪಕ್ಷದ ಪುನಶ್ಚೇತನ, ಬಿಜೆಪಿಯ ಒಗ್ಗಟ್ಟು, ಜನತಾ ದಳದ ಮರ್ಯಾದೆ ಮತ್ತು ನಮ್ಮ ಚುನಾಯಿತ ಪ್ರತಿನಿಧಿಗಳ ಹಣದಾಸೆ ಎಲ್ಲವೂ ಈಗ ಮದ್ಯದ ದೊರೆ ವಿಜಯ ಮಲ್ಯನ ಸೋಲು-ಗೆಲುವನ್ನು ಅವಲಂಬಿಸಿದೆ.

• ಸದಾಶಿವ ಶೆಣೈ



ಆತ್ಮಾನಂದಗೆ 60..., ಏನೀಗಾ?

ಮಂಡ್ಯದಲ್ಲಿ ಫ್ಯೂಡಲ್ ರಾಜಕಾರಣ ಮಾಡಿ, ನಂತರ ಜನರಿಂದಲೇ ಮನೆ ಸೇರಿಕೊಂಡಿರುವ ಮಾಜಿ ಸಚಿವ ಎಂ.ಎಸ್.ಆತ್ಮಾನಂದಗೆ ಭರ್ತಿಯಾಗಿ 60 ವರ್ಷಗಳು ತುಂಬಿದೆಯೆಂಬುದು ಮಂಡ್ಯದಲ್ಲಿ ಯಾರಿಗೂ ದೊಡ್ಡ ವಿಷಯ ಅನ್ನಿಸಿರಲೇ ಇಲ್ಲ, ಆದರೆ ತನ್ನ ಜೊತೆಗೆ ಇನ್ನೂ ಉಳಿದುಕೊಂಡಿರುವ ಕೆಲವು ಪುಢಾರಿಗಳ ಮೂಲಕ ಊರ ತುಂಬ ಕಟೌಟ್ ಹಾಕಿಸಿದ ಮೇಲೆಯೇ 'ಆತ್ಮಣ್ಣನಿಗೆ ಅರವತ್ತಂತೆ' ಎಂದು ಜನರು ಅಲ್ಲಲ್ಲಿ ಮಾತಾಡಿಕೊಳ್ಳುವಂತಾಯಿತು. 2004ರ ವಿಧಾನಸಭಾ ಚುನಾವಣೆಯಲ್ಲಿ ಸೋತ ಅವಮಾನದಲ್ಲಿ ಮನೆ ಸೇರಿಕೊಂಡಿದ್ದ ಆತ್ಮಾನಂದ ಈಗ ಮನೆಯಿಂದ ಹೊರಬಂದು ಸೀದ ಕಟೌಟ್‌ಗಳಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.



ಮಂಡ್ಯವನ್ನ ಸುಮಾರು 50 ವರ್ಷಗಳ ಕಾಲ ತಮ್ಮ ಕುಟುಂಬದ ಪಾಳೇಪಟ್ಟಿನಂತೆ ಆಳ್ವಿಕೆ ನಡೆಸಿ ಮೂಲೆಗುಂಪಾಗಿದ್ದ ಆತ್ಮಾನಂದ ಮತ್ತೆ ಸಕ್ರಿಯ ರಾಜಕಾರಣಮಾಡುವ ಇರಾದೆಯಿಂದಲೇ ಈ ವೈಭವೀಕರಣವನ್ನು ನಡೆಸಲಾಗುತ್ತಿದೆ ಎಂಬ ಸುದ್ದಿ ಕಾಂಗ್ರೆ ಪಾಳೆಯದಲ್ಲಿ ಹರಿದಾಡುತ್ತಿದೆ. ಹಳೇ ಬೇಸ್ ಉಳಿಸಿಕೊಂಡಿರುವ ಜೆಡಿಎಸ್, ಎಲ್ಲಾ ಕಡೆ ಚಿಗುರುತ್ತಿರುವ ಬಿಜೆಪಿಯ ಮಧ್ಯೆ ಮಂಡ್ಯ ಜಿಲ್ಲಾ ಕಾಂಗ್ರೆಸ್ ಬಸವಳಿದಿದೆ. ಅಂಬರೀಷ್ ವಿಧಾನಸಭೆ, ಲೋಕಸಭೆಗಳೆರಡರಲ್ಲೂ ಸೋತಾಯಿತು. ಗೆದ್ದಿದ್ದರೂ, ಅಂಬಿ ಮಂಡ್ಯ ಬಗ್ಗೆ ತಲೆಕೆಡಿಸಿಕೊಳ್ಳುತ್ತಿದ್ದುದು ಅಷ್ಟರಲ್ಲೇ ಇತ್ತು,



ಇನ್ನು ಆತ್ಮಾನಂದರ ಪುರಾತನ ಶತ್ರು ಎಸ್.ಎಂ.ಕೃಷ್ಣ ಹಿಲರಿ ಕ್ಲಿಂಟನ್ ಲೆವೆಲ್ಲಿಗೆ ಏರಿಬಿಟ್ಟಿರುವುದರಿಂದ ಅವರು ಮಂಡ್ಯ ಜಿಲ್ಲಾ ರಾಜಕಾರಣಕ್ಕೆ ತಲೆಹಾಕುವುದು ದೂರದ ಮಾತು. ಹೀಗೆ ದಿಕ್ಕಿಲ್ಲದಂತಾಗಿರುವ ಮಂಡ್ಯ ಕಾಂಗ್ರೆಸ್‌ನಲ್ಲಿ ಮತ್ತೆ ಮಿಂಚಲು ತನಗಿನ್ನೊಂದು ಛಾನ್ಸ್ ಸಿಕ್ಕಬಹುದೆಂಬ ಆಸೆ ಆತ್ಮಣ್ಣನದ್ದು. ಇದುವರೆಗೂ ಖೇಣಿಯ ಬಾಲ ಸಚ್ಚಿದಾನಂದ, ಎಸ್ಸೆಮ್ ಚೇಲಾ ಸತ್ಯಾನಂದ, ಜೆಡಿಎಸ್‌ನ ಚಿಕ್ಕಣ್ಣ ಹೀಗೆ ಹಲವು ಕಟೌಟ್ ವೀರರು ಮಂಡ್ಯದಲ್ಲಿ ಮೆರೆದಾಡುತ್ತಿದ್ದರು. ಆದರೆ ಆತ್ಮಾನಂದರ ಕಟೌಟ್‌ಗಳು ಮಾತ್ರ ಇದುವರೆಗೂ ಹೆಚ್ಚು ಕಂಡಿರಲಿಲ್ಲ, ಈಗ ಇದ್ದಕ್ಕಿದ್ದಂತೆ, ಸಿಕ್ಕಾಪಟ್ಟೆ ಕಟೌಟ್‌ಗಳು ಎದ್ದುನಿಂತಿರುವುದು ಹಲವರಲ್ಲಿ ಕುತೂಹಲ ಮೂಡಿಸಿದೆ.

ಅಪ್ಪ ಶಿವನಂಜಪ್ಪ ಮೂರು ಬಾರಿ ಮಂಡ್ಯ ಸಂಸದ, ತಾಯಿ ಲೀಲಮ್ಮ ವಿಧಾನಪರಿಷತ್ ಸದಸ್ಯೆ ಸ್ವತಃ ಆತ್ಮಾನಂದ ಮೂರು ಬಾರಿ ಎಂಎಲ್‌ಎ, ಒಮ್ಮೆ ಸಚಿವ, ಚಿಕ್ಕಪ್ಪ ರಾಮಲಿಂಗೇಗೌಡ ಸರಿಯಾಗಿ 25 ವರ್ಷಗಳ ಕಾಲ ನಗರಸಭೆ ಅಧ್ಯಕ್ಷ. ಆ ನಂತರವೂ ನಗರಸಭೆಯ ಮೇಲಿನ ಹಿಡಿತ ಇವರದ್ದೇ. ಬಹುಶಃ ಕರ್ನಾಟಕದ ರಾಜಕಾರಣದಲ್ಲಿ ಈ ಪರಿಯ ಕುಟುಂಬ ರಾಜಕಾರಣದ ಉದಾಹರಣೆ ಬಹಳ ಕಡಿಮೆ ಅನ್ನಿಸುತ್ತದೆ. ಅದರಲ್ಲೂ ಉತ್ತರ ಕರ್ನಾಟಕದಷ್ಟು ಫ್ಯೂಡಲ್ ಹಿಡಿತ ಇಲ್ಲದ ಹಳೇ ಮೈಸೂರು ಪ್ರದೇಶದಲ್ಲಂತೂ ಇಷ್ಟು ಪ್ರಮಾಣದಲ್ಲಿ ಯಾರೂ ಯಾವ ಊರನ್ನೂ ಆಳಿದ ಹಾಗೆ ಕಾಣುತ್ತಿಲ್ಲ,

ಈ ರೀತಿಯಾಗಿ ಸಾಕಷ್ಟು ಕಾಲ ರಾಜ್ಯಭಾರ ನಡೆಸಿದ ಆತ್ಮಾನಂದರ ಕುಟುಂಬದ ವಿರುದ್ಧದ ಸಿಟ್ಟೂ ಮಂಡ್ಯದಲ್ಲಿ ಸಾಕಷ್ಟಿತ್ತು, ಆದರೆ ಅದನ್ನು ಕ್ರೋಢೀಕರಿಸಿಕೊಂಡಿದ್ದು ಎಸ್.ಡಿ.ಜಯರಾಂ. 1985ರಲ್ಲಿ ಒಮ್ಮೆ ಮತ್ತು 1994ರಲ್ಲಿ ಒಮ್ಮೆ ಇದೇ ಆತ್ಮಾನಂದರ ವಿರುದ್ಧ ಜಯರಾಂ ಗೆದ್ದರು. ಆತ್ಮಾನಂದ ಕುಟುಂಬದ ರೌಡಿ ರಾಜಕಾರಣಕ್ಕೆ ಅವರು ನಿಜಕ್ಕೂ ಸೆಡ್ಡು ಹೊಡೆದಿದ್ದರು. ನಂತರ ಆತ್ಮಾನಂದ ಗೆದ್ದ ಎರಡು ಬಾರಿಯೂ ರಾಜ್ಯದಲ್ಲಿ ಕಾಂಗ್ರೆಸ್ ಅಲೆ ಇತ್ತು, 1989ರಲ್ಲಿ ವೀರೇಂದ್ರ ಪಾಟೀಲರ ನೇತೃತ್ವದಲ್ಲಿ ಚುನಾವಣೆ ಎದುರಿಸಿದಾಗ ಕಾಂಗ್ರೆಸ್ 170ರಷ್ಟು ಸಂಖ್ಯೆಯಲ್ಲಿ ಎಂಎಲ್‌ಎಗಳನ್ನು ಗೆಲ್ಲಿಸಿಕೊಂಡಿತ್ತು, ನಂತರ 1999ರ ಚುನಾವಣೆಯಲ್ಲಿ ಎಸ್‌ಎಂ ಕೃಷ್ಣರ ನೇತೃತ್ವದಲ್ಲಿ ಮತ್ತೆ ರಾಜ್ಯಾದ್ಯಂತ ಕಾಂಗ್ರೆಸ್ ಹೆಚ್ಚಿನ ಕ್ಷೇತ್ರಗಳನ್ನು ಬಾಚಿಕೊಂಡಿತ್ತು, 1989ರಲ್ಲಿ ಆತ್ಮಾನಂದ ಸಚಿವರೂ ಆಗಿ ಬೇರೆ ಬೇರೆ ಸಂದರ್ಭಗಳಲ್ಲಿ ಸಣ್ಣ ನೀರಾವರಿ, ತೋಟಗಾರಿಕೆ, ರೇಷ್ಮೆ ಇಲಾಖೆಗಳನ್ನು ಹೊಂದಿದ್ದರು.

ಈ ಯಾವ ಖಾತೆಗಳಲ್ಲೂ ಆತ್ಮಾನಂದ ಸಾಧಿಸಿದ ಮಹಾನ್ ಸಾಧನೆ ಯಾರ ಗಮನಕ್ಕೂ ಬಂದಿಲ್ಲ, ಏಕೆಂದರೆ ಅಂತಹದ್ದೇನನ್ನೂ ಅವರು ಮಾಡಿಲ್ಲ, ರಾಜ್ಯ ಸಚಿವರಾಗಿ ಮಾಡಿದ್ದು ಹೋಗಲಿ, ಮಂಡ್ಯಕ್ಕಾದರೂ ಏನು ಕೊಡುಗೆ ಕೊಟ್ಟರು ಆತ್ಮಾನಂದ ಎಂದು ಕೇಳಿದರೆ ಅವರ ನಿಷ್ಠಾವಂತ ಚೇಲಾಗಳೂ ತಡಕಾಡುತ್ತಾರೆ. ಇಷ್ಟು ದಶಕಗಳ ಕಾಲ ತಮಗೆ ಅಧಿಕಾರ ಕೊಟ್ಟ ಮಂಡ್ಯ ತಾಲೂಕಿನ ಜನಕ್ಕೆ ತಾವೇನು ನೀಡಿದ್ದೇವೆ ಎಂಬ ಪ್ರಶ್ನೆಯನ್ನು ಆ ಕುಟುಂಬ ಕೇಳಿಕೊಂಡಂತಿಲ್ಲ,

ಆದರೆ ಇಲ್ಲಿನ ಜನರಿಗೆ ಒಂದಷ್ಟು ತೊಂದರೆ ಕೊಟ್ಟ ಖ್ಯಾತಿಯಂತೂ ಸಾಕಷ್ಟು ಜನಜನಿತ. ಮಂಡ್ಯ ನಗರದ ರೌಡಿಗಳ ಜಗತ್ತಿಗೂ ಇವರ ಕುಟುಂಬಕ್ಕೂ ಹತ್ತಿರದ ನಂಟು. ಎಷ್ಟರಮಟ್ಟಿಗೆಂದರೆ, ಮಂಡ್ಯ ಭೂಗತ ಲೋಕವನ್ನು ಯಾವ ರೌಡಿ ಆಳಿದರೂ, ನಿಜವಾದ ಡಾನ್ ಆತ್ಮಾನಂದರ ತಮ್ಮ ಡಾ.ಸತ್ಯಾನಂದನೇ ಎಂಬುದು ಇಲ್ಲಿ ಸಾಮಾನ್ಯ ಜ್ಞಾನದ ವಿಷಯ.


ಸುಂದ್ರ, ಅಣ್ಣಯ್ಯ, ಎಸ್.ಕೆ.ರಾಮಣ್ಣ, ಜಡೇಜಾ ರವಿ ಮತ್ತು ತೀರಾ ಇತ್ತೀಚೆಗೆ ಕೊಲೆಯಾದ ಕಿಟ್ಟಿ ಎಲ್ಲರೂ ಇವರ ಬಂಟರೇ. ಇವರೆಲ್ಲರೂ ಒಬ್ಬರಾದ ಮೇಲೆ ಒಬ್ಬರಂತೆ ವಿರೋಧಿಗಳಿಂದ ಕೊಲೆಗೀಡಾದರೂ, ಸತ್ಯಾನಂದರ ಡಾನ್ ಪಟ್ಟಕ್ಕೇನೂ ಕುಂದು ಬರುತ್ತಿರಲಿಲ್ಲ,

ಆದರೆ, 2004ರ ಚುನಾವಣೆಯಲ್ಲಿ ಎಂ.ಶ್ರೀನಿವಾಸ್ ವಿರುದ್ಧ ಸೋತ ಮೇಲೆ ಆತ್ಮಾನಂದರಿಗೆ ಮಂಡ್ಯದಲ್ಲಿ ಹೆಚ್ಚು ಮಾರ್ಕೆಟ್ ಉಳಿಯಲಿಲ್ಲ, ಎರಡು ಮೂರು ವರ್ಷಕ್ಕೊಮ್ಮೆ ಬರುವ ಕಾವೇರಿ ವಿವಾದದಲ್ಲಿ ಮಾದೇಗೌಡರ ಜೊತೆ ಧರಣಿಗಳಲ್ಲಿ ಪಾಲ್ಗೊಳ್ಳುವುದು, ಕೆಆರ್‌ಎಸ್‌ನಿಂದ ನೀರು ಬಿಡಿ ಅಂತ ಪತ್ರಿಕಾ ಹೇಳಿಕೆ ಕೊಡುವುದು, ಎಲ್ಲಾ ರೀತಿಯ ಅಧಿಕೃತ ಸಭೆಗಳಲ್ಲಿ ಸಾಕಷ್ಟು ಉಚಿತ

ಹಿಲರಿಗೂ.. ಮಂಡ್ಯಕ್ಕೂ ಏನ್ಲಾ ಸಂಬಂಧ.....?

ಮಂಡ್ಯದಲ್ಲಿ ಹೀಗೊಂದು ಪ್ರಶ್ನೆ ಹುಟ್ಟಿಕೊಂಡಿದೆ! ಮದ್ದೂರಿನ ಸೋಮನಹಳ್ಳಿ ಮಲ್ಲಯ್ಯನ ಸುಪುತ್ರ ಕೃಷ್ಣ ಕರ್ನಾಟಕವನ್ನ ಹೈಟೆಕ್ ಸಿಂಗಾಪುರ ಮಾಡಕ್ಹೋಗಿ ಅಧಿಕಾರ ಕಳಕಂಡದ್ದು ಹಳೆಕಥೆ. ಕಾಂಗ್ರೆಸ್ನಲ್ಲಿ ಜನಬೆಂಬಲ ಕಳಕೊಂಡವರು ಮಾತ್ರ ರಾಷ್ಟ್ರನಾಯಕರಾಗೋದು ಹೊಸದೇನಲ್ಲಾ ಬಿಡಿ. ಅಂಥವರ ಹೆಸರನ್ನ ಜನ ಮರೆಯಬಾರದು ಅಂತ ಕೆಲವರು ಅಭಿಮಾನಿ ಸಂಘ ಹುಟ್ಟಿಸಿ ಕಟೌಟ್ ಹಾಕ್ತಾರಲ್ಲಾ? ಅಂತಹವರ ಜಾತಿಗೆ ಸೇರಿರುವ ಸತ್ಯಾನಂದ ಎಂಬ ಕಟೌಟ್‌ಶೂರ ಪ್ರತಿಯೊಂದಕ್ಕೂ ಕಟೌಟ್ ಹಾಕಿಸ್ತನೇ ಇರ್ತನೆ. ಎಸ್.ಎಂ.ಕೆ.ಗೆ ಮಂಡ್ಯದಲ್ಲಿ ಅಭಿಮಾನಿ ಅಂತ ಇರೋದು ಇವನೊಬ್ಬನೇ ಅಂತ ಇದರಿಂದ ಸಾಬೀತಾಗುತ್ತಲೂ ಇದೆ. ಕೃಷ್ಣರ ಹುಟ್ಟಿದ ಹಬ್ಬಕ್ಕೆ, ಎಂಪಿಯಾಗಿದ್ದಕ್ಕೆ, ಸಚಿವರಾಗಿದ್ದಕ್ಕೆ, ಎಲ್ಲಕ್ಕೂ ಸಂಭ್ರಮ ಪಟ್ಟಿದ್ದು ಈ ಸತ್ಯಾನಂದ ಎಂಬ ಪೆದ್ದ ವಕೀಲ ಮಾತ್ರ.

ಈಗ ಈತ ಇನ್ನೊಂದು ಹಾಸ್ಯಾಸ್ಪದ ಕಟೌಟ್ ಹಾಕಿಸಿದ್ದಾನೆ. ಮೊನ್ನೆ ಕೃಷ್ಣ ಅಮೆರಿಕಕ್ಕೆ ಹೋದಾಗ ವೈಟ್‌ಹೌಸಿನಲ್ಲಿ ಒಬಾಮಾ ಮತ್ತು ಹಿಲರಿ ಕ್ಲಿಂಟನ್‌ರ ಜೊತೆ ನಿಂತು ನಾಲ್ಕು ಮಾತಾಡಿ ಫೋಟೋ ತೆಗೆಸಿಕೊಂಡಿದ್ದು ಎಲ್ಲಾ ಕಡೆ ಸುದ್ದಿಯಾಗಿತ್ತು. ಅದನ್ನು ಕಂಡಕೂಡಲೇ ಸತ್ಯಾನಂದನ ಅಭಿಮಾನ ಇದ್ದಕ್ಕಿದ್ದಂತೆ ಕೆರಳಿಬಿಟ್ಟಿದೆ. ಕೂಡಲೇ ಫ್ಲೆಕ್ಸ್ ರೆಡಿ ಮಾಡಿಸಿಕೊಂಡು, ಸಂಜಯ ವೃತ್ತಕ್ಕೆ ಹೋಗಿ ಹಾಕಿಸಿದ್ದಾನೆ. ಅದರಲ್ಲಿ 'ಜಗತ್ತಿನ ಹಿರಿಯಣ್ಣನ ಮುಂದೆ ದೇಶದ ಕೀರ್ತಿ ಎತ್ತಿ ಹಿಡಿದ ಕರ್ನಾಟಕದ ಮುಕುಟಮಣಿ, ಮಂಡ್ಯ ಜಿಲ್ಲೆಯ ಹೆಮ್ಮೆಯ ಪುತ್ರ' ಎಂದು ಸರ್ಟಿಫಿಕೇಟನ್ನೂ ದಯಪಾಲಿಸಲಾಗಿದೆ. ಮದ್ದೂರಿನಲ್ಲಿ ಕೃಷ್ಣರ ಸ್ವಂತ ತಮ್ಮನ ಮಗ ನಿಂತಾಗ ಠೇವಣಿ ನಷ್ಟವಾದದ್ದು ಏಕೆ ಎಂಬುದರ ಕುರಿತು ಆತ್ಮಾವಲೋಕನವಿಲ್ಲದ ಕೃಷ್ಣ, ಸತ್ಯಾನಂದ ಕಾಂಬಿನೇಷನ್ನಿನ ಇಂತಹ ಕಟೌಟ್‌ಗಳು ಕಂಡಾಗ, ಮಂಡ್ಯ ಜಿಲ್ಲೆಯ ಜನ ಆಶ್ಚರ್ಯಚಕಿತರಾಗಿ 'ಮಂಡ್ಯಕ್ಕೂ ಹಿಲರಿಗೂ ಏನು ಸಂಬಂಧ?' ಅಂತ ಕೇಳುತ್ತಿದ್ದಾರೆ. ಇದಕ್ಕೆ ಸತ್ಯಾ ಉತ್ತರಿಸುವನೇ...?



-ಲಕ್ಷ್ಮಣ್ ಚೀರನಹಳ್ಳಿ,
lakshmancheeranahally@gmail.com

ಬಾಗಲಕೋಟೆ : ಪದವೀಧರ ಕ್ಷೇತ್ರದಲ್ಲಿ ಹಣ-ಹೆಂಡ ಹರಿದಾಟ

ಪದವೀಧರ ಕ್ಷೇತ್ರದ ಚುನಾವಣೆ ಘೋಷಣೆಯಾಗಿರುವ ಹಿನ್ನೆಲೆಯಲ್ಲಿ ಬಿಜಾಪುರ, ಬೆಳಗಾವಿ, ಬಾಗಲಕೋಟೆ ಜಿಲ್ಲೆಗಳನ್ನೊಳಗೊಂಡ ವಾಯುವ್ಯ ಕ್ಷೇತ್ರ ರಂಗೇರಿದೆ. ವಿಪರ್ಯಾಸವೆಂದರೆ ಈ ಚುನಾವಣೆಯ ಮೂಲ ಆಶಯಕ್ಕೆ ಅಪಮಾನಕರವಾಗಿ ಹಣ-ಹೆಂಡಗಳ ಹಂಚಿಕೆಯಾಗುತ್ತಿದೆ. ಒಂದು ಲಕ್ಷ ಮತ ಹೊಂದಿರುವ ಈ ಕ್ಷೇತ್ರದಲ್ಲೀಗ ವಿಧಾನಸಭಾ ಚುನಾವಣೆಯನ್ನೇ ಮೀರಿಸುವಂತೆ ಆಮಿಷ ಒಲೈಕೆಗಳು ಜಾರಿಯಲ್ಲಿವೆ.






ಸತತ ನಾಲ್ಕು ಬಾರಿ ಗೆದ್ದಿರುವ ಎಂ.ಪಿ.ನಾಡಗೌಡ ಮತ್ತೊಂದು ಅವಕಾಶದ ನಿರೀಕ್ಷೆಯ ಕಣದಲ್ಲಿದ್ದಾರೆ. ಕಾಂಗ್ರೆಸ್‌ನಿಂದ ಮಹಾಂತೇಶ ಕೌಜಲಗಿ ಹಾಗೂ ಬಿಜೆಪಿಯಿಂದ ಮುತಾಲಿಕ್ ದೇಸಾಯಿ ಕಣದಲ್ಲಿದ್ದಾರೆ. ಒಟ್ಟಾರೆಯಾಗಿ ತ್ರಿಕೋನ ಸ್ಪರ್ಧೆ ಏರ್ಪಟ್ಟಿರುವುದು ಖಚಿತವಾಗಿದೆ.

1984ರಲ್ಲಿ ಬಾಗಲಕೋಟೆಯಿಂದ ಲೋಕಸಭೆಗೆ ಸ್ಪರ್ಧಿಸಿ ನೆಲಕಚ್ಚಿದ ನಾಡಗೌಡ ರಾಮಕೃಷ್ಣ ಹೆಗಡೆಯವರ ದಯೆಯಿಂದ ಪರಿಷತ್‌ಗೆ ಸ್ಪರ್ಧಿಸಿ ಗೆದ್ದವರು. ಅಲ್ಲಿಂದೀಚೆಗೆ ಪರಿಷತ್ ಎಂಬುದು ಈತನ ಕಾಯಂ ಮನೆಯಂತಾಗಿ ಹೋಯಿತು. ಅವಧಿಯಲ್ಲಿ ಏನಾದರೂ ಕೆಲಸ ಮಾಡಿದ್ದರಾ ಅಂತ ನೋಡಹೋದರೆ ಈತನ ನಿಷ್ಕ್ರಿಯತೆ, ಆಲಸಿತನಗಳು ಹೊರತಾಗಿ ಬೇರಾವವೂ ಗೋಚರಿಸುವುದಿಲ್ಲ, ಹಾಗಂತ ಈತನಿಂದ ಯಾರಿಗೂ ಕೆಟ್ಟದ್ದಾಗಿಲ್ಲ, ಒಳ್ಳೆಯದಂತೂ ಆದ ಉದಾಹರಣೆಗಳಿಲ್ಲ!

ಇನ್ನು ಕಾಂಗ್ರೆಸ್‌ನಿಂದ ಸ್ಪರ್ಧಿಸಿರುವ ಮಹಾಂತೇಶ ಕೌಜಲಗಿಯದ್ದು ಹೊಸ ಮುಖ. ಯುವಕನಾಗಿರುವ ಈತ ಯುವಕರನ್ನು ತನ್ನತ್ತ ಸೆಳೆದುಕೊಳ್ಳಬಲ್ಲನೆಂಬ ಮಾತುಗಳು ಕೇಳಿಬರುತ್ತಿವೆ. ಆದರೆ ಬಾಗಲಕೋಟೆ, ಬಿಜಾಪುರ ಜಿಲ್ಲೆಗಳಲ್ಲಿ ಕಾಂಗ್ರೆಸ್ ಒಡೆದ ಮನೆಯಂತಾಗಿರುವುದರಿಂದ ಈತನ ಪರ ಕೆಲಸಕ್ಕೆ ಹಿನ್ನಡೆಯುಂಟಾಗುವ ಸಾಧ್ಯತೆಯಿದೆ. ಕೊರತೆಯನ್ನು ನೀಗಿಸಿಕೊಂಡರೆ ಯುವ ಅಭ್ಯರ್ಥಿ ಕೌಜಲಗಿ ದಡ ಸೇರುವ ಸಾಧ್ಯತೆಗಳಿವೆ.



ದುರಂತವೆಂದರೆ ಗೆಲ್ಲಬಹುದಾದ ಅಭ್ಯರ್ಥಿಯ ಪರ ಕೆಲಸ ಮಾಡುವ ಮನಸ್ಸು-ಪುರುಸೊತ್ತು ಈ ಭಾಗದ ಕಾಂಗ್ರೆಸ್ಸಿಗರಿಗೆ ಇಲ್ಲವಾಗಿದೆ. ಸೋಂಭೇರಿತನವನ್ನೇ ಮೈಗೂಡಿಸಿಕೊಂಡಿರುವ ಬಹುತೇಕ ನಾಯಕರುಗಳು ವೃಥಾ ಅಡ್ಡಾಡುತ್ತಿದ್ದಾರೆ ವಿನಃ ಪ್ರಾಮಾಣಿಕ ಕೆಲಸ ಮಾಡುತ್ತಿಲ್ಲ, ಕಾಂಗ್ರೆಸ್‌ನ ಈ ಬೇಜವಾಬ್ದಾರಿತನ ಬಿಜೆಪಿಗೆ ವರವಾಗುವ ಸಾಧ್ಯತೆಗಳಿವೆ. ಈ ಸಂಗತಿಯನ್ನು ಕಾಂಗ್ರೆಸ್ ಕಾರ್ಯಕರ್ತರೇ ಮಾತಾಡಿಕೊಳ್ಳುತ್ತಿದ್ದರೂ ಹುಲ್ಲಪ್ಪ ಮೇಟಿ ಎಂಬ ಕಾಂಗ್ರೆಸ್‌ನ ಜಿಲ್ಲಾಧ್ಯಕ್ಷ ತಮ್ಮದೇ ಅಭ್ಯರ್ಥಿ ಕೌಜಲಗಿ ಕಾಲೆಳೆಯುವುದರಲ್ಲಿ ಬ್ಯುಸಿಯಾಗಿದ್ದಾನೆ. ಈತ ಬಿಜೆಪಿಯೊಂದಿಗೆ ಒಳ ಒಡಂಬಡಿಕೆ ಮಾಡಿಕೊಂಡಿದ್ದಾನೆಂಬ ಮಾತೂ ಕೇಳಿಬರುತ್ತಿದೆ.

ಇನ್ನು 55ರ ಗಡಿದಾಟಿರುವ ಮುತಾಲಿಕ್ ದೇಸಾಯಿ ಬಿಜೆಪಿಯಿಂದ ಸ್ಪರ್ಧಿಸಿರುವ ಬೆಳಗಾಂ ಮೂಲದವನು. ನಿವೃತ್ತಿಯ ಬೇಸರ ಕಳೆಯಲೆಂದೇ

ಸಲಹೆಗಳನ್ನು ನೀಡುವುದು, ಮೈಷುಗರ್ ಸಭೆಗಳಲ್ಲಿ ತಪ್ಪದೇ ಪಾಲ್ಗೊಳ್ಳುವುದು ಇಷ್ಟಕ್ಕೆ ಅವರು ಸೀಮಿತರಾದರು.

ಇಷ್ಟರ ಮೇಲೆ ಎಲ್ಲೆಡೆ ಆತ್ಮಾನಂದರು ಹೆಸರುವಾಸಿಯಾಗಿದ್ದು ಅವರ 'ಸಜ್ಜನಿಕೆ'ಯಿಂದ. ಯಾರನ್ನೂ ಜೋರಾಗಿ ...ಗದರಿ ಮಾತನಾಡಿಸದ, ಆತ್ಮೀಯವಾಗಿ ಮಾತನಾಡಿಸುವ ಅವರ ಬಗ್ಗೆ ಕೆಲವು ಕಥೆಗಳೂ ಹುಟ್ಟಿಕೊಂಡಿವೆ. ಆದರೆ ...ಸ್ಥಿತಿಯಲ್ಲಿ ಈ ಸಜ್ಜನಿಕೆ ಯಾರಿಗೂ ಒಳ್ಳೆಯದನ್ನು ಮಾಡಿದಂತೆ ...ಕಂಡಿಲ್ಲ.

ತಾವು ಮಂಡ್ಯವನ್ನು ಆಳಿದ ಉದ್ದಕ್ಕೂ ಸ್ಲಂ ಜನರನ್ನು ...ಮ್ಮ ಓಟ್‌ಬ್ಯಾಂಕಾಗಿ ಬಳಸಿಕೊಂಡ ಶಿವನಂಜಪ್ಪನವರ ...ಕುಟುಂಬವು ಅವರಿಗೆ ಒಳ್ಳೆಯದನ್ನಂತೂ ಮಾಡಲಿಲ್ಲ. ...ತಮಿಳು ಕಾಲೋನಿ ಜನರಿಗೆ ಮನೆ ಕಟ್ಟಿಸಿಕೊಟ್ಟವಿ' ...ಎಂತ ಯಾವಾಗಲೂ ಕೊಚ್ಚಿಕೊಳ್ಳುವುದನ್ನೂ ಬಿಡಲಿಲ್ಲ. ...ಈ ರೀತಿ ಕಟ್ಟಿದ ಮನೆಗಳಲ್ಲಿ ಹಾಲಹಳ್ಳಿ ಸ್ಲಂಬೋರ್ಡ್ ...ಮನೆಗಳೂ ಇವೆ. ಅಲ್ಲಿ ಕಟ್ಟಿದ ಮನೆಗಳಲ್ಲಿ ಮೂರರಲ್ಲಿ ...ಒಂದು ಭಾಗಕ್ಕೆ ಕಂಟ್ರಾಕ್ಟರ್ ಸ್ವತಃ ಆತ್ಮಾನಂದರ ಚಿಕ್ಕಪ್ಪ ...ಎಂ.ಕೆ.ರಾಮಲಿಂಗೇಗೌಡರು. ಲೋಡುಗಟ್ಟಲೆ ಮರಳು, ...ಬುವೇ ಚೀಲ ಸಿಮೆಂಟ್‌ನಲ್ಲಿ ಕಟ್ಟಿದ ಈ ಮನೆಗಳ ...ಮೊದಲ ಅಂತಸ್ತು ಈಗಾಗಲೇ ಬೀಳುವ ಹಂತ ತಲುಪಿದೆ.

ಅದೇ ಸ್ಲಂ ಜನರನ್ನು ಗಾರೆ ಕೆಲಸಕ್ಕೆ ಬಳಸಿಕೊಂಡಿದ್ದರಿಂದ ...ಮಿಳು ಕಾಲೋನಿ ಜನ ಅಲ್ಲಿಗೆ ಹೋಗಲಿಲ್ಲ. ಆದರೆ ...ವರುಗಳ ಮೇಲೆ ಗೂಬೆ ಕೂರಿಸುವುದು ತಪ್ಪಿಲ್ಲ. ...ಂತಹುದೇ ಅದೆಷ್ಟೋ ಕಾಮಗಾರಿಗಳನ್ನು ಹದಗೆಡಿಸಿದ ...ಮಲಿಂಗೇಗೌಡರಿಗೆ ಈ ವಯಸ್ಸಿನಲ್ಲೂ ಕಂಟ್ರಾಕ್ಟ್‌ಗಳು ...ಪ್ಪಿಲ್ಲ. ಲೋಡುಗಟ್ಟಲೆ ಮರಳಲ್ಲಿ ಬಿಲ್ಡಿಂಗ್ ಕಟ್ಟಿಸುವುದೂ ...ತಿಲ್ಲ.

ಇದೇ ರಾಮಲಿಂಗೇಗೌಡರು ಅಧ್ಯಕ್ಷರಾಗಿರುವ ...ಳಿಕಾಂಬ ಟ್ರಸ್ಟ್‌ನಿಂದ ಕಾಳಿಕಾಂಬ ಸ್ಲಂ ಜನರಿಗೂ ...ನ್ನಿಲ್ಲದ ಕಿರುಕುಳ ನೀಡಲಾಗುತ್ತಿದೆ. ಕಿಟ್ಟಿ ಬದುಕಿರುವ ...ರೆಗೂ ಅವನ ಮೂಲಕ ಜನರಿಗೆ ತೊಂದರೆ ಕೊಡುವುದು, ...ತ್ತಂಗಡಿಯ ಭಯವನ್ನು ಮೂಡಿಸುವುದು ನಡೆಯುತ್ತಿತ್ತು. ...ವನು ಸತ್ತ ಮೇಲೆ ಸೀದಾ ಹೈಕೋರ್ಟ್‌ನ ಆಯಕಟ್ಟಿನ ...ಗಗಳಲ್ಲಿರುವವರನ್ನೇ ಅಡ್ಜಸ್ಟ್ ಮಾಡಿಕೊಂಡರು. ಅಲ್ಲಿ ...ರ್ಕಾರೀ ವಕೀಲನೇ ಸರ್ಕಾರದ ವಿರುದ್ಧ ವಾದ ಮಾಡುವಂತೆ ...ನೋಡಿಕೊಂಡರು. ಹೀಗಾಗಿ ಇಂದು ಕಾಳಿಕಾಂಬ ಸ್ಲಂ ...ವಾಸಿಗಳನ್ನು ಒಂದು ತಿಂಗಳಲ್ಲಿ ಎತ್ತಂಗಡಿ ...ಮಾಡಿಸಲಾಗುವುದು ಎಂದು ಹೇಳಲಾಗುತ್ತಿದೆ. ಬಹುಶಃ ...ಶಕಗಳಗಟ್ಟಲೆ ಇವರ ಕುಟುಂಬಕ್ಕೆ ದುಡಿದ, ಓಟುಹಾಕಿದ ...ನರಿಗೆ ಆತ್ಮಾನಂದ 60 ವರ್ಷದ ಹುಟ್ಟುಹಬ್ಬದ ...ಸಂದರ್ಭದಲ್ಲಿ ನೀಡುವ ಗಿಫ್ಟ್ ಇದು ಅನ್ನಿಸುತ್ತದೆ. ...ಗಲಾದರೂ ಕಾಳಮ್ಮ ದೇವತೆ ಆತ್ಮಾನಂದರಿಗೆ ಒಳ್ಳೆಯ ...ಬುದ್ಧಿ ಕಲಿಸಿ ಸ್ಲಂ ಜನರನ್ನು ಕಾಡುವುದನ್ನು ಬಿಡು ಎಂದು ...ಹೇಳಲಿ ಎಂದು ಕಾಳಮ್ಮನಿಗೆ ತಡೆ ಒಡೆಸಲು ಜನ ...ಮುಂದಾಗುತ್ತಿದ್ದಾರೆ.

ತಮ್ಮ ಹೊರಗಿನ ಸಜ್ಜನಿಕೆ ಮತ್ತು ಇಷ್ಟು ವರ್ಷಗಳ ...ರಾಜಕಾರಣದ ಅನುಭವ ಆತ್ಮಾನಂದರಲ್ಲಿ ಏನಾದರೂ ...ಬದಲಾವಣೆ ತಂದರೆ, ಮಂಡ್ಯ ಜಿಲ್ಲೆಯಲ್ಲಿ ಮಲಗಿರುವ ...ಂಗ್ರೆಸ್ ಪಕ್ಷಕ್ಕೆ ನಾಯಕರಾಗುವ ಸಾಧ್ಯತೆ ಇಂದೂ ಇದೆ. ...ಡೀ ಜಿಲ್ಲೆಯನ್ನು ತಡಕಾಡಿದರೂ ಒಬ್ಬ ಸಮರ್ಥ ನಾಯಕ ...ಒಂದು ಶತಮಾನದಷ್ಟು ಹಳೆಯ ಪಕ್ಷದಲ್ಲಿ ಕಾಣುತ್ತಿಲ್ಲ. ...ತ್ಮಾನಂದರಿಗೆ ನಿಜಕ್ಕೂ ಅಂತಹ ಸ್ಥಾನವನ್ನು ತುಂಬುವ ...ಪಿ ಇದ್ದರೆ ಅವರೊಳಗೆ ಈ ಬದಲಾವಣೆ ಬರಬೇಕಿದೆ ...ಷ್ಟೆ. ●

...ಪತ್ ಸೇರುವ ತವಕದಲ್ಲಿರುವ ಈತ ಪಕ್ಕಾ ...ರಿವೀರ. ಸಂಕಷ್ಟದಲ್ಲಿರುವವರ ...ಃಖದುಮ್ಮಾನಗಳಿಗೆ ಕಣ್ಣು ಕಿವಿ ಸ್ಪಂದಿಸಿದ ...ದಾಹರಣೆಗಳೇ ಇಲ್ಲ. ಆದರೆ ...ಘಪರಿವಾರಿಗಳು ಇದ್ದಬದ್ದವರ ಮೇಲೆಲ್ಲ ...ದ್ದ ಹೇರಿ ಮುತಾಲಿಕನನ್ನು ಗೆಲ್ಲಿಸುವ ...ಹಸಕ್ಕಿಳಿದಿವೆ. ಇದೇ ಬಲದಿಂದ ...ಣ-ಹೆಂಡಗಳೂ ಹರಿದಾಡುತ್ತಿವೆ.

ಆದರೀಗ ಬಿಜೆಪಿಯಲ್ಲೇ ಮುತಾಲಿಕನಿಗೆ ...ಟು ಸಿಕ್ಕಿದ್ದರಿಂದ ಭಿನ್ನಮತ ಭುಗಿಲೆದ್ದಿದೆ. ...ಟ್ ತಪ್ಪಿ ಕಂಗಾಲಾಗಿರುವ ಮಲ್ಲಮ್ಮ ...ಪತಿ ಎಂಬಾತ ಈ ಬಂಡಾಯದ ರೂವಾರಿ. ...ಃ ಸಂಘಪರಿವಾರಿಯಾದ ಈತ ಅದೇ ...ರಿಯುಲ್ಲಿ ಬಂಡಾಯ ಅಭ್ಯರ್ಥಿಯಾಗಿ ...ದಲ್ಲಿದ್ದಾನೆ.

...ಒಟ್ಟಾರೆಯಾಗಿ ವಾಯುವ್ಯ ಪದವೀಧರ ...ತ್ರದ ಫಲಿತಾಂಶವನ್ನು ಹಣ-ಹೆಂಡಗಳ ಕಮಟಿನ ...ಬೆಯೇ ಎದುರುನೋಡುವಂತಾಗಿದೆ.

● ಮೇಘರಾಜ್


'ಜಿಮ್'ನಲ್ಲಿ ಉಂಡು ತೇಗಿದವರು...

ಮೀಡಿಯಾ ಮ್ಯಾಟರ್ಸ್

ಭಾರೀ ಸಾಧನೆ ಎಂಬಂತೆ 'ಜಾಗತಿಕ ಬಂಡವಾಳಿಗರ ಸಮಾವೇಶ GIM'ಅನ್ನು ಸರ್ಕಾರ ಮಾಡಿ ಮುಗಿಸಿದೆ. ಅಲ್ಲಿಗೆ ಕನ್ನಡ ನೆಲದ ಒಂದೂವರೆ ಲಕ್ಷ ಎಕರೆ ಭೂಮಿ, ನದಿನೀರು, ವಿದ್ಯುತ್ ಎಲ್ಲ ಹರಾಜಾಗಿದೆ. ಲಕ್ಷಾಂತರ ಕುಟುಂಬಗಳ ಭವಿಷ್ಯವನ್ನು ಹೊಸಕಿ ಹಾಕಲಿರುವ ಈ ಮೆಗಾ 'ದಂಧೆ'ಯ ಬಗ್ಗೆ ಜಾಗೃತಿಯಿಂದ ವಿಶ್ಲೇಷಿಸಬೇಕಿದ್ದ ನಾಡಿನ ಮಾಧ್ಯಮಗಳು ಇದನ್ನು 'ಕೈಗಾರಿಕಾ ಕ್ರಾಂತಿ' ಎಂದು ಬೇಕಾಬಿಟ್ಟಿಯಾಗಿ ಬರೆದು ಕೈತೊಳೆದುಕೊಂಡಿವೆ. ಜೊತೆಗೆ ಜಾಹೀರಾತುಗಳ ಮೂಲಕ ಜೇಬನ್ನೂ ತುಂಬಿಸಿಕೊಂಡಿವೆ. ಆ ಮೂಲಕ ತಮ್ಮ ಓದುಗರು, ವೀಕ್ಷಕರನ್ನು ಮೋಸಗೊಳಿಸಿವೆ.

ಸರ್ಕಾರದಿಂದ ಅಂತರ ಕಾಯ್ದುಕೊಂಡು ಸರಿ, ತಪ್ಪುಗಳ ಮಾಡಬೇಕಿದ್ದ ಪ್ರಮುಖ ದಿನಪತ್ರಿಕೆಗಳು ಕೋಟಿ ಕೋಟಿ ರೂಪಾಯಿಗಳ ಜಾಹೀರಾತುಗಳ ಹಂಗಿಗೆ ಬಿದ್ದು ಈ ಸಮಾವೇಶವನ್ನು ಹಾಡಿಹೊಗಳಿವೆ.

ಬಿಡಿಎ, ಬೆಂಗಳೂರು ಜಲಮಂಡಳಿ, ಕರ್ನಾಟಕ ಕೃಷಿ ಮಾರಾಟ ಮಂಡಳಿ ಪೌರಾಡಳಿತ ಇಲಾಖೆ, ಕೈಗಾರಿಕಾ ಇಲಾಖೆ, ಆರೋಗ್ಯ ಇಲಾಖೆ, ಪ್ರವಾಸೋದ್ಯಮ ಇಲಾಖೆಗಳು ಪೈಪೋಟಿಗೆ ಬಿದ್ದವರಂತೆ ಪೂರ್ಣ ಪುಟದ, ಅರ್ಧಪುಟದ, ಕಾಲುಪುಟದ ಕಲರ್ ಜಾಹೀರಾತುಗಳನ್ನು ನೀಡಿ ಸಾರ್ವಜನಿಕರ ತೆರಿಗೆ ಹಣವನ್ನು ಪೋಲು ಮಾಡಿವೆ. ಈ ಜಾಹೀರಾತಿನ 'ಪ್ರಭಾವ' ಎಷ್ಟಿತ್ತೆಂದರೆ ಈ ಸಮಾವೇಶದ ವರದಿಗಳ, ಲೇಖನಗಳ ಸ್ವರೂಪ ಹೇಗಿರಬೇಕೆಂದು ನಿರ್ದೇಶಿಸಿದ್ದು ಪತ್ರಿಕೆಗಳ ಎಡಿಟೋರಿಯಲ್ ಟೀಮ್ ಅಲ್ಲ; ಬದಲಿಗೆ ಅಡ್ವಟೈಸಿಂಗ್ ಸೆಕ್ಷನ್!



ಇವತ್ತು ಜಂಗಲ್‌ಮಹಲ್‌ನಲ್ಲಿ ಸಂಘರ್ಷ ಶುರುವಾಗಿರುವುದೇ ಈ ಬಂಡವಾಳ ಹೂಡಿಕೆ ಎಂಬ ಲೂಟಿಕೋರ ನೀತಿಯಿಂದ. ಕೈಗಾರಿಕೆಗಳ ಹೆಸರಲ್ಲಿ ಅರಣ್ಯ ಭೂಮಿ, ಕೃಷಿ ಭೂಮಿಗಳನ್ನು ಮಿತ್ತಲ್-ಟಾಟಾ-ಅಂಬಾನಿಗಳಿಗೆ ನೀಡಲೆಂದೇ ಈ 'ಜಿಮ್' ಸಮಾವೇಶಗಳು ನಡೆಯುತ್ತಿವೆ.

ಇವತ್ತು ರಾಜ್ಯದಲ್ಲಿ ಉಕ್ಕು ಘಟಕಗಳ ಸ್ಥಾಪನೆಗೆ ಎರಡು ಲಕ್ಷ ಕೋಟಿಗಿಂತ ಹೆಚ್ಚಿನ ಬಂಡವಾಳ ಬರಲಿದೆ ಎಂಬುದು 'ನಮ್ಮ' ಮೀಡಿಯಾಗಳಿಗೆ ಹೆಮ್ಮೆ ಮೂಡಿಸಿದೆ. ಪಶ್ಚಿಮ ಬಂಗಾಳದ ಲಾಲ್‌ಘಡ್‌ನಲ್ಲಿ ಸಂಘರ್ಷ ಶುರುವಾಗಿರುವುದು ಜಿಂದಾಲ್ ಕಂಪನಿಯ ಉಕ್ಕು ಕಂಪನಿಗಾಗಿ ಐದು ಸಾವಿರ ಎಕರೆ ಅರಣ್ಯ ಕೃಷಿ ಭೂಮಿಯನ್ನು ವಶಪಡಿಸಿಕೊಂಡಿರುವುದರಿಂದ. ಈಗ ಮಿತ್ತಲ್ ಪೋಸ್ಕೊ, ಬ್ರಹ್ಮಣಿ ಸ್ಟೀಲ್ಸ್ ಇತ್ಯಾದಿ ದರೋಡೆಕೋರ ಕಂಪನಿಗಳಿಗಾಗಿ ರಾಜ್ಯದಲ್ಲಿ ಒಂದೂವರೆ ಲಕ್ಷ ಎಕರೆಗೂ ಮೀರಿದ ಭೂಸ್ವಾಧೀನ ನಡೆಯಲಿದೆ. ಅಂದರೆ ಬಳ್ಳಾರಿ, ಕೊಪ್ಪಳ, ಬಾಗಲಕೋಟೆಯ ಲಕ್ಷಾಂತರ ರೈತ ಕುಟುಂಬಗಳು, ಕೃಷಿ ಕಾರ್ಮಿಕರ ಕುಟುಂಬಗಳು ಸರ್ಕಾರ ನೀಡುವ 'ಪರಿಹಾರ' ಪಡೆದು ಬೀದಿಗೆ ಬೀಳಲಿವೆ. ಇವತ್ತಿಗೂ ಸರಿಯಾಗಿ ಕುಡಿಯುವ ನೀರು ಸಿಗದ ಈ ಸೀಮೆಯಲ್ಲಿ, ಕೃಷ್ಣಾ, ತುಂಗಭದ್ರೆ, ಘಟಪ್ರಭಾಗಳ ನೀರೆಲ್ಲ ಈ ಸೊಕ್ಕಿನ ಉಕ್ಕುದೊರೆಗಳ ಪಾಲಾಗಲಿದೆ. ಇಂತಹ ದಾರುಣ ಭವಿಷ್ಯ ತಂದಿಕ್ಕಲಿರುವ ಈ 'ಜಿಮ್' ಸಮಾವೇಶವನ್ನು 'ನ ಭೂತೋ, ನ ಭವಿಷ್ಯತ್' ಎಂಬಂತೆ ಹಾಡಿ ಹೊಗಳಿದ ಮೀಡಿಯಾಗಳನ್ನು ಏನೆಂದು ಕರೆಯುವುದು?

ಒಂದೂವರೆ ಲಕ್ಷ ಎಕರೆ ಕೃಷಿ ಭೂಮಿ ಈ ರಕ್ಕಸರ ಪಾಲಾಗುವುದರಿಂದ ಕರ್ನಾಟಕದ ಗ್ರಾಮೀಣ ಆರ್ಥಿಕತೆಯೇ ಕುಸಿಯಲಿದೆ. ಸರಾಸರಿ ಒಂದು ಎಕರೆಯನ್ನು ಐದು ಜನರ ಕುಟುಂಬ ಆಧರಿಸಿದೆ ಎಂದು ಲೆಕ್ಕ ಹಾಕಿದರೆ, ಸುಮಾರು ಏಳೂವರೆ ಲಕ್ಷ ಜನ ಬೀದಿಗೆ ಬೀಳಲಿದ್ದಾರೆ. ಇದರ ಜೊತೆಗೆ ಈ ಕೃಷಿ ಭೂಮಿಯಲ್ಲಿ ಕೆಲಸ ಮಾಡುವ ಅಷ್ಟೇ ಸಂಖ್ಯೆಯ ಕೃಷಿ ಕಾರ್ಮಿಕರೂ ನಿರುದ್ಯೋಗಿಗಳಾಗಲಿದ್ದಾರೆ. ಎಂಟು ಲಕ್ಷ ಉದ್ಯೋಗ ಸೃಷ್ಟಿ ಎಂಬ ಸುಳ್ಳನ್ನೇ ಹೈಲೈಟ್ ಮಾಡಿದ ಮಾಧ್ಯಮಗಳಿಗೆ ಭೂಸ್ವಾಧೀನದ ಹಿಂದಿನ ಸತ್ಯ ಗೊತ್ತೇ ಆಗಲಿಲ್ಲವೆ? ಅಥವಾ ಕೋಟಿ ಕೋಟಿ ಮೌಲ್ಯದ ಜಾಹೀರಾತುಗಳು ಅವರನ್ನು ದಾರಿ ತಪ್ಪಿಸಿದವೆ?

ಬೆಳಗಾವಿಯ ಮಾಸ್ತಿಹೊಳೆಯಲ್ಲಿ ಜುವಾರಿ ಕೆಮಿಕಲ್ಸ್ ಆಂಡ್ ಫರ್ಟಿಲೈಸರ್ಸ್ 4500 ಕೋಟಿ ಹೂಡಿಕೆ ಮಾಡಿ 1500 ಉದ್ಯೋಗ ಸೃಷ್ಟಿಸುವುದಂತೆ! ಒಂದು ಉದ್ಯೋಗಕ್ಕಾಗಿ 3 ಕೋಟಿ ರೂ. ಹೂಡಿಕೆಯೇ? ಹಾಗೆಯೇ ಇಂಡಿಯಾ ಸಿಮೆಂಟ್ಸ್ ಗುಲ್ಬರ್ಗಾದಲ್ಲಿ 850 ಕೋಟಿ ಬಂಡವಾಳ ಹೂಡಿ 175 ಉದ್ಯೋಗಗಳನ್ನು ಸೃಷ್ಟಿಸುವುದಂತೆ... ಒಂದು ಉದ್ಯೋಗಕ್ಕಾಗಿ 5 ಕೋಟಿ ರೂ. ಹೂಡಿಕೆ ಮಾಡಲಿದೆಯೇ ಈ ಕಂಪನಿ? ಇದನ್ನು ಬಿಡಿ, ಈ ಕಂಪನಿಗಳು ಕಬಳಿಸಲಿರುವ ಸಾವಿರಾರು ಎಕರೆ ಕೃಷಿಭೂಮಿಗೆ, ಅವು ಬಳಸಲಿರುವ ನದಿನೀರು, ಕರೆಂಟಿಗೆ ಬೆಲೆ ಕಟ್ಟುವವರಾರು? ಈ ನಾಡಿನ ಜನ ಇದಕ್ಕೆಲ್ಲ ದಂಡ ತೆರಬೇಕೆ? ಈ ಯಾವ ಪ್ರಶ್ನೆಗಳನ್ನೂ ಹಾಕಿಕೊಳ್ಳದ ಮಾಧ್ಯಮಗಳು ಪ್ರಭುತ್ವದ ಪಕ್ಕಾ ಗುಲಾಮರಾಗಿಬಿಟ್ಟಿದ್ದು ಮಾತ್ರ ಶೋಚನೀಯ ವಿಷಯ.

'ಅಲ್ರೀ, ಕರ್ನಾಟಕಕ್ಕೆ ಈ ಪರಿ ಬಂಡವಾಳ ಬರ್‍ತಿದೆ, ಲಕ್ಷಾಂತರ ನಿರುದ್ಯೋಗಿಗಳಿಗೆ ಕೆಲ್ಸ ಸಿಗ್ತಿದೆ. ಇದಕ್ಕಿಂತ ಇನ್ನೇನು ಬೇಕು?' ಎಂಬ ಪ್ರಶ್ನೆಯನ್ನು ಮಾಧ್ಯಮದ ಪಂಡಿತರು ಎತ್ತಬಹುದು. ಕೈಗಾರಿಕಾ ಸಚಿವ ಮುರುಗೇಶ್ ನಿರಾಣಿಯೂ ಈ ಪ್ರಶ್ನೆಯನ್ನು ಎತ್ತಬಹುದು. ಆಯ್ತು ಕೋಟ್ಯಾಂತರ ಬಂಡವಾಳ ಬರುತ್ತೆ ಲಕ್ಷಾಂತರ ಕೆಲ್ಸ ಸಿಗ್ತಾವೆ ಅಂದುಕೊಳ್ಳೋಣ. ಆದರೆ ಇದನ್ನೆಲ್ಲ ವಿವರಿಸಲು, 'ಜಿಮ್' ಸಮಾವೇಶಕ್ಕೂ ಮೊದಲು ನಿರಾಣಿಯೇಕೆ ಎಲ್ಲ ಪ್ರಮುಖ ದಿನಪತ್ರಿಕೆಗಳ ಆಫೀಸಿಗೆ ಹೋಗಿದ್ದರು? ಇಡೀ ವಾರಪೂರ್ತಿ 'ಜಿಮ್' ಪರವಾದ ಸರ್ಕಾರಿ ಜಾಹೀರಾತುಗಳೇಕೆ ಎಲ್ಲ ಪತ್ರಿಕೆಗಳಲ್ಲಿ ಪ್ರಕಟಗೊಂಡವು? ಕೊನೆಗೆ 'ಜಿಮ್' ಸಮಾವೇಶ ಕುರಿತ ವರದಿಗಳೇಕೆ 'ಪೇಯ್ಡ್ ನ್ಯೂಸ್' ತರಹ ಬರೆಯಲ್ಪಟ್ಟವು? ಅದಿರಲಿ, ಎಡಿಟೋರಿಯಲ್ ಸೆಕ್ಷನ್ನುಗಳು ಯಾಕೆ ಈ 'ಜಿಮ್' ಪರ ತಕರಾರು ಎತ್ತಲಿಲ್ಲ? ವಿಚಿತ್ರ ನೋಡಿ, ಪಕ್ಕಾ ಬಂಡವಾಳಶಾಹಿ ಪೇಪರ್ ಆಗಿರುವ ವಿ.ಕ. ಕೋಟಿಗಳ ಮೊತ್ತದ ಜಾಹೀರಾತು ಪಡೆದೂ, ಈ ಸಮಾವೇಶ ಕುರಿತು ಬಂದ ಟೀಕೆಗಳನ್ನು ಪ್ರಕಟಿಸಿತು! ಜಾಹೀರಾತು ಕಡಿಮೆ ಸಿಕ್ಕವೆಂದು ಕನ್ನಡ ಪ್ರಭ ಕೂಡಾ ಒಂದಿಷ್ಟು ವ್ಯಂಗ್ಯಭರಿತ ಲೇಖನ ಬರೆಯಿತು... ತೀರಾ ಬೇಸರದ ವಿಷಯ ಎಂದರೆ 'ಪ್ರಜಾವಾಣಿ' ನಾಲ್ಕು ಪುಟಗಳ ವಿಶೇಷ ಪುರವಣಿ ತಂದು ಬಿಜೆಪಿ ಸರ್ಕಾರದ ಪಾದದಡಿ ಬಿದ್ದದ್ದು!

ಒಟ್ಟಿನಲ್ಲಿ ಎಲ್ಲ ಜನಪ್ರಿಯ ಮಾಧ್ಯಮಗಳಷ್ಟೇ ಅಲ್ಲದೇ, ನಾಗರಿಕ, ಸಮಾಜವೀರ, ಸಂಜೆ ದರ್ಶಿನಿಗಳಂತಹ ಜಿಲ್ಲಾ ಪೇಪರುಗಳೂ ಉಂಡುಂಡು ಕೊಬ್ಬಿದವು. ರಾಜ್ಯದಲ್ಲಿ ಕುಡಿಯುವ ನೀರಿನ ಸಮಸ್ಯೆಯಿದೆ, ಹಳ್ಳಿಗಳಲ್ಲಿ ವಿದ್ಯುತ್ತೇ ಇಲ್ಲ, ಇಂತಹ ಹೊತ್ತಲ್ಲಿ ಉಕ್ಕು ತಯಾರಿಕೆಯ ನೆಪದಲ್ಲಿ ಖನಿಜ ಸಂಪತ್ತಿನ ಲೂಟಿ ಮಾಡಲು ರಾಜ್ಯವನ್ನು ಹರಾಜು ಹಾಕಲಾಗಿದೆ. ಇದೆಲ್ಲ ಗೊತ್ತಿದ್ದೂ ಮಾಧ್ಯಮಗಳು ಇಂತಹ ಸಮಾವೇಶವನ್ನು ಹಾಡಿಹೊಗಳುತ್ತವೆ. ಕಾರಣ ಇಷ್ಟೇ: ಜಾಗತೀಕರಣದ ನಂತರ ಮಾಧ್ಯಮಗಳನ್ನೆಲ್ಲ ನಿಯಂತ್ರಿಸು ತ್ತಿರುವುದು ಈ ಬಂಡವಾಳ ಶಾಹಿಗಳು, ಮತ್ತವರ ಎಂಜಲು ತಿನ್ನುವ ಚುನಾಯಿತ ಪ್ರತಿನಿಧಿ ಗಳು...

*****

ಸೂಟು, ಟೈ ಹಾಕಿಕೊಂಡು ಕರ್ನಾಟಕಕ್ಕೆ ಭಾರೀ 'ಬಂಡವಾಳ' ತರುತ್ತಿರುವ ಕೈಗಾರಿಕಾ ಸಚಿವ ಮುರುಗೇಶ ನಿರಾಣಿಯ ಬೀಳಗಿ ಕ್ಷೇತ್ರ ಸುಡುಗಾಡಿನಂತಿದೆ. ಅಲ್ಲಿ ಆತ ನಿರಾಣಿ ಶುಗರ್ಸ್ ಹೆಸರಲ್ಲಿ ಕರೆಂಟು ಕದಿಯುತ್ತಾನೆ, ರೈತರಿಗೆ ವಂಚಿಸುತ್ತಾನೆ. ಈ ಹೂಡಿಕೆ ಸಮಾವೇಶದಲ್ಲಿಯೇ ಈತ 500 ಕೋಟಿ ರೂ.ಗಳಲ್ಲಿ ನಿರಾಣಿ. ಶುಗರ್ಸ್ ಕಂಪನಿಯನ್ನು ಮೇಲ್ದರ್ಜೆಗೆ ಏರಿಸುತ್ತಾನಂತೆ! ಅಂದರೆ, 36 ಸಾವಿರ ಕೋಟಿ ಹೂಡಿಕೆ ಮಾಡಲಿರುವ ಬಳ್ಳಾರಿ ರೆಡ್ಡಿಗಳಂತೆ ನಿರಾಣಿಯೂ ಸರ್ಕಾರದ ಪುಕ್ಕಟೆ ಸೌಲಭ್ಯಗಳನ್ನು ಕಡಿಮೆ ಬೆಲೆಯಲ್ಲಿ ಕೃಷಿ ಭೂಮಿಯನ್ನು ದೋಚಲು ನಿಂತಿದ್ದಾನೆ. ಇದೆಲ್ಲದರಲ್ಲಿ ಯಡ್ಡಿಗೂ ದೊಡ್ಡದಾದ 'ಪಾಲು' ಇದ್ದೇ ಇದೆ.

*****

ಮೂರ್ಖ ನಿರಾಣಿಗೆ ಮಾಧ್ಯಮಗಳ ಜೊತೆ ಸಂಪರ್ಕ ಏರ್ಪಡಿಸಿದವನೂ ಪತ್ರಕರ್ತನೇ! ಆದರೀಗ ಈತ ಮಾಜಿ ವರದಿಗಾರ! ಈ ಹಿಂದೆ ಉದಯ ಟಿವಿಯಲ್ಲಿ ವರದಿಗಾರನಾಗಿದ್ದ ನಾಗರಾಜ ಜಮಖಂಡಿ ಎಂಬ ಗುಳೇದಗುಡ್ಡದ ವರದಿಗಾರನೀಗ ನಿರಾಣಿಯ ಪಿಆರ್‌ಓ! ಈ ಮಹಾಶಯನೇ ಮಾಧ್ಯಮ ಕೇಂದ್ರಗಳಿಗೆಲ್ಲ ನಿರಾಣಿಯನ್ನು ಕರೆದೊಯ್ದು ಜಾಹೀರಾತು ಕಮ್ ಪೇಯ್ಡ್ ನ್ಯೂಸ್ ವ್ಯವಸ್ಥೆ ಮಾಡಿದ್ದು!

ಎನ್.ಡಿ.ಟಿ.ವಿಯಿಂದ ಹಿಡಿದು ಜಿಲ್ಲಾಮಟ್ಟದ ಪುಡಿ ಪತ್ರಿಕೆಗಳಲ್ಲಿ ಈ ಸಮಾವೇಶದ ಜಾಹೀರಾತಿಗಾಗಿ ಸರ್ಕಾರ ಮಾಡಿರುವ ಖರ್ಚು 'ಕೇವಲ' 40 ಕೋಟಿ ಅಂತೆ! 40 ಕೋಟಿಯಲ್ಲಿ ಪಾಲು ತಿಂದ ಮಾಧ್ಯಮಗಳಿಗೆ ಈ 'ಜಿಮ್'. ಸಮಾವೇಶ 'ಕೈಗಾರಿಕಾ ಕ್ರಾಂತಿ' ಎನ್ನಿಸದೇ ಇರುತ್ತಾ?

ಸಿಂಗೂರ್, ನಂದಿಗ್ರಾಮ್, ಲಾಲ್‌ಘಡ್ ಪ್ರತಿರೋಧಗಳು ಉದ್ಭವಿಸುವುದೇ ಹೀಗಲ್ಲವೇ? ಆಗ ಪ್ರತಿರೋಧಿಸಿದ ರೈತಾಪಿ ಜನರನ್ನು, ಕೂಲಿ ಕಾರ್ಮಿಕರನ್ನು ನಕ್ಸಲೈಟ್ಸ್ ಎಂದು ಬರೆಯುವುದೂ ಇದೇ ಮಾಧ್ಯಮಗಳಲ್ಲವೆ?

● ಪಿ.ಕೆ.ಮಲ್ಲನಗೌಡರ್





GIM ಯಡ್ಡಿ-ಕಟ್ಟಾ-ದಯಾನಂದ ಪೈ ಕಳ್ಳರ ಸಂತೆ



ಹೆಬ್ಬಾಳ ಪಶುವೈದ್ಯ ಕಾಲೇಜ್ ಗುಳುಂ

ಸಂತೆಗೆ ಮೊದಲೇ ಗಂಟು ಕಳ್ಳರು ಸೇರಿದಂತೆ ಮೊನ್ನೆ ನಡೆದ ಜಿಮ್ ಸಮಾವೇಶ ಕೊನೆಗೊಂಡಿದೆ. ಯಡಿಯೂರಪ್ಪನ ಎರಡು ವರ್ಷಗಳ ಘೋರ ಭ್ರಷ್ಟಾಚಾರದ, ಅದಕ್ಷತೆಯ ಆಡಳಿತದ ಅಪವಾದವನ್ನೆಲ್ಲಾ ಈ ಜಿಮ್ ಸಮಾವೇಶದ ಯಶಸ್ಸು ಅಳಿಸಿ ಹಾಕಿದೆ ಎಂದು ಬಿಜೆಪಿಗಳು ನಂಬಿಕೊಂಡಿದ್ದಾರೆ.

ಆದರೆ ವಾಸ್ತವವಾಗಿ ಜಾಗತಿಕ ಹೂಡಿಕೆದಾರರ ಈ ಸಮಾವೇಶ ಭ್ರಷ್ಟಾಚಾರದ ಹಗಲು ದರೋಡೆಯ ಹೊಸ ಅಧ್ಯಾಯವೊಂದನ್ನು ಆರಂಭಿಸುತ್ತಿದೆ.

ಬೆಂಗಳೂರಿನ ಹೃದಯಭಾಗದಲ್ಲಿರುವ ಪಶುವೈದ್ಯ ವಿಜ್ಞಾನ ಸಂಸ್ಥೆಯನ್ನು ನುಂಗಿ ನೀರು ಕುಡಿಯುವ ಪಿತೂರಿಯೊಂದಕ್ಕೆ ಇಡೀ ಸಮಾವೇಶದಲ್ಲಿ ಸಹಿ ಬಿದ್ದಿದೆ.

ನಗರದ ಬಳ್ಳಾರಿ ರಸ್ತೆಯ ಮೇಖ್ರಿ ಸರ್ಕಲ್ ಹತ್ತಿರವಿರುವ ಈ ಪಶುವೈದ್ಯ ಕಾಲೇಜು ಕರ್ನಾಟಕ ಸರ್ಕಾರದ್ದು. ಅಂದಾಜು 391 ಎಕರೆಯಷ್ಟು ವಿಸ್ತಾರವಾದ ಈ ಜಾಗದ ಮೇಲೆ ಈಗ ಬೆಂಗಳೂರಿನ ಕುಖ್ಯಾತ ಭೂಗಳ್ಳರ ಕಾಕದೃಷ್ಟಿ ಬಿದ್ದಿದೆ. ಇವರ ಕಳ್ಳತನಕ್ಕೆ ಹೆಬ್ಬಾಳದ ಇನ್ನೊಬ್ಬ ಭೂಗಳ್ಳ ಬಿಜೆಪಿ ಶಾಸಕ ಕಟ್ಟಾ ಸುಬ್ರಮಣ್ಯ ನಾಯ್ಡು ಕೈಜೋಡಿಸಿದ್ದಾನೆ. ಮುಖ್ಯಮಂತ್ರಿ ಯಡ್ಡಿಯೇ ಇದರ ಸೂತ್ರಧಾರ.

ಸುಮಾರು ಮೂರು ಸಾವಿರ ಕೋಟಿ ರೂಪಾಯಿಗಳಿಗೂ ಹೆಚ್ಚಿನ ಮೌಲ್ಯವಿರುವ ಇಂಥ ಅಮೂಲ್ಯವಾದ ಜಾಗವನ್ನು ಲಪಟಾಯಿಸುವ ಪಿತೂರಿಯ ಹಿಂದೆ ಇರುವವನು ಯಾರು ಗೊತ್ತೆ?

ದಯಾನಂದ ಪೈ!

ಕರ್ನಾಟಕದ ನಂಬರ್ ಒನ್ ಭೂಗಳ್ಳನಾದ ಈ ಪೈ ಪಶುವೈದ್ಯ ಸಂಸ್ಥೆಯನ್ನು ನುಂಗಲು ನಡೆಸುತ್ತಿರುವ ಮಸಲತ್ತುಗಳ ವಿವರ ನೋಡಿದರೆ ಗಾಬರಿಯಾಗುತ್ತದೆ. ಅಷ್ಟೇ ಅಲ್ಲ, ಈ ವಂಚನೆಯಲ್ಲಿ ಯಡಿಯೂರಪ್ಪ ಯಾಕೆ ಹಾಗೂ ಎಷ್ಟರಮಟ್ಟಿಗೆ ಶಾಮೀಲಾಗಿದ್ದಾರೆಂದು ನೋಡಿದರೂ ಆಶ್ಚರ್ಯವಾಗುವಂತಿದೆ.

ಯಾರಿವರು ಸಿಟಿ ವ್ಯೂ ಪ್ರಾಪರ್ಟಿ?

ಮೊನ್ನಿನ ಬೆಂಗಳೂರು ಸಮಾವೇಶದಲ್ಲಿ ಕುಬೇರರಾದ ಲಕ್ಷ್ಮಿ ಮಿತ್ತಲ್, ಜಿಂದಾಲ್, ಮಲ್ಯ ಮುಂತಾದವರು ಹತ್ತಾರು ಯೋಜನೆಗಳನ್ನು ಪ್ರಕಟಿಸಿ ಸರ್ಕಾರದೊಂದಿಗೆ ಒಪ್ಪಂದ ಮಾಡಿಕೊಂಡರೆಂದು ಸುದ್ದಿಯಾಗಿದೆ. ಅದೇ ರೀತಿ ಮೇಖ್ರಿ ಸರ್ಕಲ್ ಬಳಿ ಸಿಟಿ ವ್ಯೂ ಪ್ರಾಪರ್ಟಿ ಕಂಪನಿಯವರು 961 ಕೋಟಿ ಬಂಡವಾಳ ಹೂಡಲಿದ್ದಾರೆಂದೂ ಪ್ರಚಾರವಾಗಿದೆ. ಇವರದ್ದು ಹೋಟೆಲ್ ಉದ್ಯಮವಂತೆ. ಈ ರೀತಿ ಮೆಮೊರಾಂಡಮ್ ಆಫ್ ಅಂಡರ್ ಸ್ಟಾಂಡಿಂಗ್ (mou) ಗಳಿಗೆ ಸಹಿ ಹಾಕುವಾಗ ಏನೇನೆಲ್ಲಾ ಅಸಂಬದ್ಧಗಳು ನಡೆದಿವೆಯೆಂದರೆ ಸಂಬಂಧವಿರದ ಸರ್ಕಾರಿ ಇಲಾಖೆಗಳ ಅಧಿಕಾರಿಗಳೆಲ್ಲಾ ಖಾಸಗಿ ಕಂಪನಿಗಳು ಬಯಸಿದ ಜಮೀನುಗಳಲ್ಲಿ ಹೊಸ ಪ್ರಾಜೆಕ್ಟ್‌ಗಳಿಗೆ ಒಪ್ಪಿಗೆ ಸೂಚಿಸಿ ಸಹಿ ಮಾಡಿದ್ದಾರೆ. ಪಶುವೈದ್ಯ ಸಂಸ್ಥೆಯ ಸ್ಥಳದಲ್ಲಿ ಫೈವ್ ಸ್ಟಾರ್ ಹೋಟೆಲ್ ಹಾಗೂ ಕಾರ್ಪೊರೇಟ್ ಆಫೀಸ್‌ಗಳನ್ನು ಕಟ್ಟುವುದಾಗಿ ಹೇಳಿರುವ ಸಿಟಿ ವ್ಯೂ ಪ್ರಾಪರ್ಟಿ ಕಂಪನಿಯೊಂದಿಗೆ ಒಪ್ಪಂದಕ್ಕೆ ಸಹಿ ಮಾಡಿರುವುದು ಪ್ರವಾಸೋದ್ಯಮ ಇಲಾಖೆಯ ಪ್ರಿನ್ಸಿಪಲ್ ಸೆಕ್ರೆಟರಿ!

ಇವನ್ಯಾವ ತೋಲಾಂಡಿ ನಾಯಕ ಅಂತ ಪಶುವೈದ್ಯ ಸಂಸ್ಥೆಯನ್ನು ಹೀಗೆ ಖಾಸಗಿಯವರಿಗೆ ಒಪ್ಪಿಸಲು ಹೊರಟಿದ್ದಾನೆ ಅಂತಾ ಕೇಳುವವರೊಬ್ಬರು ಬೇಕಷ್ಟೆ? ಈ ಸಿಟಿ ವ್ಯೂ ಗ್ರೂಪಿನವರ ಜಾತಕ ಕುತೂಹಲಕಾರಿಯಾಗಿದೆ.

ಸಿಟಿ ವ್ಯೂ ಬೆಂಗಳೂರು ಪ್ರಾಪರ್ಟೀಸ್ ಪ್ರೈವೇಟ್ ಲಿಮಿಟೆಡ್ ಎಂಬುದು ಇದರ ಪೂರ್ತಿ ಹೆಸರು. ಇದರ ಅಪ್ಪ-ಅಮ್ಮ ಯಾರು, ಬಂಧುಬಳಗ ಯಾರು-ಇದು ಹುಟ್ಟಿದ್ದೆಲ್ಲಿ ಎಂಬ ವಿವರಗಳು ಸಾರ್ವಜನಿಕರಿಗಿರಲಿ, ಸ್ವತಃ ಸಹಿ ಮಾಡಿರುವ ಸರ್ಕಾರಿ ಅಧಿಕಾರಿಗಳಿಗೇ ಗೊತ್ತಿಲ್ಲ ಎಂದರೆ ನಂಬುತ್ತೀರಾ?

ಈ ಸಿಟಿ ವ್ಯೂ ಕಂಪನಿಗೂ ಟೂರಿಸಂ ಇಲಾಖೆಗೂ ಆಗಿರುವ ಒಪ್ಪಂದದಲ್ಲಿ ಬೆಂಗಳೂರಿನ ಮೇಖ್ರಿ ಸರ್ಕಲ್ ಬಳಿ ಇರುವ ಹೊಸ ಸಂಖ್ಯೆ 8 (ಹಳೇ ಮುನಿಸಿಪಲ್ ಖಾತಾ ಸಂಖ್ಯೆ 57) ರ ಜಾಗದಲ್ಲಿ ಒಂದು ಪಂಚತಾರಾ ಹೋಟೆಲ್, ಅನೇಕ ಆಫೀಸ್ ಕಟ್ಟಡಗಳು ಹಾಗೂ ಸರ್ವೀಸ್ ಅಪಾರ್ಟ್‌ಮೆಂಟ್‌ಗಳನ್ನು ಕಟ್ಟುವ ಬಗ್ಗೆ ಒಪ್ಪಂದವಾಗಿದೆ. ಒಟ್ಟು 961 ಕೋಟಿ ರೂಪಾಯಿಗಳ ಬೃಹತ್ ಬಂಡವಾಳದ ಯೋಜನೆ ಇದೆಂದು ಹೇಳಲಾಗಿದೆ.

ಆದರೆ ಈ ಜಾಗ ಯಾವುದೆಂದು mou ನಲ್ಲಿ ಸ್ಪಷ್ಟವಾಗಿ ಹೇಳಿಲ್ಲ, ಈ ಪ್ರದೇಶದ ಪರಿಚಯವಿರುವವರಿಗೆ ಅಲ್ಲಿ ಪಶುವೈದ್ಯ ಕಾಲೇಜು ಹಾಗೂ ಹೆಬ್ಬಾಳದ ಕೃಷಿ ವಿಶ್ವವಿದ್ಯಾಲಯ ಬಿಟ್ಟರೆ ಬೇರೆ ಯಾವುದೂ ಸರ್ಕಾರಿ ಜಾಗ ಇಲ್ಲ ಎಂಬುದು ಗೊತ್ತಿದೆ.

ಇನ್ನು ಮೇಲಾಗಿ ಕೃಷಿ ವಿವಿ ಜಾಗವು ಮೇಖ್ರಿ ಸರ್ಕಲ್‌ನಿಂದ ಕಿಲೋಮೀಟರ್ ಗಟ್ಟಲೆ ದೂರದಲ್ಲಿದೆ. mou ನಲ್ಲಿ ಮೇಖ್ರಿ ಸರ್ಕಲ್ ಬಳಿ ಎಂದು ದಾಖಲಿಸಿರುವುದರಿಂದ ಅದು ಸಾರ್ವಜನಿಕರ ಸೊತ್ತಾದ ಪಶುವೈದ್ಯ ಕಾಲೇಜಿನ ನೂರಾರು ಎಕರೆ ಜಮೀನೇ ಆಗಿರಬೇಕೆಂದು ಖಚಿತವಾಗಿದೆ.

ಈ mou ಅದೆಷ್ಟು ಕೆಟ್ಟದಾಗಿದೆಯೆಂದರೆ ಸಿಟಿ ವ್ಯೂ ಕಂಪನಿಯವರು ತಮ್ಮದೆಂದು ಒಂದು ಅಡ್ರೆಸ್ ಕೊಟ್ಟಿದ್ದಾರೆ ನಂ. 664, 2ನೇ ಮಹಡಿ, ನೂರಡಿ ರಸ್ತೆ, ಒಂದನೇ ಹಂತ, ಭಿನ್ನಮಂಗಲ, ಇಂದಿರಾನಗರ, ಬೆಂಗಳೂರು 38 ಎಂಬ ವಿಳಾಸ ಅದು. ಆದರೆ 'ಲಂಕೇಶ್' ಅಲ್ಲಿ ಹೋಗಿ ಚೆಕ್ ಮಾಡಿದಾಗ ಸಿಟಿ ವ್ಯೂನವರ ಆಫೀಸಿರಲಿ ಒಂದು ಬೋರ್ಡ್ ನೇತಾಡುತ್ತಿದ್ದುದೂ ಕಾಣಲಿಲ್ಲ.

ಏನಿದರ ಅರ್ಥ?

ಅಡ್ರೆಸ್ಸೇ ಇರದ ಕಂಪನಿಯವನೊಬ್ಬ 961 ಕೋಟಿ ಬಂಡವಾಳ ಹಾಕುತ್ತಾನಾ? ಇಂಥ ಮುಖವಿಲ್ಲದವರಿಗೆ ಸರ್ಕಾರದ ಪಶುವೈದ್ಯ ಸಂಸ್ಥೆಯ ಅಮೂಲ್ಯ ಜಾಗ ಬಿಟ್ಟುಕೊಡಬೇಕಾ? ಅಸಲಿಗೆ ಯಾರಿವರು? ಹೀಗೆ ಪ್ರಶ್ನಿಸಿಕೊಂಡು ಹೊರಟರೆ ಸಿಟಿ ವ್ಯೂನ ತೆರೆಮರೆಯಲ್ಲಿರುವ ಭೂಗಳ್ಳರ ಒಂದೊಂದೇ ಮುಖ ಅನಾವರಣಗೊಳ್ಳುತ್ತದೆ.



ಸಿಟಿ ವ್ಯೂ ಕಂಪೆನಿಯ ಪರವಾಗಿ ಸರ್ಕಾರದೊಂದಿಗೆ mou ಗೆ ಸಹಿ ಮಾಡಿರುವ ವ್ಯಕ್ತಿಯ ಹೆಸರು ರವೀಂದ್ರ ಪೈ. ಇವನು ಆ ಕಂಪನಿಯ ಮ್ಯಾನೇಜಿಂಗ್ ಡೈರೆಕ್ಟರನೆಂತಲೂ, ಭಾರಿ ಉದ್ಯಮಿಯೆಂತಲೂ ಪ್ರಚಾರವಾಗಿವೆ. ಇಂತಿದ್ದರೂ ಸಿಟಿ ವ್ಯೂಗೆ ಒಂದು ಅಡ್ರೆಸ್ಸಿಲ್ಲ...!

ಆಫೀಸೂ ಇಲ್ಲ!!

ಬೃಹತ್ ಕಟ್ಟಡಗಳನ್ನು ಕಟ್ಟಿರುವ ಅನುಭವ, ಇತಿಹಾಸವೂ ಇಲ್ಲ!!!

ಇದರ ಅಸಲಿ ಮರ್ಮ ಏನೆಂದರೆ ಈ ಸಿಟಿ ವ್ಯೂ ಬೆಂಗಳೂರು ಪ್ರಾಪರ್ಟೀಸ್ ಪ್ರೈ. ಲಿ ಕಂಪನಿಯೇ ಒಂದು ಡೋಂಗಿ ಸಂಸ್ಥೆ. ಬಹುತೇಕ ಕಟ್ಟಾ ನಾಯ್ಡು, ಯಡ್ಡಿಯ ಮಕ್ಕಳು ಹಾಗೂ ಭೂಗಳ್ಳ ದಯಾನಂದ ಪೈಗಳ ಪಾಲುದಾರಿಕೆ ಫಿಕ್ಸ್ ಮಾಡುವ ಸಲುವಾಗಿ ಅರ್ಜೆಂಟಾಗಿ ತೇಲಿಬಿಟ್ಟಿರಬಹುದಾದ ಕಂಪನಿ ಇದು.

ಇದರ ಮೂಲ ಕೆದಕಿದರೆ ಸಿಟಿ ವ್ಯೂ ಕಂಪನಿಯು ದಯಾನಂದ ಪೈನ ಲಿಂಕ್ ಹೊಂದಿರುವುದು ಗೊತ್ತಾಗುತ್ತದೆ.

ಸೆಂಚುರಿ -ರಿಯಲ್ ಎಸ್ಟೇಟ್ ಲಿಂಕ್

ಬೆಂಗಳೂರಿನ ಭೂಗಳ್ಳರ ಷಹೆನ್ ಶಾ ದಯಾನಂದ ಪೈನ ಜಾತಕ ಎಲ್ಲರಿಗೂ ಗೊತ್ತಿದೆ. 1973 ರಲ್ಲಿ ಇವನು ಶುರು ಮಾಡಿದ ಸೆಂಚುರಿ ರಿಯಲ್ ಎಸ್ಟೇಟ್ ಕಂಪನಿ ಇವತ್ತು ನಗರದ ಎಂಟು ದಿಕ್ಕು ಹದಿನಾರು ಮೂಲೆಗಳಲ್ಲೂ ಭೂಕಬಳಿಕೆಯಲ್ಲಿ ತೊಡಗಿದೆ. ಸೆಂಚುರಿ ಕಾರ್ಬಲ್, ಸೆಂಚುರಿ ವಿಂಟರ್‌ರನ್, ಸೆಂಚುರಿ ಇಂಡಸ್, ಸೆಂಚುರಿ ಪ್ರಗತಿ, ಸೆಂಚುರಿ ಪ್ಯಾರಡೈಸ್, ಸೆಂಚುರಿ ಐಸಲೋನ್... ಹೀಗೆ ಡಜನ್‌ಗಟ್ಟಲೆ ಪ್ರಾಜೆಕ್ಟುಗಳನ್ನು, ಉಪಕಂಪನಿಗಳನ್ನು ಈ ದಯಾನಂದ ಪೈ ತೇಲಿಬಿಟ್ಟಿದ್ದಾನೆ. ಇವನ ವಶದಲ್ಲಿ ಈಗಾಗಲೇ ಬೆಂಗಳೂರು ಸುತ್ತಮುತ್ತ ಮೂರು ಸಾವಿರ ಎಕರೆ ಜಮೀನು ಇದೆ. ಬೇರೆ ಬೇರೆ ಯೋಜನೆಗಳ ಹೆಸರಿನಲ್ಲಿ ಬಡ ರೈತರಿಂದ ಖರೀದಿಸಿಯೋ ಇಲ್ಲ ಕಳವು ಮಾಡಿಯೋ ಪೈ ಸಂಪಾದಿಸಿರುವ ಆಸ್ತಿ ಇದು. ಕಾಂಗ್ರೆಸ್, ದಳ ಅಥವಾ ಬಿಜೆಪಿ ಹೀಗೆ ಯಾರದ್ದೇ ಸರ್ಕಾರವಿರಲಿ ದಯಾನಂದ ಪೈನ ಭೂಕೊಳ್ಳೆಗೆ ಇದುವರೆಗೂ ಯಾರೂ ಅಡ್ಡ ಬಂದಿಲ್ಲ, ಹಾಗಿದೆ ಇವನ ತಾಕತ್ತು. ತನ್ನ ಕಂಪನಿಯ ಒಟ್ಟಾರೆ ಆಸ್ತಿ ಮೌಲ್ಯವೇ 8 ಸಾವಿರ ಕೋಟಿ ರೂಪಾಯಿಗಳೆಂದು ಇವನೇ ಡಂಬ ಕೊಚ್ಚಿಕೊಳ್ಳುತ್ತಾನೆ. ಇಂಥವನ ಕೈ ಬೊಂಬೆಯೇ ಈ ಸಿಟಿ ವ್ಯೂ ಪ್ರಾಪರ್ಟಿ ಕಂಪನಿ. ಈ ದಯಾನಂದನದ್ದು ಸೆಂಚುರಿ ರಿಯಲ್ ಎಸ್ಟೇಟ್ ಹೋಲ್ಡಿಂಗ್ಸ್ ಎಂಬ ಇನ್ನೊಂದು ಕಂಪನಿಯಿದೆ. ರವೀಂದ್ರ ಪೈ ಎಂಬುವನು ಅದರ ಮ್ಯಾನೇಜಿಂಗ್ ಡೈರೆಕ್ಟರ್. ಇದೇ ರವೀಂದ್ರ ಪೈ ಈಗ ಸಿಟಿ ವ್ಯೂ ಪ್ರಾಪರ್ಟಿ ಕಂಪನಿಯ ಮುಖ್ಯಸ್ಥನಂತೆ ಪೋಸು ಕೊಟ್ಟು ಪಶುವೈದ್ಯ ಕಾಲೇಜಿನ ಜಾಗ ನುಂಗುವ ಹುನ್ನಾರ ಮಾಡಿರುವುದು.

ಕಳ್ಳರಿಗೆ ಹರ್ಷ, ಯಡ್ಡಿಗೆ ನಿಮಿಷ

ಈಗಿನ ಪಶುವೈದ್ಯ ವಿಜ್ಞಾನ ಕಾಲೇಜಿನ ಭೂಕಬಳಿಕೆಯ ಪ್ರಯತ್ನಕ್ಕೆ ಒಂದು ವರ್ಷದ ಹಿನ್ನೆಲೆಯಿದೆ. ಮೊನ್ನಿನ ಬೆಂಗಳೂರು ಸಮಾವೇಶದಲ್ಲಷ್ಟೇ ಯೋಜನೆಯ ಪ್ರಾಥಮಿಕ ಒಪ್ಪಂದವಾಗಿದೆ ಎಂಬಂತೆ ನೋಡಿದವರಿಗೆ ಭಾಸವಾಗುತ್ತದೆಯಾದರೂ ವಿಷಯ ಅಷ್ಟು ಸರಳವಾಗಿಲ್ಲ.

ಈ ಯೋಜನೆಗೆ ಕರ್ನಾಟಕ ಪರಿಸರ ಮತ್ತು ಅರಣ್ಯ ಇಲಾಖೆಯು 2009 ರ ಆಗಸ್ಟ್‌ನಲ್ಲಿ ಮಾನ್ಯತೆ ನೀಡಿದೆ. ಯೋಜನೆಯ ಉದ್ದೇಶ ಹಾಗೂ ರೂಪುರೇಷೆ ಕುರಿತ ಸಾರ್ವಜನಿಕ ನೋಟಿಸ್ ಒಂದು 8.9.2009 ರಲ್ಲೇ ಪ್ರಕಟಗೊಂಡಿದೆ. ಇನ್ನೂ ಆಶ್ಚರ್ಯಕರ ಸಂಗತಿ ಏನೆಂದರೆ State Environment Impact Assessment Authority (SEIAA)

ಪಶುವೈದ್ಯ ಕಾಲೇಜಿನ ಕತೆ



ಬೆಂಗಳೂರಷ್ಟೇ ಅಲ್ಲದೇ ಇಡೀ ಕರ್ನಾಟಕದ ಅತೀ ಪ್ರಮುಖವಾದ ಹಾಗೂ ಅಪರೂಪದ ಶಿಕ್ಷಣ ಸಂಸ್ಥೆ ಈ ಪಶುವೈದ್ಯ ವಿಜ್ಞಾನ ಕಾಲೇಜು. ಈಗ್ಗೆ 50 ವರ್ಷಗಳ ಹಿಂದೆ ಆರಂಭವಾದ ಕಾಲೇಜಿನ ವ್ಯಾಪ್ತಿ 391 ಎಕರೆಯಷ್ಟಿದೆ. ಇಲ್ಲಿ ಪಶುವೈದ್ಯಕೀಯ ಪದವಿ, ಮಾಸ್ಟರ್ ಪದವಿ ಶಿಕ್ಷಣ ನೀಡುವ ಕಾಲೇಜುಗಳಿವೆ. ಕುರಿ, ಕೋಳಿ ಸಾಕುವ, ಹೊಸ ತಳಿ ರೂಪಿಸುವ ಸಂಶೋಧನಾ ಕೇಂದ್ರಗಳಿವೆ. ಪ್ರಖ್ಯಾತ ಗಿರಿರಾಜ ಕೋಳಿ ಶೋಧನೆಯಾಗಿದ್ದು ಇಲ್ಲಿಯೇ. ಇಲ್ಲೇ ಡೈರಿ ಫಾರಂ ಕೂಡಾ ಇದೆ.

ಇದರೊಂದಿಗೆ ಕಾಲೇಜು ವಿದ್ಯಾರ್ಥಿಗಳಿಗೆ ಹಾಸ್ಟೆಲ್, ಸಿಬ್ಬಂದಿಯ ಮಕ್ಕಳಿಗೆ ಶಾಲೆಗಳಿವೆ. ಜೊತೆಗೆ ಕೇಂದ್ರ ಸರ್ಕಾರದ ಇಂಡಿಯನ್ ವೆಟರ್ನರಿ ರಿಸರ್ಚ್ ಸಂಸ್ಥೆ ಇದೆ. ಡೈರೆಕ್ಟರ್ ಆಫ್ ಬಯೋ ಕಂಟ್ರೋಲ್ ಪ್ರಾಜೆಕ್ಟ್‌ನ ಕಚೇರಿಯೂ ಇಲ್ಲಿದೆ. ಪ್ರತಿವರ್ಷ ನೂರೈವತ್ತು ಮಂದಿ ಪದವಿಗಾಗಿ ಸೇರುತ್ತಿದ್ದಾರೆ.

ಇದುವರೆಗೂ ಒಟ್ಟು ಮೂರೂವರೆ ಸಾವಿರ ಪಶು ವೈದ್ಯರು ಇಲ್ಲಿ ತರಬೇತಿ ಪಡೆದು ದೇಶಾದ್ಯಂತ ಕೆಲಸ ಮಾಡುತ್ತಿದ್ದಾರೆ. ಈ ಕಾಲೇಜಿನ ಕೀರ್ತಿ ಎಷ್ಟಿದೆಯೆಂದರೆ ಅಮೆರಿಕಾ, ಕೆನಡಾ, ಇರಾನ್, ಇರಾಕ್, ಮಲೇಶಿಯಾ, ಶ್ರೀಲಂಕಾ ಹಾಗೂ ಆಫ್ರಿಕಾ ದೇಶಗಳಿಂದಲೂ ವಿದ್ಯಾರ್ಥಿಗಳು ಕಲಿಯಲು ಬರುತ್ತಾರೆ. ಜಯಚಾಮರಾಜೇಂದ್ರ ಒಡೆಯರ್ ಹಾಗೂ ಆಗ ಮುಖ್ಯ ಮಂತ್ರಿಯಾಗಿದ್ದ ಬಿ.ಡಿ. ಜತ್ತಿಯವರು ನೀಡಿದ ಪ್ರೋತ್ಸಾಹದಿಂದ ಈ ತರಹದ ವಿಶ್ವಮಾನ್ಯತೆ ಪಡೆದ ಸರ್ಕಾರಿ ಪಶುವೈದ್ಯ ಶಿಕ್ಷಣ ಸಂಸ್ಥೆ ಸ್ಥಾಪನೆಯಾಗಿತ್ತು.

ಈ ಕಾಲೇಜಿನ ಹಿರಿಮೆ ಹಾಗೂ ಮಹತ್ವ ಅರಿತಿರುವ ವಿದ್ಯಾರ್ಥಿಗಳು ಈಗ ಸಂಸ್ಥೆಯ ಜಾಗ ಉಳಿಸಿಕೊಳ್ಳಲು ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ. ಕಾಲೇಜಿನ ಮಾಜಿ ಮುಖ್ಯಸ್ಥರಾಗಿರುವ ಹಾಗೂ ಪಶುವೈದ್ಯ ವಿಶ್ವವಿದ್ಯಾಲಯದ ಮೊದಲ ಉಪಕುಲಪತಿಯಾಗಿದ್ದ ಪ್ರೊ. ಶ್ರೀನಿವಾಸಗೌಡ ಸಿಟಿವ್ಯೂ ಕಂಪೆನಿಯ ವಿರುದ್ಧ ಹೋರಾಟಕ್ಕೆ ಸಜ್ಜಾಗುತ್ತಿದ್ದಾರೆ. ರಾಜ್ಯದ ಉದ್ದಗಲಕ್ಕೂ ಲಕ್ಷಾಂತರ ರೈತರು ಈ ಸಂಸ್ಥೆಯಿಂದ ಉಪಕೃತರಾಗಿದ್ದಾರೆ. ಅವರೆಲ್ಲಾ ಈ ಅಮೂಲ್ಯ ಪಶುವೈದ್ಯ ಕಾಲೇಜನ್ನು ಉಳಿಸಲು ದನಿಗೂಡಿಸಬೇಕಿದೆ.

ಆರೆಸ್ಸೆಸ್ -ಎರಡು ನಾಲಿಗೆ ಹಾವು

ಗೋಹತ್ಯೆ ನಿಷೇಧ-ಪಶುವೈದ್ಯ ಕಾಲೇಜು ಹರಾಜು

ರಾಜ್ಯ ಆರೆಸ್ಸೆಸ್ ಮುಖಂಡ ಮೈ.ಚ.ಜಯದೇವ್‌ಗೆ ಕರ್ನಾಟಕ ಜನ ಈಗ ಒಂದು ನೇರ ಪ್ರಶ್ನೆ ಕೇಳಬೇಕಿದೆ.

ಗೋ ಸಂಪತ್ತಿನ ರಕ್ಷಣೆಯಾಗಬೇಕೆಂದು ಗೋಹತ್ಯೆ ನಿಷೇಧ ಮಸೂದೆ ಜಾರಿ ಮಾಡಲು ಆರೆಸ್ಸೆಸ್‌ನ ಒತ್ತಡವೇ ಜಾಸ್ತಿ ಇತ್ತು, ಆಗಲಿ, ಅದರಿಂದಾಗುವ ಪರಿಣಾಮ ಏನೆಂದು ಬೇರೆ ವೇದಿಕೆಯಲ್ಲಿ ಚರ್ಚಿಸೋಣವಂತೆ- ಆದರೆ, ಗೋ ರಕ್ಷಣೆಯ ಬಗ್ಗೆ ಇಷ್ಟೊಂದು ಕಾಳಜಿ ಮಾಡುವ ಈ ಹಿಂದೂತ್ವವಾದಿಗಳು ಅದೇ ಪಶು ರಕ್ಷಣೆಗೆ ಸಂಬಂಧಿಸಿದ ಕಾಲೇಜನ್ನೇ ಭೂಗಳ್ಳರಿಗೆ ಕೊಡಲು ಯಾಕೆ ಹೊರಟಿದ್ದಾರೆ?



ಗೋ ತಳಿ ರಕ್ಷಣೆ, ಇನ್ನಿತರ ಕೆಲಸವನ್ನೇ ಮಾಡುವ ಜನರನ್ನೂ ಆಚೆಗೆ ತಳ್ಳಿ, ಅದೇ ಜಾಗದಲ್ಲೇ ಪಂಚತಾರಾ ಹೋಟೆಲ್ ಕಟ್ಟಿಸುವ ತೆವಲು ಆರೆಸ್ಸೆಸ್‌ನವರಿಗೇಕೆ?

ಇದಕ್ಕೆ ಮೈ.ಚ. ಜಯದೇವ್ ಉತ್ತರ ಕೊಡುತ್ತಾರಾ?

ದೀಮ ಕಟ್ಟಾ ಣ್ಣಿಟ್ಟ



ಶುವೈದ್ಯಕೀಯ ಸಂಸ್ಥೆಯ ಜಾಗ ುವ ಬಗ್ಗೆ ಹೆಬ್ಬಾಳ ಕಟ್ಟಾ ಸುಬ್ರಮಣ್ಯ ನಾಯ್ಡು ಆತುರದಿಂದ ಇದ್ದಾನೆ. ಕಾಲೇಜು ಕ್ಯಾಂಪಸ್ಸಿನ ಹಿಂಭಾಗದಲ್ಲಿ ಕೆಲವು ಗಳಿವೆ. ಅವರಿಗೆ ಬಳ್ಳಾರಿ ಮೈನ್ ರೋಡ್‌ಗೆ ಸಾಕಷ್ಟು ಚೆನ್ನಾಗಿರುವ ಅಪ್ರೋಚ್ ರಸ್ತೆಯೂ ದರೂ ಕಟ್ಟಾ ಇತ್ತೀಚೆಗೆ ಈ ಕಾಲೇಜನ್ನು ಮಧ್ಯಕ್ಕೆ ತೆ 60 ಅಡಿಯ ರಸ್ತೆಗಾಗಿ ಜಾಗ ಬಿಟ್ಟುಕೊಡುವಂತೆ ಹಾಕಿಸಿದ್ದಾನೆ.

ಗಳೂರು ಮಹಾನಗರಪಾಲಿಕೆಯು ಕಟ್ಟಾನ ತೆ ಇತ್ತೀಚೆಗೆ ಪಶುವೈದ್ಯ ಕಾಲೇಜಿನವರಿಗೆ ಒಂದು ರದು ರಸ್ತೆಗಾಗಿ ಜಾಗ ಕೇಳಿದೆ.

ಗೆ ಒಮ್ಮೆ ಕಾಲೇಜಿನ ಕ್ಯಾಂಪಸ್‌ನೊಳಗೆಯೇ ರಸ್ತೆ ರೆ ನಂತರ ಪರಿಸರ ಮಾಲಿನ್ಯ ಶಬ್ದ ಮಾಲಿನ್ಯದ ಳಿ ಇಡೀ ಕಾಲೇಜನ್ನೇ ಹೆಸರಘಟ್ಟಕ್ಕೆ ಓಡಿಸುವ ಕಟ್ಟಾನದು.

ಗಾಗಿ ಬಿಟ್ಟರೆ ಸಿಟಿವ್ಯೂ ಕಂಪೆನಿಗೆ ಇಡೀ ಜಾಗ ಹೊಟ್ಟು ಕಮಿಷನ್ ನುಂಗಲು ಅವಕಾಶ ಂಬುದು ಕಟ್ಟಾನ ಲೆಕ್ಕಾಚಾರ.



ರ ಆಗಸ್ಟ್ 28 ನೇ ತಾರೀಖಿನಲ್ಲೇ ಸಿಟಿ ವ್ಯೂ ಗೆ ಗ್ರೀನ್‌ಸಿಗ್ನಲ್ ಕೊಟ್ಟು ಬಿಟ್ಟಿದ್ದಾರೆ. (ಸಂಖ್ಯೆ AA: 141:Con 2008) ಆದರೆ ಇದ್ಯಾವ ತಿಯೂ ಸಾರ್ವಜನಿಕರ ಗಮನಕ್ಕೆ ಬಂದಿಲ್ಲ. ಗಳಾಗಿಲ್ಲ.

ೂಗಳ್ಳತನಕ್ಕೆ ಅಧಿಕೃತ ಒಪ್ಪಂದವಾಗುವ ಮೊದಲೇ ಯದೀಮರೆಲ್ಲಾ ಸೇರಿಕೊಂಡು ಸಂಬಂಧಪಟ್ಟಿರುವ ರಿಗಳಿಂದ ಅನುಮತಿ ಪಡೆದಿದ್ದಾರೆಂದರೆ ವಂಚನೆಯ ಹೇಗಿರಬಹುದು ಊಹಿಸಿ?

ೀಗೆ ಎಲ್ಲಾ ತಯಾರಿ ಮಾಡಿಕೊಂಡೇ ಮೊನ್ನಿನ ೂರು ಸಮಾವೇಶದಲ್ಲಿ ಯಡ್ಡಿ ಸಮ್ಮುಖದಲ್ಲಿ mou ೋಗಿದೆ. ಇದಕ್ಕೂ ಮೊದಲು ಮುಖ್ಯಮಂತ್ರಿ ಯೂರಪ್ಪ ಆಡಿದ ನಾಟಕದ ಬಗ್ಗೆ ಇಲ್ಲಿ ಹೇಳಬೇಕು.

ಕರೆಯದೆ ಬಂದ ಯಡ್ಡಿ

ಟ್ಟಾ ನಾಯ್ಡು ಹೆಬ್ಬಾಳದ ಶಾಸಕನಾದ ಮೇಲೆ ಚಾಲೂ ವ ದಂಧೆ ಇದು. ಈ ನಾಯ್ಡು ಹುಟ್ಟಾ ಭೂಗಳ್ಳ. ರೋಡಿನಲ್ಲಿ ರಾಜ್ಯ ಹಾಗೂ ಕೇಂದ್ರ ಸರ್ಕಾರದ ಇಲಾಖೆಗಳಿಗೆ ಸೇರಿರುವ ಭೂಮಿ ಇದೆ. ಅದರಲ್ಲಿ ವೈದ್ಯ ವಿಜ್ಞಾನ ಸಂಸ್ಥೆ ಹಾಗೂ ಕೃಷಿ ವಿಶ್ವವಿದ್ಯಾಲಯ ರಾಜ್ಯ ಸರ್ಕಾರದ ಕಂಟ್ರೋಲಿನಲ್ಲಿವೆ. ದಯಾನಂದ ಜೊತೆ ಸೇರಿ ಪಶುವೈದ್ಯ ಕಾಲೇಜಿನ ಜಾಗ ಯಿಸಲು ಪ್ಲಾನ್ ಮಾಡಿದ್ದ ಕಟ್ಟಾ ಈ ವಿಚಾರವನ್ನು ೂರು ಸಮಾವೇಶಕ್ಕೂ ಮೊದಲು ಯಡ್ಡಿ ಕಿವಿಗೆ

ಗ್ಗೆ ಒಂದು ತಿಂಗಳ ಹಿಂದೆ ರಾತ್ರಿ ಪಶುವೈದ್ಯ ಜಿನ ಮುಖ್ಯಸ್ಥರಿಗೆ ಈ ಕಟ್ಟಾನಿಂದ ಫೋನ್ ಬಂತು. ಬೆಳಗ್ಗೆ 7 ಗಂಟೆಗೆ ಸಿಎಂ ಬರ್‍ತಾರೆ, ರೆಡಿಯಾಗಿ" ಕಟ್ಟಾ. ಮೊದಲು ಕಾಲೇಜಿನವರಿಗೆ ವಿಚಾರವೇ ವಾಗಿರಲಿಲ್ಲ, ಯಡ್ಡಿಯನ್ನು ಅವರೇನೂ ಆಹ್ವಾನಿಸಿರಲಿಲ್ಲ. ನೂ ವಿಧಿಯಿಲ್ಲದೆ ಅವರು ಮಾರನೇ ಬೆಳಗ್ಗೆ ವಾಗಿ ಕಾದು ನಿಂತರು. ಬೆಳಗ್ಗೆ 11 ಗಂಟೆ ಸುಮಾರಿಗೆ ಯಡ್ಡಿ ಕಾಲೇಜಿನ ಕ್ಯಾಂಪಸ್ಸಿನ ತುಂಬಾ ಒಂದು ಹಾಕಿದರು. ಕೊನೆಗೆ ಮುಖ್ಯಸ್ಥರನ್ನು ಕರೆದು ಲ್ಲಾ ಹೆಸರಘಟ್ಟಕ್ಕೆ ಶಿಫ್ಟ್ ಮಾಡಿದರೆ ಹೇಗೆ?" ಪ್ರಶ್ನಿಸಿದ್ದಾರೆ.

ಯಡ್ಡಿ ಎಂಥ ಕಳ್ಳ ಎಂಬುದು ಅದೇ ಕ್ಷಣ ಗೆಲ್ಲಾ ಅರ್ಥವಾಗಿ ಹೋಯಿತು. ಅದರ ಮುಂದು ಭಾಗವೇ ಈ ಸಿಟಿ ವ್ಯೂನವರ ಭೂದರೋಡೆಯ ಪಡೆಯಾಗಿದೆ.

• ಪಾರ್ವತೀಶ

bparvateesha@gmail.com

ದೇಶಪಾಂಡೆ V/s ಡಿಕೆಶಿ

ಕಾಂಗ್ರೆಸ್ ಕೊಳಕು

ರಾಜ್ಯ ಕಾಂಗ್ರೆಸ್ ಈಗ ಕೇರಾಫ್ ಫುಟ್‌ಪಾತ್ ಆಗಿದೆ. ಕಾರ್ಯಾಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ಅಧ್ಯಕ್ಷ ಆರ್.ವಿ.ದೇಶಪಾಂಡೆ ನಡುವಿನ ಮನಸ್ತಾಪ ಬಹಿರಂಗಗೊಂಡು ಇಬ್ಬರೂ ಒಬ್ಬರಮೇಲೊಬ್ಬರು ಆರೋಪ-ಪ್ರತ್ಯಾರೋಪ ಮಾಡುತ್ತಿರುವುದರಿಂದ ಕಾಂಗ್ರೆಸ್ ಪಕ್ಷದ ವರ್ಚಸ್ಸಿಗೆ ದೊಡ್ಡ ಕುತ್ತಾಗಿದೆ. ಕರ್ನಾಟಕದಲ್ಲಿ ಹಿಂದೊಮ್ಮೆ ಅತ್ಯಂತ ಪ್ರಬಲವಾಗಿ ನೆಲೆ ಕಂಡಿದ್ದ ಕಾಂಗ್ರೆಸ್ ಪಕ್ಷವನ್ನು ಅದರ ನಾಯಕರೇ ಹಂತಹಂತವಾಗಿ ನೆಲಸಮ ಮಾಡುತ್ತಿರುವುದು ದೌರ್ಭಾಗ್ಯವೇ ಸರಿ.

ನೆರೆಪರಿಹಾರ ನಿಧಿಯನ್ನು ದುರ್ಬಳಕೆ ಮಾಡಿದ ಸುದ್ದಿ ಬಹಿರಂಗಗೊಂಡ ನಂತರ ಕಾಂಗ್ರೆಸ್ ವರ್ಚಸ್ಸು ಬೀದಿಪಾಲಾಗಿದೆ. ಕಾಂಗ್ರೆಸ್ ನಾಯಕರಿಗೆ ಇಂತಹ ದುರ್ಗತಿ ಯಾಕೆ ಬಂತು? ಎಂದು ಸ್ವತಃ ಕಾಂಗ್ರೆಸ್ ಕಾರ್ಯಕರ್ತರೇ ಕೇಳುತ್ತಿದ್ದಾರೆ. ಅಷ್ಟೇ ಅಲ್ಲ ಒಂದು ಶತಮಾನಕ್ಕಿಂತಲೂ ಹೆಚ್ಚು ಇತಿಹಾಸವಿರುವ ಕಾಂಗ್ರೆಸ್ ಪಕ್ಷದ ಬಗೆಗಿನ ನಂಬಿಕೆ ಅಲ್ಲಾಡತೊಡಗಿದೆ. ಇದನ್ನರಿತ ಕಾಂಗ್ರೆಸ್ ಹೈಕಮಾಂಡ್ ಈ ಕಚ್ಚಾಟದ ಮೂಲಕರ್ತೃ ಕಾರ್ಯಾಧ್ಯಕ್ಷ ಡಿಕೆಶಿ ಮತ್ತು ಅಧ್ಯಕ್ಷ ದೇಶಪಾಂಡೆಯವರಿಗೆ ಬಾಯಿಮುಚ್ಚಿಕೊಂಡಿರಲು ಆದೇಶ ನೀಡಿದೆ!

ಮೊದಲೇ ಯಡಿಯೂರಪ್ಪನ ಅಬ್ಬರ ಮತ್ತು ದೇವೇಗೌಡರ ದರ್ಬಾರಿನಿಂದಾಗಿ ನಲುಗಿಹೋಗಿದ್ದ ಕಾಂಗ್ರೆಸ್ ಈಗ ರಾಜ್ಯ ನಾಯಕರ ಬಹಿರಂಗ ಕಚ್ಚಾಟದಿಂದ ಇನ್ನಷ್ಟು ಜರ್ಜರಿತವಾಗಿದೆ. ಕೇಂದ್ರದಲ್ಲಿ ಕಾಂಗ್ರೆಸ್‌ನ ನಾಯಕರು ಅಧಿಕಾರ ಹಿಡಿದಿದ್ದರೂ ರಾಜ್ಯದಲ್ಲಿನ ಕಾಂಗ್ರೆಸ್ ನಾಯಕರು ಕಳೆದ ಕೆಲ ವರ್ಷಗಳಿಂದ ಅಧಿಕಾರವಿಲ್ಲದೇ ವಿಲವಿಲನೆ ಒದ್ದಾಡುತ್ತಿದ್ದಾರೆ. ಆ ಅಧಿಕಾರ ದಾಹವೇ ಇಂದು ರಾಜ್ಯ ಕಾಂಗ್ರೆಸ್ ನಾಯಕರ ಬಹಿರಂಗ ಕಚ್ಚಾಟಕ್ಕೆ ಮೂಲ ಕಾರಣವೆಂದರೆ ತಪ್ಪಾಗಲಾರದು.



ಒಂದೆಡೆ ದಿನದಿಂದ ದಿನಕ್ಕೆ ಚುನಾವಣೆಯಿಂದ ಚುನಾವಣೆಗೆ ತನ್ನ ವರ್ಚಸ್ಸನ್ನು ವೃದ್ಧಿಸಿಕೊಳ್ಳುತ್ತಿರುವ ಯಡಿಯೂರಪ್ಪ, ಇನ್ನೊಂದೆಡೆ ಕಾಂಗ್ರೆಸ್ ಹೈಕಮಾಂಡ್ ಅನ್ನು ತಮಗಿಷ್ಟ ಬಂದಂತೆ ಆಟವಾಡಿಸುತ್ತಿರುವ ದೇವೇಗೌಡರ ತಂತ್ರದಿಂದಾಗಿ ತಮ್ಮ ಅಸ್ತಿತ್ವವನ್ನೇ ಕಳೆದುಕೊಂಡಿದ್ದ ದೇಶಪಾಂಡೆ ಮತ್ತು ಡಿ.ಕೆ.ಶಿವಕುಮಾರ್ ನಾಲಾಯಕ್ ಎನಿಸಿಕೊಂಡಿದ್ದರು.

ಇದೆಲ್ಲ ಆರಂಭವಾಗಿದ್ದು ರಾಜ್ಯಸಭಾ ಚುನಾವಣೆಯ ಕಾರಣಕ್ಕಾಗಿ. ಯಾವಾಗ ಬಿ.ಕೆ.ಹರಿಪ್ರಸಾದರನ್ನು ಕಾಂಗ್ರೆಸ್ ಹೈಕಮಾಂಡ್ ತನ್ನ ಎರಡನೇ ಅಭ್ಯರ್ಥಿಯಾಗಿ ಚುನಾವಣಾ ಕಣಕ್ಕಿಳಿಸುವ ಬಗ್ಗೆ ಪ್ರಸ್ತಾಪಿಸಿತೋ ಆಗ ಜೆಡಿಎಸ್ ನಾಯಕ ದೇವೇಗೌಡ ಅದನ್ನು ವಿರೋಧಿಸಿದರು. ಈ ಅವಕಾಶವನ್ನೇ ಉಪಯೋಗಿಸಿಕೊಂಡು ತಾವು ಎರಡನೆ ಅಭ್ಯರ್ಥಿಯಾಗಿ ದೆಹಲಿಗೆ ಹೋಗುವ ಕನಸನ್ನು ಕೆಲ ರಾಜ್ಯ ಕಾಂಗ್ರೆಸಿಗಳು ಕಾಣಲಾರಂಭಿಸಿದರು. ಅದರಲ್ಲೂ ಮುಖ್ಯವಾಗಿ ದೆಹಲಿ ಜೊತೆ ಒಳ್ಳೆಯ ನೆಟ್‌ವರ್ಕ್ ಇಟ್ಟುಕೊಂಡಿರುವ ದೇಶಪಾಂಡೆ ಏಕ್‌ದಂ ಸಕ್ರಿಯರಾಗಿಬಿಟ್ಟರು. ಒಂದು ಹಂತದಲ್ಲಂತೂ ಹರಿಪ್ರಸಾದ್ ಬದಲು ದೇಶಪಾಂಡೆಯೇ ಅಭ್ಯರ್ಥಿ ಎಂಬ ಸುದ್ದಿಯೂ ಕೇಳಿಬಂತು. ಅಸೆಂಬ್ಲಿ ಚುನಾವಣೆಯಲ್ಲಿ ತನ್ನ ಸ್ವಂತ ಕ್ಷೇತ್ರದಿಂದಲೇ ಗೆಲ್ಲಲಾಗದ ಈ ಬ್ರಾಹ್ಮಣ ರಾಜ್ಯಸಭೆಗೆ ಹೋದರೆ ತನ್ನ 'ಹಣಬಲ'ದಿಂದ ಕೇಂದ್ರದಲ್ಲಿ ಮಂತ್ರಿಯೂ ಆಗಬಹುದೆಂದು ಇಲ್ಲಿಯ ನಾಯಕರು ಲೆಕ್ಕಾಚಾರ ಹಾಕಿದರು. ಒಮ್ಮೆ ದೆಹಲಿಯಲ್ಲಿರುವ ಮೇಡಂ ಆಸ್ಥಾನದಲ್ಲಿ ದೇಶಪಾಂಡೆ ಸ್ಥಾನ ಗಿಟ್ಟಿಸಿಕೊಂಡರೆ ಅನಂತರ ಆತನನ್ನು ಅಲ್ಲಾಡಿಸಲು ಯಾರಿಂದಲೂ ಸಾಧ್ಯವಾಗದು ಎಂಬುದು ದೆಹಲಿಯಲ್ಲಿರುವ ರಾಜ್ಯದ ಕಾಂಗ್ರೆಸ್ ನಾಯಕರಿಗೂ ಮನವರಿಕೆಯಾಯಿತು. ಹೀಗಾಗಿ ದೇಶಪಾಂಡೆಯನ್ನು ಕಿತ್ತೊಗೆಯುವ ಸ್ಕೆಚ್ ರೂಪಗೊಂಡಿದ್ದು ದೆಹಲಿಯಲ್ಲಿ, ಆದರೆ ಅದು ಕಾರ್ಯರೂಪಕ್ಕೆ ಬಂದದ್ದು ಬೆಂಗಳೂರಿನಲ್ಲಿ!

ಅದೇನೇ ಇರಲಿ, ನೆರೆ ಪರಿಹಾರ ಸಂತ್ರಸ್ತರ ನಿಧಿಯನ್ನು ದುರ್ಬಳಕೆ ಮಾಡಿದ ದೇಶಪಾಂಡೆಯನ್ನು ಯಾವ ಕಾರಣಕ್ಕೂ ಕ್ಷಮಿಸಕೂಡದು. ದೇಶಪಾಂಡೆ ಹಲವಾರು ವರ್ಷಗಳ ಕಾಲ ಅಧಿಕಾರದಲ್ಲಿದ್ದು ಕೋಟ್ಯಂತರ ರೂ.ಗಳ ಆಸ್ತಿಯನ್ನು ತಮ್ಮದಾಗಿಸಿಕೊಂಡಿರುವುದು ಇಡೀ ಪ್ರಪಂಚಕ್ಕೇ ಗೊತ್ತು. ಅಂತಹುದರಲ್ಲಿ ಈ ಚಿಲ್ಲರೆ ಕಾಸನ್ನು ನೆರೆ ಪರಿಹಾರ ಸಂತ್ರಸ್ತರ ನಿಧಿಯಿಂದ ಬಳಸಿಕೊಳ್ಳಲು ಈತನಿಗೆ ಹೇಗೆ ಮನಸು ಬಂತು ಎಂಬುದೇ ಪ್ರಶ್ನೆ.

ಕಾಂಗ್ರೆಸ್ ನಾಯಕನ ಈ ಅವ್ಯವಹಾರ ಬಯಲುಗೊಳ್ಳುವ ಮುನ್ನ ಲೋಕಾಯುಕ್ತವು ಬಿಜೆಪಿ ಸರ್ಕಾರದಲ್ಲಿನ ಅನೇಕ ಉಸ್ತುವಾರಿ ಸಚಿವರು ನೆರೆ ಪರಿಹಾರ ನಿಧಿಯನ್ನು ದುರ್ಬಳಕೆ ಮಾಡಿದ್ದಾರೆಂಬ ವರದಿಯನ್ನು ಬಹಿರಂಗ ಪಡಿಸಿತ್ತು. ಇದನ್ನು ಆಧರಿಸಿಯೇ ಮುಂದಿನ ಅಧಿವೇಶನದಲ್ಲಿ ಕಾಂಗ್ರೆಸ್ ನಾಯಕರು ನೆರೆ ಪರಿಹಾರದ ವಿಷಯದಲ್ಲಿ ಯಡ್ಡಿಯ ಚೆಡ್ಡಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಲು ಯೋಚಿಸುತ್ತಿದ್ದರು. ಆದರೀಗ ಕಾಂಗ್ರೆಸ್‌ನಲ್ಲೇ ನೆರೆ ಪರಿಹಾರ ನಿಧಿಯ ಅವ್ಯವಹಾರ ನಡೆದು ಬಿಜೆಪಿ ನಾಯಕರು ಹಿರಿಹಿರಿ ಹಿಗ್ಗುತ್ತಿದ್ದಾರೆ. ಯಾಕೆಂದರೆ ಮುಂದಿನ ಅಧಿವೇಶನದಲ್ಲಿ ಈ ಬಗ್ಗೆ ಬಿಜೆಪಿಯ ನಾಯಕರನ್ನು ಪ್ರಶ್ನಿಸುವ ನೈತಿಕ ಹಕ್ಕನ್ನು ಕಾಂಗ್ರೆಸ್ ಕಳೆದುಕೊಂಡಿದೆ. ಅಂದರೆ ಕಾಂಗ್ರೆಸ್ ಮತ್ತು ಬಿಜೆಪಿ - ಎರಡೂ ಪಕ್ಷದವರೂ ಜನರನ್ನು ವಂಚಿಸಿದ್ದಾರೆ.

ದೆಹಲಿಯಲ್ಲಿರುವ ರಾಜ್ಯ ಕಾಂಗ್ರೆಸ್ ನಾಯಕರು ಮತ್ತು ರಾಜ್ಯದ ಚುಕ್ಕಾಣಿ ಹಿಡಿದಿರುವ ಇಲ್ಲಿಯ ನಾಯಕರ ಜಂಟಿ ಕಾರ್ಯಾಚರಣೆಯಿಂದಾಗಿ ದೇಶಪಾಂಡೆ ಬಲಿಪಶುವಾಗಿದ್ದಾರೆಂದು ಹೇಳಿದರೆ ತಪ್ಪಾಗುತ್ತದೆ. ಯಾಕೆಂದರೆ ಒಂದೇ ಒಂದು ಉಪಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷದ ವರ್ಚಸ್ಸನ್ನು ಮತ್ತೆ ಎತ್ತಿ ತೋರಿಸಲು ಅಸಮರ್ಥವಾಗಿರುವ ದೇಶಪಾಂಡೆ ಯಾವತ್ತೋ ತನ್ನ ಸ್ಥಾನವನ್ನು ಬಿಟ್ಟುಕೊಡಬೇಕಾಗಿತ್ತು. ಆದರೆ ತನ್ನ ದೆಹಲಿ ಕಾಂಟ್ಯಾಕ್ಟ್ ಮತ್ತು ಹಣ ಬಲದಿಂದಲೇ ಅಧ್ಯಕ್ಷಗಾದಿಗೆ ಅಂಟಿಕೊಂಡು ಕುಳಿತಿದ್ದ ದೇಶಪಾಂಡೆ ಕಾಂಗ್ರೆಸ್ ಕಾರ್ಯಕರ್ತರ ಪಾಲಿಗೆ ಉತ್ಸವಮೂರ್ತಿಯಾಗಿ ಕಂಡರೇ ವಿನಃ ಒಬ್ಬ ಪ್ರಬಲ ಅಥವಾ ಆದರ್ಶ ನಾಯಕನಾಗಿ ಅಲ್ಲವೇ ಅಲ್ಲ.

ಎರಡು ವರ್ಷಗಳ ಹಿಂದೆ ದೇಶಪಾಂಡೆ ತಮ್ಮ ಸ್ವಂತ ಅಸೆಂಬ್ಲಿ ಕ್ಷೇತ್ರವಾದ ಹಳಿಯಾಳದಲ್ಲಿ ಸೋತರೂ ಕೂಡಾ ಅವರನ್ನು ಅಧ್ಯಕ್ಷ ಸ್ಥಾನದಲ್ಲಿ ಕೂರಿಸಿದ್ದಕ್ಕೆ ಮುಖ್ಯಕಾರಣ ಅವರ 'ಮನಿಪವರ್'. ಅವರ ಜೊತೆಗೆ ಉತ್ತಮ 'ಮಸಲ್‌ಪವರ್' ಹೊಂದಿದ್ದ ಡಿಕೆಶಿಯನ್ನು ಕಾರ್ಯಾಧ್ಯಕ್ಷನನ್ನಾಗಿಸಿತ್ತು ಕಾಂಗ್ರೆಸ್ ಹೈಕಮಾಂಡ್.

ದೇಶಪಾಂಡೆಯ 'ಮನಿಪವರ್' ಮತ್ತು ಡಿಕೆಶಿಯ 'ಮಸಲ್‌ಪವರ್' ಯಡ್ಡಿ ಸರ್ಕಾರವನ್ನು ಅಲುಗಾಡಿಸಲು ಸಾಕು ಎಂಬ ತರ್ಕ ಕಾಂಗ್ರೆಸ್ ಹೈಕಮಾಂಡ್‌ನದ್ದಾಗಿತ್ತು. ಆದರೆ ಯಾವತ್ತೂ ದೇಶಪಾಂಡೆ ಪಕ್ಷವನ್ನು ಬಲಪಡಿಸಲು ತನ್ನಲ್ಲಿರುವ ಹಣವನ್ನು ಬಳಸಿಕೊಳ್ಳಲೇ ಇಲ್ಲ. ಹಾಗೆಯೇ ಡಿಕೆಶಿಗೆ ಅಧಿಕಾರದಲ್ಲಿರುವ ಯಡ್ಡಿ ಸರ್ಕಾರದ ವಿರುದ್ಧ ಒಂದೇ ಒಂದು ಜನಾಂದೋಲನ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲು ಸಾಧ್ಯವಾಗಲೇ ಇಲ್ಲ. ಹೀಗಾಗಿ ಡಿಕೆಶಿ-ದೇಶಿ ಇಬ್ಬರೂ ಪರದೇಶಿಗಳ ತರಹ ಕಾಂಗ್ರೆಸ್ ಕಾರ್ಯಕರ್ತರಿಗೆ ಕಾಣಿಸಿಕೊಂಡರು.

ಈಗ ಈ ಇಬ್ಬರು ನಾಯಕರ ಕಚ್ಚಾಟ ನೋಡಿ ಕಾಂಗ್ರೆಸ್ ಹೈಕಮಾಂಡ್ ರೋಸಿಹೋಗಿದೆ. ಮೊದಲೇ ಈ ಇಬ್ಬರು ನಾಯಕರು ಅಧಿಕಾರದ ಗದ್ದುಗೆ ಹಿಡಿದ ನಂತರ ಪಕ್ಷಕ್ಕಾಗಿ ಏನೂ ಮಾಡಿಲ್ಲ. ಈಗ ಅಧಿಕಾರವನ್ನು ಬಿಟ್ಟು ಕೊಡುವ ಸಂದರ್ಭದಲ್ಲಿ ಜಗಳವಾಡಿ ಕಾಂಗ್ರೆಸ್ ಪಕ್ಷದ ವರ್ಚಸ್ಸಿಗೆ ಧಕ್ಕೆ ತಂದಿರುವುದು ದೆಹಲಿ ಮೇಡಂ ಸಿಟ್ಟು ಬರಿಸಿದೆ. ಕಾಂಗ್ರೆಸ್‌ನಿಂದ ನೆರೆ ಪರಿಹಾರ ನಿಧಿ ದುರ್ಬಳಕೆಯಾದ ಬಗ್ಗೆ ಮಾಧ್ಯಮಗಳಿಗೆ ಸುದ್ದಿ ತಲುಪಿದ್ದು ಇದೇ ಪಕ್ಷದ ನಾಯಕರು. ಮುಖ್ಯವಾಗಿ ಡಿಕೆಶಿ ಈ ಸುದ್ದಿಯನ್ನು ಮಾಧ್ಯಮಗಳಿಗೆ ತಲುಪುವಂತೆ ಮಾಡಿದ್ದಾರೆ ಎಂಬುದು ಕಾಂಗ್ರೆಸ್ ಪಕ್ಷದಲ್ಲಿ ಕೇಳಿ ಬರುತ್ತಿರುವ ಗುಸುಗುಸು.

ಹೀಗೆ ಮಾಡುವ ಮುಖಾಂತರ ದೇಶಪಾಂಡೆಯ 'ದೆಹಲಿ ಪಯಣ'ಕ್ಕೆ ಬ್ರೇಕ್ ಹಾಕುವಲ್ಲಿ ಡಿಕೆಶಿ ಯಶಸ್ವಿಯಾಗಿರಬಹುದು. ಆದರೆ ಇದಕ್ಕಾಗಿ ಕಾಂಗ್ರೆಸ್ ಪಕ್ಷ ಅಪಾರವಾದ ಬೆಲೆಯನ್ನು ತೆರಬೇಕಾಗಬಹುದು ಎಂಬುದನ್ನು ಡಿಕೆಶಿ ಅರಿಯದಿದ್ದುದು ಆಶ್ಚರ್ಯ.

ಇಲ್ಲಿ ಒಂದೇ ಏಟಿಗೆ ಡಿಕೆಶಿ ಜಾಣತನದಿಂದ ದೇಶಪಾಂಡೆ ಮತ್ತು ರಾಜಶೇಖರನ್ ಎಂಬ ಎರಡು ಹಣ್ಣುಗಳನ್ನು ಉದುರಿಸಿದ್ದಾರೆ. ಯಾಕೆಂದರೆ ಕಾಂಗ್ರೆಸ್ ಹೈಕಮಾಂಡ್ ಜತೆ ಒಳ್ಳೆಯ ಸಂಬಂಧ ಹೊಂದಿರುವ ಎಂ.ವಿ.ರಾಜಶೇಖರನ್ ಕೂಡಾ ಮುಂದಿನ ರಾಜ್ಯಾಧ್ಯಕ್ಷರಾಗುವ ಮಾತುಗಳು ಕೇಳಿಬರುತ್ತಿದ್ದವು. ಈಗ ನೆರೆ ಪರಿಹಾರ ನಿಧಿ ದುರ್ಬಳಕೆಯ ಆರೋಪಕ್ಕೊಳಗಾಗಿರುವ ದೇಶಪಾಂಡೆ ಅಧ್ಯಕ್ಷನಾಗಿ ಮತ್ತೆ ಮುಂದುವರೆಯುವ ಸಾಧ್ಯತೆ ಇಲ್ಲವೇ ಇಲ್ಲ; ಅದರ ಜೊತೆಗೆ ಆ ಸ್ಥಾನಕ್ಕೆ ಲಿಂಗಾಯತ ಸಮುದಾಯದ ರಾಜಶೇಖರನ್ ಅವರನ್ನು ಪಟ್ಟಾಭಿಷೇಕ ಮಾಡುವ ಪ್ರಮೇಯವೂ ಇಲ್ಲದಂತಾಗಿದೆ.

ಸದ್ಯದಲ್ಲೇ ನಡೆಯಲಿರುವ ಕಾಂಗ್ರೆಸ್ ಪಕ್ಷದ ಪುನರ್‌ಸಂಘಟನೆಯ ಹಿನ್ನೆಲೆಯಲ್ಲಿ ಈ ಎಲ್ಲಾ ರಾದ್ಧಾಂತಗಳು ನಡೆಯುತ್ತಿರುವುದನ್ನು ಕಾಂಗ್ರೆಸ್ ಹೈಕಮಾಂಡ್ ಗಂಭೀರವಾಗಿ ಪರಿಗಣಿಸುತ್ತಿದೆ. ಹೀಗಾಗಿ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಒಬ್ಬ ಯೋಗ್ಯವಾದ ಅಭ್ಯರ್ಥಿಗಾಗಿ, ಬಿಜೆಪಿ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳಬಲ್ಲಂತಹ ಮೇಧಾವಿ ನಾಯಕನಿಗಾಗಿ ಹೈಕಮಾಂಡ್ ತಲಾಶ್ ಆರಂಭಿಸಿದೆ. ಈ ಹಿನ್ನೆಲೆಯಲ್ಲಿ ದಲಿತ ವರ್ಗಕ್ಕೆ ಸೇರಿದ ಡಾ.ಪರಮೇಶ್ವರಪ್ಪ ಅವರ ಹೆಸರು ದೆಹಲಿಯಿಂದ ಬೆಂಗಳೂರಿನತನಕ ದಟ್ಟವಾಗಿ ಕೇಳಿಬರುತ್ತಿದೆ.


ಹೈಕಮಾಂಡ್ ಜತೆ ಮತ್ತು ಯುವ ನಾಯಕ ರಾಹುಲ್ ಗಾಂಧಿ ಜತೆ ಒಳ್ಳೆಯ ಸೌಹಾರ್ದ ಸಂಬಂಧ ಹೊಂದಿರುವ ಪರಮೇಶ್ವರಪ್ಪ ದಲಿತ ಸಮುದಾಯಕ್ಕೆ ಸೇರಿದವರಾದರೂ ಎಲ್ಲ ಸಮುದಾಯಗಳ ಶಾಸಕರೊಂದಿಗೆ ಚೆನ್ನಾಗಿರುವುದು ಅವರ ಪಾಲಿಗೆ ಪ್ಲಸ್ ಪಾಯಿಂಟಾಗಿದೆ.

ಈಗಾಗಲೇ ಲಿಂಗಾಯತ ಜನಾಂಗದ ಮತದಾರರೆಲ್ಲ ಬಿಜೆಪಿ ಜತೆ ಗುರುತಿಸಿಕೊಂಡಿದ್ದಾರೆ. ಹಾಗೆಯೇ ಒಕ್ಕಲಿಗ ಜನಾಂಗದವರು ದೇವೇಗೌಡರ ಫಿಕ್ಸೆಡ್ ಡಿಪಾಸಿಟ್ ಆಗಿದ್ದಾರೆ. ಕಾಂಗ್ರೆಸ್‌ಯಲ್ಲಿ ಎಸ್ಸೆಂ ಕೃಷ್ಣ ಡಿಕೆಶಿಯವರಂತಹ ಒಕ್ಕಲಿಗ ನಾಯಕರಿದ್ದರೂ ಅದರಿಂದ ಪಕ್ಷಕ್ಕೆ ಲಾಭವೇನೂ ಆಗುವುದಿಲ್ಲವೆಂದು ಹೈಕಮಾಂಡ್‌ಗೆ ಅರಿವಾಗಿದೆ. ಹೀಗಾಗಿ ತಮ್ಮ ಸಾಂಪ್ರದಾಯಿಕ ಮತದಾರರಾದ ಅಲ್ಪಸಂಖ್ಯಾತರು, ಹಿಂದುಳಿದವರು ಮತ್ತು ದಲಿತರ ಮತಗಳನ್ನು ಕ್ರೋಢೀಕರಿಸಲು ಹೈಕಮಾಂಡ್ ಚಿಂತಿಸುತ್ತಿದೆ. ಈ ಹಿನ್ನೆಲೆಯಲ್ಲಿ ಡಾ.ಪರಮೇಶ್ವರ್ ಪಾಲಿಗೆ ಅಧ್ಯಕ್ಷ ಸ್ಥಾನ ಒದಗಿ ಬಂದರೂ ಅಚ್ಚರಿಯಿಲ್ಲ.

• ಸದಾಶಿವ ಶೆಣೈ


ಉತ್ತರ ಕನ್ನಡ: ಎಸ್‌ಎಚ್‌ಆರ್‌ಸಿ ನಾಯಕರೊಂದಿಗೆ ಜಗಳಕ್ಕೆ ಬಿದ್ದಿರುವ ಮಾನಗೇಡಿ ಮಂತ್ರಿ

ಅದಿರು ಲಾರಿಗಳಿಂದಾಗಿರುವ ಪ್ರಾಣಹಾನಿಗೆ ಹೊಣೆ ಸರ್ಕಾರವಲ್ಲವೇ? ಎಸ್‌ಎಚ್‌ಆರ್‌ಸಿಯೇ? ಸರ್ಕಾರದ ತಪ್ಪನ್ನು ಮಾನವ ಹಕ್ಕು ಆಯೋಗದ ಮೇಲೆ ಹೊರಿಸುವ ಬದಲು ತಾನು ನಾಲಾಯಕ್ ಮಂತ್ರಿಯೆಂದು ಒಪ್ಪಿಕೊಂಡು ಜನರಮುಂದೆ ತಲೆತಗ್ಗಿಸಿ ಆನಂದ್ ನಿಲ್ಲಲಿ ಎಂದ ನ್ಯಾ.ನಾಯಕರು ಆನಂದ್ ಮತ್ತವನ ಸರ್ಕಾರದ ಮಾನ ಹರಾಜಾಕಿಬಿಟ್ಟರು. ಇದು ಆನಂದ್ ಅಸ್ನೋಟಿಕರ್‌ಗೆ ಬೇಕಿತ್ತಾ!



ಅಸ್ನೋಟಿಕರ್

ಆನಂದ್ ಅಸ್ನೋಟಿಕರ್ ಶುದ್ಧ ಮಾನಗೇಡಿ ಮಂತ್ರಿ. ಶಾಸಕನಾದ-ಜನಪ್ರತಿನಿಧಿಯಾದ ಈತ ತನ್ನ ಸ್ಥಾನ-ಮಾನ ಎಲ್ಲವನ್ನೂ ಮರೆತು ರಾಜ್ಯ ಮಾನವ ಹಕ್ಕು ಆಯೋಗ (ಎಸ್‌ಎಚ್‌ಆರ್‌ಸಿ)ದ ಅಧ್ಯಕ್ಷರಾದ ನ್ಯಾಯಮೂರ್ತಿ ಎಸ್.ಆರ್.ನಾಯಕರ ವಿರುದ್ಧ ಬೀದಿ ಜಗಳಕ್ಕೆ ಬಿದ್ದಿದ್ದಾನೆ. ಅಧಿಕಪ್ರಸಂಗಿ ಮಂತ್ರಿ ಆನಂದ್ ಅಸ್ನೋಟಿಕರ್ ಸಂಪೂರ್ಣ ನಿರ್ಲಜ್ಜನಂತೆ ನ್ಯಾ.ನಾಯಕರ ಬಗ್ಗೆ ಬಾಯಿಗೆ ಬಂದದ್ದು ಮಾತನಾಡುತ್ತಾ ಅಸಹ್ಯ ಹುಟ್ಟಿಸುತ್ತಿದ್ದಾನೆ. ಇದಕ್ಕೆ ಕಾರಣ ಈತನ ಒಣ ಅಹಮಿಕೆ ಮತ್ತು ದೋ ನಂಬರ್ ದಂಧೆಯ ದಾಹವಷ್ಟೇ!




ಉತ್ತರ ಕನ್ನಡ ಹೆತ್ತ ಅಸ್ನೋಟಿಕರ್ ಎಂಬ ದಂಡಪಿಂಡದ ಪ್ರಸ್ತುತ ಆಕ್ರೋಶಕ್ಕೆ ಮೂಲ ಗಣಿ ದಂಧೆಯ ದಗಲ್ಬಾಜಿತನ ಮತ್ತು ಕಾರವಾರ ಕ್ಷೇತ್ರದ ಖತರ್‌ನಾಕ್ ಕಾಸಿನ ರಾಜಕಾರಣ. ಅಂಕೋಲಾದ ಬೇಲೇಕೇರಿ ಬಂದರಿಂದ ಚೀನಾಕ್ಕೆ ಸಾಗುವ ಬಳ್ಳಾರಿ ಗಣಿ ಧೂಳಿನ ಅವ್ಯವಹಾರ ಆನಂದ್ ಅಸ್ನೋಟಿಕರ್‌ನನ್ನು ಬೆತ್ತಲಾಗಿ ನಿಲ್ಲಿಸಿದೆ. ಅಸ್ನೋಟಿಕರ್‌ನ ಅರಚಾಟದ ಸುತ್ತ ಗಣಿ ಮಾಫಿಯಾ ಗಿರಕಿ ಹೊಡೆಯುತ್ತಿದೆ!

ಈಗಾಗಲೇ ಬೇಲೇಕೇರಿ ಬಂದರಿಗೆ ಹಲವು ಬಾರಿ ಭೇಟಿ ನೀಡಿರುವ ಎಸ್‌ಎಚ್‌ಆರ್‌ಸಿ ಅಧ್ಯಕ್ಷ ನ್ಯಾ.ನಾಯಕರು "ಇಲ್ಲಿ ಪರಿಸರ ನಾಶವಾಗುತ್ತಿದೆ, ಮಾನವ ಹಕ್ಕು ಉಲ್ಲಂಘನೆಯಾಗುತ್ತಿದೆ, ಅಕ್ರಮ ಜಟ್ಟಿ (ಧಕ್ಕೆ) ನಿರ್ಮಾಣ ನಡೆಯುತ್ತಿದೆ...." ಎಂದು ಅಬ್ಬರಿಸಿದ್ದಾರೆ. ಇದನ್ನು ಕೇಳಿದಾಗಲೆಲ್ಲಾ ಮಂತ್ರಿ ಅಸ್ನೋಟಿಕರ್ ಕೆಳಗಿನಿಂದ ಕಡಿತ ಶುರುವಾದಂತೆ "ಥೈ..... ಥೈ....." ಎಂದು ತುಂಡುಗುಪ್ಪಳ ಹಾಕುತ್ತಿದ್ದಾನೆ. ನ್ಯಾ.ನಾಯಕರು ತಮ್ಮ ಸ್ಥಾನದ ಬಲದಿಂದ ತನ್ನ ರಹಸ್ಯ ಬಿಸಿನೆಸ್ ಬೇಧಿಸುವ ಹಿಕಮತ್ತು ಮಾಡುತ್ತಿದ್ದಾರೆಂಬ ಆತಂಕ ಚೋರ ಆನಂದ್‌ಗೆ! ಅಷ್ಟೇ ಅಲ್ಲ, ನ್ಯಾ. ನಾಯಕರ ಹಿಂದೆ ತನ್ನ ಪ್ರಬಲ ಪ್ರತಿಸ್ಪರ್ಧಿ-ಅದಿರು ರಫ್ತುದಾರ ಸತೀಶ್ ಸೈಲ್ ಎಂಬ ಕಾಂಗ್ರೆಸ್ಸಿಗನ ಕೈವಾಡವಿದೆಯೆಂಬ ತೀರ್ಮಾನಕ್ಕೆ ಆನಂದ್ ಬಂದುಬಿಟ್ಟಿದ್ದಾನೆ.

ಸೈಲ್-ಆನಂದ್ ಅಸ್ನೋಟಿಕರ್

ಕಾರವಾರ-ಅಂಕೋಲಾದ ರಾಜಕೀಯ-ಸಾಮಾಜಿಕ ಮತ್ತು ಆರ್ಥಿಕರಂಗದಲ್ಲಿ ಮಂತ್ರಿ ಆನಂದ್ ಅಸ್ನೋಟಿಕರ್‌ಗೆ ಎದುರಾಳಿಯಿದ್ದರೆ, ಆತ ಅದಿರು ದಂಧೆಗಾರ ಸತೀಶ್ ಸೈಲ್ ಮಾತ್ರ! ಕರ್ನಾಟಕದ ಬೇಲೇಕೇರಿ ಮತ್ತು ಗೋವಾದ ಮಡಗಾಂವ್ ಬಂದರಿನಿಂದ ಅದಿರನ್ನು ವಿದೇಶಕ್ಕೆ ಸಾಗಿಸುವ ಸೈಲ್ ಸಾವಿರಾರು ಕೋಟಿ ರೂಪಾಯಿ ವ್ಯವಹಾರ ನಡೆಸುವಾತ. ಆಪರೇಷನ್ ಕ'ಮಲ'ದಲ್ಲಿ ಅಸ್ನೋಟಿಕರ್ ಬಿಜೆಪಿಗೆ ಹಾರಿದ ನಂತರ ನಡೆದ ಉಪಚುನಾವಣೆಯಲ್ಲಿ ಆನಂದ್ ವಿರುದ್ಧ ಸೈಲ್ ಕಾಂಗ್ರೆಸ್ ಕ್ಯಾಂಡಿಟೇಟಾಗಿ ಸ್ಪರ್ಧಿಸಿ ಆನಂದನ ಬೆವರಿಳಿಸಿದ್ದ. ಅದೊಂದು ಧನಾಧನ್ ದಾದಾಗಿರಿಯೇ ಆಗಿತ್ತು.

ಅಲ್ಲಿಂದಾಚೆ ಆನಂದ್‌ಗೆ ಸೈಲ್‌ನಿಂದ ಬಂದರು ಉದ್ಯಮದಲ್ಲಿದ್ದ ಪೈಪೋಟಿ ರಾಜಕೀಯಕ್ಕೂ ಎಂಟ್ರಿ ಪಡೆದುಕೊಂಡುಬಿಟ್ಟಿತು. ಕಾರವಾರ ಬಂದರು ಸಾಮ್ರಾಜ್ಯವನ್ನು ಏಕಸ್ವಾಮ್ಯದ ಹಿಡಿತಕ್ಕೊಳಪಡಿಸಿಕೊಂಡು ದರಬಾರು ನಡೆಸುತ್ತಿದ್ದರೂ ಆನಂದ್ ಸೈಲ್‌ನಷ್ಟು ಶ್ರೀಮಂತನಲ್ಲ, ಆತನಷ್ಟು ನಿರಾಡಂಬರ ಕಲ್ಚರ್ಡ್ ವ್ಯಕ್ತಿಯೂ ಅಲ್ಲ. ಸದಾ ಜಿದ್ದಾಜಿದ್ದಿ- ಹೊಟ್ಟೆಕಿಚ್ಚಿನ ರಾಜಕೀಯ ಮಾಡುವ ಅಸ್ನೋಟಿಕರ್ ಸೈಲ್ ಪಾಲಿಟಿಕ್ಸ್ ಪ್ರವೇಶ ಮಾಡಿದಂದಿನಿಂದ ಆತನ ಅದಿರು ದಂಧೆಗೆ ಧಕ್ಕೆ ಮಾಡಿ ಹಣಿಯಲು ಹವಣಿಸುತ್ತಲೇ ಇದ್ದಾನೆ.



ಎಸ್ಸಾರ್ ನಾಯಕ್

ರೆಡ್ಡಿ-ಸೈಲ್ ಸ್ನೇಹಾನುಬಂಧ!

ಆನಂದ್ ಅಸ್ನೋಟಿಕರ್ ಮಂತ್ರಿಗಿರಿ ತಾಕತ್ತಿನಿಂದ ಸೈಲ್‌ನ ಬಂದರು ಪಾರುಪತ್ಯಕ್ಕೆ ತೊಂದರೆ ಕೊಡಲು ಅದೆಷ್ಟೇ ಪ್ರಯತ್ನಿಸಿದರೂ ಅದು ವಿಫಲವಾಗುತ್ತಲೇ ಇದೆ. ರಾಜ್ಯ ಬಿಜೆಪಿ ಸರ್ಕಾರದ ಡಿಫ್ಯಾಕ್ಟೋ ಅಧಿಪತಿ ಜನಾರ್ದನ ರೆಡ್ಡಿ ಎಂಬ ಗಣಿ ದೊರೆ ಸೈಲ್ ಬೆನ್ನಿಗೆ ನಿಂತು ಸೂತ್ರ ಆಡಿಸುತ್ತಿರುವುದೇ ಅಸ್ನೋಟಿಕರ್ ಕಾರ್ಯಾಚರಣೆ ಕೈಗೂಡದಿರಲು ಕಾರಣ! ರೆಡ್ಡಿಗಳ ಶಿಷ್ಯನಾಗಿ ಆನಂದ್ ಬಿಜೆಪಿ ಸೇರಿ ಮಂತ್ರಿಯಾಗಿದ್ದರೂ ಇವತ್ತು ಅಸ್ನೋಟಿಕರ್ ರೆಡ್ಡಿ ಗ್ಯಾಂಗಿನಲ್ಲಿಲ್ಲ, ಆತ ರೇಣುಕಾಚಾರ್ಯನ ಕ್ಯಾಂಪಿನಲ್ಲಿದ್ದಾನೆ. ಆದರೆ ಅಸ್ನೋಟಿಕರ್ ಬಿಜೆಪಿ ಸೇರುವ ಮುಂಚಿನಿಂದಲೇ ಕಾರವಾರದ ಅದಿರು ಡಾನ್ ಸತೀಶ್ ಸೈಲ್ ರೆಡ್ಡಿಗಳಿಗೆ ಅತ್ಯಾಪ್ತ ಮಿತ್ರ.

ಕಳೆದ ಅಸೆಂಬ್ಲಿ ಇಲೆಕ್ಷನ್ ಹೊತ್ತಲ್ಲಿ ಆಗ ಕಾಂಗ್ರೆಸ್ ಕ್ಯಾಂಡಿಡೇಟ್ ಆಗಿದ್ದ ಆನಂದ್ ಅಸ್ನೋಟಿಕರ್ ವಿರುದ್ಧ ಸೈಲ್‌ನನ್ನು ಬಿಜೆಪಿಯಿಂದ ಸ್ಪರ್ಧೆಗಿಳಿಸಲು ರೆಡ್ಡಿಗಳು ರೆಡಿಯಾಗಿದ್ದರು. ಆದರೆ ಕೆನರಾದ ಬಿಜೆಪಿ ಎಂಪಿ ಟಿಕೆಟ್ ಆಸೆಯಲ್ಲಿದ್ದ ಸೈಲ್ ಅಸೆಂಬ್ಲಿ ಟಿಕೆಟ್ ಒಲ್ಲೆಯೆಂದುಬಿಟ್ಟಿದ್ದ. ಆದರೆ ಯಾವಾಗ ಹಿಂದೂತ್ವದ ಪುಂಡ ಅನಂತ್ಕುಮಾರನಿಗೆ ಬಿಜೆಪಿ ಎಂಪಿಗಿರಿ ಟಿಕೆಟ್ ತಪ್ಪಿಸಲಿಕ್ಕಾಗದೆಂದು ಖಾತ್ರಿಯಾಯ್ತೋ ಆಗ ದೇಶಪಾಂಡೆ ಬಲೆಗೆ ಬಿದ್ದ ಸೈಲ್ ಕಾಂಗ್ರೆಸ್ ಸೇರಿಕೊಂಡಿದ್ದ. ಆದರೆ ಇವತ್ತಿಗೂ ಈ ಕಾಂಗ್ರೆಸ್ ಆದ್ಮಿ ಸೈಲ್ ಮತ್ತು ಬಿಜೆಪಿ ಭೂಪ ರೆಡ್ಡಿ ನಡುವೆ ಗಳಸ್ಯ-ಕಂಠಸ್ಯ ಸ್ನೇಹವಿದೆ. ಬಿಜೆಪಿ ಮಂತ್ರಿ ಆನಂದನಿಗಿಂತಲೂ ಹೆಚ್ಚು ಕೆಲಸಗಳು ಇವತ್ತು ಸರ್ಕಾರಿ ಮಟ್ಟದಲ್ಲಿ ಸೈಲನ ದಾಗುತ್ತಿವೆ. ಹೀಗಾಗಿ ಅಸ್ನೋಟಿಕರ್ ಅದೆಷ್ಟೇ ಹಾರಾಡಿದರೂ ಸೈಲ್‌ನನ್ನು ಮಟ್ಟಹಾಕಲು ಸಾಧ್ಯವಾಗದೆ ಹತಾಶನಾಗಿ ಹೋಗಿದ್ದಾನೆ!

ಬೇಲೇಕೇರಿ ಬಂದರಿಗಾಗಿ

ಅದಿರು ರಾಜಕೀಯದ ಮಜಾ ಅಂದರೆ, ಬಿಜೆಪಿ ಮಂತ್ರಿ ಆನಂದ್ ಅಸ್ನೋಟಿಕರನಿಗೇ ಕಾಂಗ್ರೆಸ್ ಅದಿರೋದ್ಯಮಿ ಸೈಲ್ ಸಾಧ್ಯವಾದಷ್ಟು ಸಂಕಟ ಒಡ್ಡುತ್ತಲೇ ಬಂದಿದ್ದಾರೆ. ಕಾರವಾರ ಬಂದರಿನ ಮೇಲೆ ಹಿಡಿತ ಸಾಧಿಸಿದಂತೆ ಬೇಲೇಕೇರಿ ಬಂದರನ್ನೂ ವಶಪಡಿಸಿಕೊಳ್ಳಲು ಅಸ್ನೋಟಿಕರ್ ಎಷ್ಟೇ ಕರಾಮತ್ತು ಮಾಡಿದರೂ ಸೈಲನ ತಂತ್ರಗಾರಿಕೆಯಿಂದ ಸಾಧ್ಯವಾಗಲೇ ಇಲ್ಲ. ಆಗ ಬಂದರು ಡಾನ್ ಅಸ್ನೋಟಿಕರ್ ಬೇಲೇಕೇರಿ ಬಂದರಿನಲ್ಲಿ ಸೈಲ್‌ನ ಮಲ್ಲಿಕಾರ್ಜುನ ಶಿಪ್ಪಿಂಗ್ ಕಂಪನಿಯಂತೆ ತನ್ನದೂ ಒಂದು ಅದಿರು ಎಕ್ಸ್‌ಪೋರ್ಟ್ ಕಂಪನಿ ಸ್ಥಾಪಿಸಲು ಸ್ಕೆಚ್ ಹಾಕಿದ. ನೇರವಾಗಿ ತಾನೇ ಜಟ್ಟಿ (ಧಕ್ಕೆ) ನಿರ್ಮಿಸಿದರೆ ಭಾನ್ಗಡಿಯಾಗಬಹುದೆಂದು ಬೆಂಗಳೂರಿನ 'ರಾಜಮಹಲ್ ಸಿಲ್ಕ್'ನವರ ಹೆಸರಿಗೆ ರಫ್ತು ಪರವಾನಗಿ ಮತ್ತು ಜಟ್ಟಿ ಸ್ಯಾಂಕ್ಷನ್ ಮಾಡಿಸಿಕೊಂಡ ಅಸ್ನೋಟಿಕರ್ ಆ ಸಿಲ್ಕ್ ಕಂಪನಿಯಲ್ಲಿ ಪಾರ್ಟನರ್ ಆದ.

ಆರಂಭದಿಂದಲೂ ಬೇಲೇಕೇರಿಯಲ್ಲಿ ತಳವೂರಿರುವ ಗುಜರಾತಿನ ಅದಾನಿ, ಗೋವಾದ ಸಾಲ್ಗಾಂವ್ಕರ್ ಮತ್ತು ಕಾರವಾರದ ಮಲ್ಲಿಕಾರ್ಜುನ (ಸೈಲ್) ಕಂಪನಿಗಳಂತೆ ಅಸ್ನೋಟಿಕರನ ರಾಜಮಹಲ್ ಸಿಲ್ಕ್ ಕಂಪನಿಯೂ ಎಕರೆಗಟ್ಟಲೆ ಸಮುದ್ರವನ್ನೇ ಅತಿಕ್ರಮಣ ಮಾಡಿ, ಮಣ್ಣು ಭರಾವ್ ಮಾಡಿ ತರಾತುರಿಯಲ್ಲಿ ಜಟ್ಟಿ ನಿರ್ಮಿಸಲಾರಂಭಿಸಿತು. ಆಗ ಸೈಲ್ ಸಹಚರರ ಕಿತಾಪತಿಯಿಂದ ಈ "ಅಕ್ರಮ ಬಂದರು ನಿರ್ಮಾಣ" ದೊಡ್ಡ ಇಶ್ಯೂ ಆಯ್ತು, ಆದರೆ ಆಗತಾನೆ ಬಿಜೆಪಿ ಸೇರಿ ಮಂತ್ರಿಯಾಗಿದ್ದ ಆನಂದ್ ಪರ ರೆಡ್ಡಿ-ಯಡ್ಡಿ ಸರ್ಕಾರ ನಿಂತಿದ್ದರಿಂದ ಎಲ್ಲ ವಿರೋಧ ಬುಲ್ಡೋಜ್ ಆಗಿಹೋಯ್ತು, ಆನಂದ್ ಅಸ್ನೋಟಿಕರ್ ಬೇಲೇಕೇರಿ ಬಂದರಿಗೆ ಎಂಟ್ರಿ ಪಡೆದುಕೊಂಡ.


ಇಷ್ಟಕ್ಕೇ ಆನಂದನ ಅದಿರು ಅವ್ಯವಹಾರದ ದಾಹ ನೀಗಲಿಲ್ಲ, ಬೇಲೇಕೇರಿಯಲ್ಲಿ ಸೈಲ್‌ಗಿಂಥ ದೊಡ್ಡ ಸಾಹುಕಾರನಾಗುವ ಹಠಕ್ಕೆ ಬಿದ್ದ. ಬೇಲೇಕೇರಿಯಲ್ಲೇ ಸೈಲ್‌ಗೆ ಸೆಡ್ಡು ಹೊಡೆಯಲು ಇನ್ನೊಂದು ರಫ್ತು ಕಂಪನಿ ಪ್ರಾರಂಭಿಸಲು ಮುಂದಾದ. ಕಾರವಾರದ ಸಾಯಿ ಇಂಟರ್‌ನ್ಯಾಷನಲ್ ಹೋಟೆಲಿನ ಸಂತೋಷ ಚೋರಕರ್ ಎಂಬಾತನ 'ಕೋಸ್ಟಲ್ ಸರ್ವಿಸ್' ರಫ್ತು ಕಂಪನಿಗೆ ಅಕ್ರಮ ಜಟ್ಟಿ ನಿರ್ಮಾಣಕ್ಕೆ ಅವಕಾಶ ಕಲ್ಪಿಸಿದ. ಅದಕ್ಕೆ ಪ್ರತಿಯಾಗಿ ಆ ಕಂಪನಿಯಲ್ಲಿ ಸ್ಲೀಪಿಂಗ್ ಪಾರ್ಟನರ್ ಆದ ಆನಂದ್!

ನ್ಯಾ.ನಾಯಕರ ಎಂಟ್ರಿ

ಆನಂದನ ಬೇನಾಮಿ ಕೋಸ್ಟಲ್ ಸರ್ವಿಸ್ ಕಂಪನಿ ಸಮುದ್ರ ನುಂಗಿ ಜಟ್ಟಿ ನಿರ್ಮಿಸುವ ಕೆಲಸ ಭರದಿಂದ ಸಾಗಿತು. ಆಗ ಎದುರಾಳಿ ಸೈಲ್ ಚಡಪಡಿಕೆಗೆ ಬಿದ್ದ. ಅಸ್ನೋಟಿಕರ್‌ನ ಅಕ್ರಮ ಜಟ್ಟಿ ಕಾಮಗಾರಿ ನಿಲ್ಲಿಸಲು ಏನೆಲ್ಲ ಸಾಧ್ಯವೋ ಅದೆಲ್ಲ ಮಾಡಲಾರಂಭಿಸಿದ. ಇದಕ್ಕೆ ಅದಿರು ಅಧಿನಾಯಕ ರೆಡ್ಡಿ ಬಳಗದಿಂದ ಗ್ರೀನ್ ಸಿಗ್ನಲ್ ಸೈಲ್‌ಗೆ ಸಿಕ್ಕಿತ್ತು. ಆದರೆ ಬಂದರು ಅಧಿಕಾರಿಗಳು ಮತ್ತು ಜಿಲ್ಲಾಡಳಿತ ಮಂತ್ರಿ ಅಸ್ನೋಟಿಕರ್‌ನ ಕೃಪಾಶೀರ್ವಾದದ ಕಂಪನಿ ಇದೆಂಬ ಹೆದರಿಕೆಯಿಂದ ಕೋಸ್ಟಲ್ ಸರ್ವಿಸ್‌ನ ಸಮುದ್ರ ಮುಚ್ಚುವ ಕಾರ್ಯ ಕಂಡೂಕಾಣದಂತೆ ಉಳಿದುಬಿಟ್ಟಿತು!



ಆಗ ಸೈಲ್ ಎಸ್‌ಎಚ್‌ಆರ್‌ಸಿ ಅಧ್ಯಕ್ಷ ನ್ಯಾ.ಎಸ್.ಆರ್. ನಾಯಕ್‌ರ ಮೊರೆಹೊಕ್ಕು ಆನಂದನ ವಿರುದ್ಧ ದೂರು ಸಲ್ಲಿಸಿದ. ಪರಿಣಾಮವಾಗಿ ನ್ಯಾ. ನಾಯಕ್ ಬೇಲೇಕೇರಿಗೆ ಬಂದರು. ಕೋಸ್ಟಲ್ ಸರ್ವೀಸ್ ಕಂಪನಿಯಿಂದ ಅಕ್ರಮ ಜಟ್ಟಿ ನಿರ್ಮಾಣ ಕಾಮಗಾರಿ ಕಂಡು "ಇದರಿಂದ ಪರಿಸರ ನಾಶವಾಗುತ್ತಿದೆ. ಮಾನವ ಹಕ್ಕುಗಳ ಉಲ್ಲಂಘನೆಯಾಗಿತ್ತಿದೆ" ಎಂದು ಸ್ಪಷ್ಟವಾಗಿ ಹೇಳಿದರು. ಮಾತ್ರವಲ್ಲ, ಬಂದರು ಅಧಿಕಾರಿಗಳನ್ನು ಮತ್ತು ಜಿಲ್ಲಾಡಳಿತದ ನೌಕರರನ್ನು ಕರೆದು ಅವರಿಗೆಲ್ಲ ಚೆನ್ನಾಗಿ ಉಗುಳಿದರು. "ಇಲ್ಲಿನ ಪರಿಸರ ಕಾಪಾಡಿ, ಮಾನವ ಹಕ್ಕು ರಕ್ಷಿಸಿ.... ಇಲ್ಲದಿದ್ದರೆ ಹುಷಾರ್!" ಎಂದು ಎಚ್ಚರಿಸಿದರು. ಜೊತೆಗೆ ಈ ಅಕ್ರಮ ಜೆಟ್ಟಿಯು ಕ್ರಸಿಆರ್‌ಝಡ್ ಕಾನೂನನ್ನು ಉಲ್ಲಂಘಿಸುತ್ತಿದೆಯೆಂದು ಅದರ ನಿರ್ಮಾಣಕ್ಕೆ ತಡೆಯಾಜ್ಞೆ ನೀಡಿದರು; ಯಡ್ಡಿ ಸರ್ಕಾರ, ಜಿಲ್ಲಾಡಳಿತವನ್ನು ತರಾಟೆಗೆ ತೆಗೆದುಕೊಂಡರು; ಅಸಮರ್ಥ ಮಂತ್ರಿ ಅಸ್ನೋಟಿಕರ್‌ನನ್ನು ಪರೋಕ್ಷವಾಗಿ ಮೂದಲಿಸಿದರು.



ಸತೀಶ್ ಸೈಲ್

ಮುರಕೊಂಡುಬಿದ್ದ ಆನಂದ

ನ್ಯಾ.ನಾಯಕರ "ಕ್ರಮ" ಬಿಗುವಾದಂತೆ, ಅಸ್ನೋಟಿಕರ್ ಕುದ್ದುಹೋದ. ಕುಂಡೆಗೆ ಖಾರ ಅರೆದಂತೆ ಕೂಗಾಡಲಾರಂಭಿಸಿದ ಆನಂದ್ ಅಸ್ನೋಟಿಕರ್, ನ್ಯಾ ನಾಯಕರ "ತನಿಖೆ"ಗೆ ತನ್ನ ವೈರಿ ಸತೀಶ್ ಸೈಲ್‌ನ ಕುಮ್ಮಕ್ಕು ಕಾರಣವೆಂದು ಕಂಡ-ಕಂಡಲ್ಲಿ ಹೇಳತೊಡಗಿದ. ಕಾರವಾರದಲ್ಲಿ ಸಿಆರ್‌ಝಡ್ ನಿಯಮಗಳನ್ನು ಉಲ್ಲಂಘಿಸಿ ಕಟ್ಟಿಸಿರುವ 'ಲೋಟಸ್' ಎಂಬ ಐಷಾರಾಮಿ ಸ್ಟಾರ್ ಹೋಟೆಲ್‌ನಲ್ಲಿ ಮಂತ್ರಿಜೀ ಆನಂದ್ ಪತ್ರಿಕಾಗೋಷ್ಠಿ ಕರೆದ ನ್ಯಾ.ನಾಯಕರ ಮೇಲೆ ದಾಳಿ ಮಾಡಿಬಿಟ್ಟ! "ಆ ಎಸ್ಸಾರ್ ನಾಯಕ್ ಬೇಲೇಕೇರಿಗೆ ಬರುವುದು ಕಾಂಗ್ರೆಸ್ಸಿಗ ಚಿತಾವಣೆಯಿಂದ... ಬರೀ ಡ್ರಾಮಾ ಮಾಡಲು ಅ ಬರ್ತಾರಷ್ಟೇ.... ಪ್ರಚಾರದ ಹುಚ್ಚು ನಾಯಕ್‌ಗೆ... ಇದೇ ಬಿಟ್ಟು ಬೇಲೇಕೇರಿಯಲ್ಲಿ ಯಾವ್ಯಾವ ಕಂಪನಿ ಎಷ್ಟೆಷ ಕಂದಾಯ ಭೂಮಿ ಅತಿಕ್ರಮಿಸಿದೆ... ಎಷ್ಟು ಬಂದರ ಭೂಮಿ ನುಂಗಿ ಜಟ್ಟಿ ಕಟ್ಟಿದ್ದಾರೆಂದು ತನಿಖೆ ನಡೆ ಸರ್ಕಾರಕ್ಕೆ ನಾಯ್ಕ್ ವರದಿ ಕೊಡ್ಲಿ...." ಎಂದು ತೊಡೆತಟ್ಟಿದ ಜಿಲ್ಲಾ ಎಸ್ಪಿ ರಮಣ ಗುಪ್ತ ಮತ್ತು ಎಚ್‌ಕ್ಯೂ ನರಸಿಂಹಮೂರ್ತಿಯನ್ನು ಅಕ್ಕಪಕ್ಕದಲ್ಲಿ ಕೂರಿಸಿಕೊಂಡ ಮಂತ್ರಿ ಅಸ್ನೋಟಿಕರ್ ಎಸ್‌ಎಚ್‌ಆರ್‌ಸಿ ಅಧ್ಯಕ್ಷರ ಮೇ ಮಾತಿನ ದಾಳಿ ನಡೆಸಿದ್ದ!!

ಬೆಂಗಳೂರಲ್ಲೂ ಕುಂತು ಇದನ್ನೇ ವದರಿದ ಆನಂದ ಅಸ್ನೋಟಿಕರ್ ಸಾಹೇಬ! ಇಷ್ಟಕ್ಕೇ ಆನಂದ್ ಸುಮ್ಮನಾ ಲಿಲ್ಲ.

ಮೊನ್ನೆ ಎಸ್‌ಎಚ್‌ಆರ್‌ಸಿ ಅಧ್ಯಕ್ಷ ನಾ. ನಾಯಕರ ಕಾರವಾರದಲ್ಲಿ ಕ್ಯಾಂಪ್ ಹಾಕಿದಾಗ ಖುದ್ದು ಆನಂದನೆ ಬಂದು ಕ್ಯೂನಲ್ಲಿ ನಿಂತು ಅವರಿಗೆ ಒಂದು ಮನವಿ ಕೊಟ್ಟು ಬಂದ. ತನ್ನ ಕ್ಷೇತ್ರದ "ಬೇಲೇಕೇರಿಯಲ್ಲಿ ಅದಿರ ರಫ್ತು ಕಂಪನಿಗಳವರು ಅತಿಕ್ರಮಣ ನಡೆಸಿದ್ದಾರೆ. ಇದರಿಂ ಮೀನುಗಾರರು ತೊಂದರೆಗೆ ಸಿಲುಕಿದ್ದಾರೆ. ಯಾರ್ಯಾರ ಅತಿಕ್ರಮಿಸಿದ್ದಾರೆಂದು ಸರ್ಕಾರಕ್ಕೆ ವರದಿ ಕೊಡಿ' ಎಂದ ಆ ಮನವಿಯಲ್ಲಿ ಆನಂದ್ ಅಲವತ್ತು ಕೊಂಡಿದ್ದಾನೆ ಎಂಥ ಜನಪರ ಕಾಳಜಿ ಅಲ್ಲವೇ?

ಆನಂದ್ ತಾನೊಬ್ಬನೇ ಮನವಿ ಕೊಟ್ಟಿಲ್ಲ; ಜತೆ ಮೂರ್‍ನಾಲ್ಕು ತನ್ನ ಚೇಲಾಗಳಿಂದಲೂ ಇಂಥದೇ ಬೇರೆ-ಬೇ ಮನವಿಗಳನ್ನು ನ್ಯಾ.ನಾಯಕರಿಗೆ ಕೊಡಿಸಿದ್ದಾನೆ. ಆ ಮನ ಕೊಡಲು ಹೋದ ಹುಡುಗರು ನ್ಯಾ.ನಾಯಕರ ಜೊ ಈ ಬಗ್ಗೆ ಜಗಳ ಆಡಿಯೂ ಬಂದಿದ್ದಾರೆ. ಆಗ ನ್ಯಾ.ನಾಯಕರ "ನೀವ್ಯಾರ ಕಿತಾಪತಿಯಿಂದ ಹೀಗೆಲ್ಲಾ ಮಾತಾಡುತ್ತಿದ್ದೀರಿ.. ನನ್ನ ಮೇಲೆ ಆರೋಪ ಮಾಡ ತ್ತಿದ್ದೀರಿ...." ಎಂದು ಹರಿಹಾಯ್ದಿದ್ದಾ ಆನಂದ್ ಮನವಿ ಕೊಡಲು ಬಂದಾ ಆತನಿಗೂ "ನೀವ್ಯಾಕೆ ಇಲ್ಲಸಲ್ಲ ಆರೋಪ-ಟೀಕೆ ನನ್ನ ಬಗ ಮಾಡ್ತೀರಿ...." ಎಂದು ಕೇಳಿದ್ದಾ ಅದಕ್ಕೆ ಪುಕ್ಕು ಮಂತ್ರಿ ಆನಂದ ಏನೆಂದು ಹೇಳಿದ್ದಾನೆ ಗೊತ್ತೇ? "ಇ ಸಾರ್... ಇಲ್ಲ... ನಿಮ್ಮ ಬಗ್ಗೆ ನಾನೇನು ಹೇಳಿಲ್ಲ...." ಎಂದು ನುಣುಚಿಕೊಂಡ ಬಂದಿದ್ದಾನೆ.

ತಮಾಷೆಯೆಂದರೆ, ನ್ಯಾ. ನಾಯಕ ಕೈಯಿಂದ ಹೀಗೆ ತಪ್ಪಿಸಿಕೊಂಡು ಬಂದವನೇ ಮಾಧ್ಯಮದವರೆದುರು ಮ ಟೀಕೆ-ಮೂದಲಿಕೆ ಮಾಡಿದ್ದಾನೆ! "ಎಸ್ಸಾರ್ ನಾಯಕ ಪಾರ್ಶ್ಯಾಲಿಟಿ ಮಾಡ್ತಾರೆ.... ನಾಟಕ, ಮಾಡಲು ಬೇಲೇಕೇರಿ ಬರ್ತಾರೆ... ಆತನಿಗೆ ಪ್ರಚಾರದ ಹುಚ್ಚು... ಧೈರ್ಯವಿದ್ದ ಬೇಲೇಕೇರಿ ಬಂದರಿನಲ್ಲಾದ ಅತಿಕ್ರಮಣ ತನಿಖೆ ನಡೆ ತಪ್ಪಿತಸ್ಥ ಕಂಪನಿಗಳ ಮೇಲೆ ಕ್ರಮ ಕೈಗೊಳ್ಳಲಿ... ಇದನ್ನ

ಯುಕರಿಗೆ ನೇರಾನೇರ ಹೇಳಿದ್ದೇನೆ...." ಎಂದೆಲ್ಲ ವೀರಾವೇಶ ದರ್ಶಿಸಿದ್ದಾನೆ.

ಆಕಾಶಕ್ಕೆ ಉಗುಳಿದ ಧೀರ

ಮಂತ್ರಿ ಆನಂದ್ ಅಸ್ನೋಟಿಕರ್ ಎಸ್‌ಎಚ್‌ಆರ್‌ಸಿ ಕ್ಷ ನ್ಯಾಯಾಯಕರ ಮೇಲಿನ ಸಿಟ್ಟು ತೀರಿಸಿಕೊಳ್ಳುವ ದಲ್ಲಿ ತನ್ನ ಮತ್ತು ತನ್ನ ಬಿಜೆಪಿ ಸರ್ಕಾರದ ಅಸಾಮರ್ಥ್ಯ, ರಾಡಳಿತ, ಅದಿರು ಮಾಫಿಯಾದೊಂದಿಗೆ ಮೀಲಾಗಿರುವುದೆಲ್ಲ ಸ್ವಯಂ ಸಾಬೀತುಪಡಿಸಿಕೊಂಡು ಟ್ಟಿದ್ದಾನೆ. ಮಾನವ ಹಕ್ಕು ಆಯೋಗ ನಾಲಾಯಕ್ ಧು ಈತ ಅಪಹಾಸ್ಯ ಮಾಡಲು ಹೇಳಿದ ಕತೆಯೇನು ತ್ತೇ? ಅನಧಿಕೃತ ಅದಿರು ಲಾರಿ ಓಡಾಟಕ್ಕೆ ಆತನ ತ್ರದ ಬರೋಬ್ಬರಿ 79 ಮಂದಿ ಬಲಿಯಾಗಿದ್ದಾರಂತೆ. ದರೂ ಮಾನವ ಹಕ್ಕು ಆಯೋಗ ಏನೂ ಡಲಾಗಿಲ್ಲವಂತೆ! ಇದನ್ನಾತ ಮನವಿಯಲ್ಲೂ ಬರೆದಿದ್ದಾನೆ.

ಆದರೆ ಆಕಾಶಕ್ಕೆ ಉಗುಳಲು ಹೋಗಿ ತನ್ನ ಮುಖದ ಲೆ ಎಂಜಲು ಹಾಕಿಕೊಂಡಿದ್ದಾನೆ ಪೆದ್ದು ಮಂತ್ರಿ ಆನಂದ್ ನೋಟಿಕರ್. ಎಸ್‌ಎಚ್‌ಆರ್‌ಸಿ ಈಗಾಗಲೇ ಅನಧಿಕೃತ ರು ಲಾರಿ ಓಡಾಟ ನಿಷೇಧಿಸುವಂತೆ ಹಲವು ಬಾರಿ ರ್ಕಾರಕ್ಕೆ ಶಿಫಾರಸ್ಸು ಮಾಡಿದೆ. ಆದರೆ ಆನಂದ್‌ನ ಸಿಎಂ ಡ್ಡಿ ಸರ್ಕಾರ ಇದನ್ನು ಕೇರ್ ಮಾಡದೇ ಅನಧಿಕೃತ ದಿರು ಲಾರಿ ಓಡಾಟ, ಮೈನಿಂಗ್‌ಗೆ ಅವಕಾಶ ಕಲ್ಪಿಸಿ ದಾಯಿ ಮಾಡುತ್ತಿದೆ. ಇದರಲ್ಲಿ ಆನಂದ್‌ಗೂ ಪಾಲಿದೆ. ಕಾಸಿನ ಹಪಾಹಪಿ, ಹೊಣೆಗೇಡಿತನದಿಂದ ಯಡ್ಡಿ ರ್ಕಾರ 79 ಜನರ ಪ್ರಾಣಹಾನಿಗೆ ಕಾರಣವಾಗಿದೆಯೇ ಹೊರತು ಎಸ್‌ಎಚ್‌ಆರ್‌ಸಿ ನಿಷ್ಕ್ರಿಯತೆಯಿಂದಲ್ಲ ಎಂಬ ಈ ಸತ್ಯ ಆನಂದ್‌ನ ಖಾಲಿ ಬುರುಡೆಗೆ ಹೊಳೆದಿಲ್ಲ.

ಅಷ್ಟೇ ಅಲ್ಲ ಈ 79 ಜನರ ಪ್ರಾಣಹಾನಿಯ ಪಾಪ ಎಚ್‌ಆರ್‌ಸಿಗಿಂತ ಸರ್ಕಾರದ ಅವಿಭಾಜ್ಯ ಅಂಗವಾದ ಂತ್ರಿ ಆನಂದ್‌ಗೆ ತಟ್ಟುತ್ತದೆ. ಸರ್ಕಾರ ಎಸ್‌ಎಚ್‌ಆರ್‌ಸಿ ಫಾರಸ್ಸು ಪರಿಗಣಿಸಿ ಅನಧಿಕೃತ ಅದಿರು ಲಾರಿ ಓಡಾಟ ರ್ಬಂಧಿಸಿದ್ದರೆ ಈ ಸಾವು-ನೋವು ಸಂಭವಿಸುತ್ತಿತ್ತೆ ಮಿನಿಸ್ಟರ್ ನಂದ್ ಅಸ್ನೋಟಿಕರ್!

ನಾಲಾಯಕ್ ಮಂತ್ರಿ

ಕಾರವಾರದಲ್ಲಿ ತಮಗೆ ಮನವಿ ಕೊಡುವಾಗ ಸು-ವಿನಯದಲ್ಲಿ ಮಾತಾಡಿದ ಆನಂದ್ ಅಸ್ನೋಟಿಕರ್ ಮ್ಮ ಬಗ್ಗೆ ಟೀಕೆ ಮಾಡಿಲ್ಲವೆಂಬ ತೀರ್ಮಾನಕ್ಕೆ ನ್ಯಾಯಕರು ಬಂದಿದ್ದರು. ಹೈಕೋರ್ಟ್‌ನಂಥ ಉನ್ನತ ನ್ಯಾಯದಾನ ಸಂಸ್ಥೆಯ ಚೀಫ್ ಜಸ್ಟೀಸ್ ಆಗಿದ್ದ ನ್ಯಾಯಾಯಕ ಷ ನಾಯಕರನ್ನೇ ಕಿಲಾಡಿ ಅಸ್ನೋಟಿಕರ್ ಯಾಮಾರಿಸಿ ಟ್ಟಿದ್ದ. ಹೀಗಾಗಿ ಪತ್ರಕರ್ತರೇ ಬದ್ಧತೆಯಿಲ್ಲದವರೆಂದೂ, ರೇ ಆನಂದ್ ತನ್ನ ಬಗ್ಗೆ ಟೀಕೆ ಮಾಡಿದ್ದಾನೆಂದು ಪ್ಪು ಬರೆದಿದ್ದಾರೆಂಬ ಭಾವನೆ ನ್ಯಾಯಾಯಕರದ್ದಾಗಿತ್ತು.

ನ್ಯಾಯಾಯಕರು ಕಾರವಾರದಿಂದ 70 ಕಿ.ಮೀ. ದೂರದ ಮಟಾ ತಲುಪುವುದರಲ್ಲಿ ಅವರಿಗೆ ಆನಂದ್ ಸ್ನೋಟಿಕರನ ಅಸಲಿ ಭಂಡತನ ಅರ್ಥವಾಗಿದೆ. ಧ್ಯಮದೆದುರು, ಟಿವಿಯೆದುರು ಆನಂದ್ ನ್ಯಾ ನಾಯಕ್ ತ್ತಿರುವ ಮಾನವ ಹಕ್ಕು ಆಯೋಗವನ್ನು ಬಾಯಿಗೆಬಂದಂತೆ ಬೂದಲಿಸಿ ತೆವಲು ತೀರಿಸಿಕೊಂಡಿದ್ದು ಅವರಿಗೆ ಚ್ಚರಿಯಾಗಿತ್ತು, ಇದರಿಂದ ಕೋಪಗೊಂಡ ನ್ಯಾಯಾಯಕರು ಾವೇ ಪತ್ರಿಕಾಗೋಷ್ಠಿ ಕರೆದ ಆನಂದನನ್ನು ಚಚ್ಚಿ ಚಿಬಿಟ್ಟರು! "ಅವನೊಬ್ಬ ನಾಲಾಯಕ್ ಮಂತ್ರಿ, ಳುಬುರುಕ... ಮಾನವಹಕ್ಕು ಆಯೋಗದ ರ್ಯವ್ಯಾಪ್ತಿಯ ಅರಿವಿಲ್ಲದ ಪೆದ್ದಣ್ಣ... ಸಂಸ್ಕಾರವಿಲ್ಲದ ನಾಗರಿಕ...." ಎಂದೆಲ್ಲ ಮಂತ್ರಿ ಆನಂದನನ್ನು ಜಾಡಿಬಿಟ್ಟರು ನ್ಯಾಯಾಯಕರು.

ಅದಿರು ರಫ್ತು ಕಂಪನಿಗಳು ಬೇಲೇಕೇರಿಯಲ್ಲಿ ಬಂದರು ಅತಿಕ್ರಮಣ ಮಾಡಿರುವುದರಿಂದ ಆಗಿರುವ ಮಾನವಹಕ್ಕು ಉಲ್ಲಂಘನೆ ಬಗ್ಗೆ ಮತ್ತು ಪ್ರಾಣಹಾನಿ ಮಾಡುತ್ತಿರುವ ಪರವಾನಗಿ ಇಲ್ಲದ ಅದಿರು ಲಾರಿ ಓಡಾಟದ ಬಗ್ಗೆ ಮಾನವ ಹಕ್ಕು ಆಯೋಗ ಹಲವು ಸಲ ಸರ್ಕಾರಕ್ಕೆ ವರದಿ ಸಲ್ಲಿಸಿ ಕಟ್ಟುನಿಟ್ಟಿನ ಕ್ರಮಕ್ಕೆ ಶಿಫಾರಸ್ಸು ಮಾಡಿತ್ತು. ಆದರೆ ಅದಿರು ಲಾಬಿಗೆ ಶರಣಾಗಿರುವ ಯಡ್ಡಿ-ಅಸ್ನೋಟಿಕರ್ ಸರ್ಕಾರ ಎಸ್‌ಎಚ್‌ಆರ್‌ಸಿ ಶಿಫಾರಸ್ಸನ್ನು ಬುದ್ಧಿಪೂರ್ವಕ ವಾಗೇ ಧಿಕ್ಕರಿಸಿ ಪಾತಕದಲ್ಲಿ ಮುಳುಗಿತ್ತು.

ಹೀಗಿರುವಾಗ ಅದಿರು ಲಾರಿಗಳಿಂದಾಗಿರುವ ಪ್ರಾಣಹಾನಿಗೆ ಹೊಣೆ ಸರ್ಕಾರವೋ? ಎಸ್‌ಎಚ್ ಆರ್‌ಸಿಯೋ? ಸರ್ಕಾರದ ತಪ್ಪನ್ನು ಮಾನವ ಹಕ್ಕು ಆಯೋಗದ ಮೇಲೆ ಹೊರಿಸುವ ಬದಲು ತಾನು ನಾಲಾಯಕ್ ಮಂತ್ರಿಯೆಂದು ಒಪ್ಪಿಕೊಂಡು ಜನರೆದುರು ಕ್ಷಮೆ ಕೇಳಲಿ. ಆನಂದ್ ಸಿಲ್ಲಿ ಎಂದ ನ್ಯಾಯಾಯಕರು ಆನಂದ್ ಸ್ನೋಟಿಕ ಸರ್ಕಾರದ ಮಾನ ಹರಾಜಾಕಿಬಿಟ್ಟರು.

ಇದು ಆನಂದ್ ಅಸ್ನೋಟಿಕರ್‌ಗೆ ಬೇಕಿತ್ತೇ?

● ನಹುಷ

ಚಿತ್ರದುರ್ಗ ಮಧು ಕೊಲೆ ಪ್ರಕರಣ

ಮಗ ಅರೆಸ್ಟ್ ಅಪ್ಪ ಎಸ್ಕೇಪ್



ಪಾತಕಿ ಭಾಸ್ಕರ್ ಅರೆಸ್ಟಾದ....

ಚಿತ್ರದುರ್ಗವನ್ನು ತಲ್ಲಣಿಸಿ ಹಾಕಿದ್ದ ಹುಂಬ ರೌಡಿ ಮಧುವಿನ ಕೊಲೆ ಪ್ರಕರಣ ಮತ್ತೊಂದು ತಿರುವು ಪಡೆದುಕೊಂಡಿದೆ. ಈ ಕೊಲೆಯ ಆರೋಪಿ, ನಗರಸಭೆ ಸದಸ್ಯ ಭಾಸ್ಕರ್ ದಂಡಿನ ಸಮೇತ ಪೊಲೀಸರಿಗೆ ತಗುಲಿಕೊಳ್ಳುತ್ತಲೇ ಮುಗಿಯಿತೆಂದುಕೊಂಡಿದ್ದ ಪ್ರಕರಣ ಮತ್ತೆ ಮೈಕೊಡವಿಕೊಂಡಿದೆ. ಇದಕ್ಕೆ ಕಾರಣ ಭಾಸ್ಕರನ ತಂದೆ ಸೋಮಶೇಖರ್ ಅಲಿಯಾಸ್ ಹಂದಿ ಸೋಮಣ್ಣ ಕೇರಳ ರಾಜ್ಯಕ್ಕೋಡಿ ತಲೆ ತಪ್ಪಿಸಿಕೊಂಡಿದ್ದಾನೆ. ಇದರಿಂದಾಗಿ ಪ್ರಕರಣಕ್ಕೆ ಮತ್ತೊಂದು ಆಯಾಮ ಸೃಷ್ಟಿಯಾಗಿ ಹಂದಿ ಸೋಮನ ಚಟ, ದಂಧೆಗಳ ಸುತ್ತ ಗಿರಕಿ ಹೊಡೆಯಲಾರಂಭಿಸಿದೆ.




ಎಸ್ಪಿ ಲಂಬೂರಾಮ್

ಪ್ರಸ್ತುತ ಮಧು ಕೊಲೆ ಪ್ರಕರಣದ ಆರೋಪಿ ಭಾಸ್ಕರ ಈ ಹಂತ ತಲುಪಲು ತಂದೆ ಸೋಮನ ಕೊಡುಗೆ ವಿಪರೀತವಿರುವುದರಿಂದ ಆತನ ಚರಿತ್ರೆಯೆ ಮುಖ್ಯ ಎನಿಸುತ್ತದೆ.

ಮೊದಲಿಗೆ ಚಳ್ಳಕೆರೆಯ ಸರ್ಕಾರಿ ಅಧಿಕಾರಿಯಾಗಿದ್ದ ಸೋಮಣ್ಣ VRS ಪಡೆದು ಚುನಾವಣಾ ರಾಜಕೀಯಕ್ಕಿಳಿದ. ದಗಲ್ಬಾಜಿತನ ಹಾಗೂ ಹೆಣ್ಣುಬಾಕತನದ ಒಟ್ಟು ಮೊತ್ತದಂತಿದ್ದ ಈತನನ್ನು ಆಗ ಎಂಎಲ್‌ಎ ಆಗಿದ್ದ ಕಾಂಗ್ರೆಸ್‌ನ ತಿಪ್ಪಾರೆಡ್ಡಿ ಬೆಂಬಲಿಸಿ ಉತ್ತೇಜನ ನೀಡಿದರು. ಅಂತೂ 50 ಲಕ್ಷ ಚೆಲ್ಲಾಡಿ ಹರಸಾಹಸ ಪಟ್ಟು ಜಿಲ್ಲಾ ಮಟ್ಟದ ರಾಜಕೀಯ ನಡೆಸುವಷ್ಟರ ಮಟ್ಟಿಗೆ ಬೆಳೆದ. ಜೊತೆಗೆ ಹೆಣ್ಣುಬಾಕತನವೂ ಬೆಳೆಯಲಾರಂಭಿಸಿತು.

ತದನಂತರ ಹೆಣ್ಣಿನ ಚಪಲ ತೀರಿಸಿಕೊಳ್ಳಲೋಸ್ಕರವೇ ಶಿಕ್ಷಣದ ಪ್ರವರ್ತಕನಂತೆ ಪೋಸು ಕೊಡಹತ್ತಿದ ಈತ ಕೋಟೆ ರಸ್ತೆಯಲ್ಲಿ 'ಅನುಪಮಾ' ಹೆಸರಲ್ಲೊಂದು ವಿದ್ಯಾ ಸಂಸ್ಥೆ ಆರಂಭಿಸಿದ. ನರ್ಸಿಂಗ್ ಅದೂ ಇದೂ ಅಂತ ಹೆಣ್ಣುಮಕ್ಕಳ ಆಸ್ಪತ್ರೆಯ ಕೋರ್ಸುಗಳನ್ನು ಆರಂಭಿಸಿ ತನ್ನ ನಿಜವಾದ 'ಆಸಕ್ತಿ'ಗಳನ್ನು ಪ್ರದರ್ಶಿಸಹತ್ತಿದ. ಇದು ಎಷ್ಟು ವಿಕೋಪಕ್ಕೆ ಹೋಯಿತೆಂದರೆ ಹಾದಿ ಬೀದಿಗಳಲ್ಲಿ ಜನ ಮಾತನಾಡಲಾರಂಭಿಸಿದ್ದರು.



ಹಂದಿ ಸೋಮಣ್ಣ

ಇಂಥ ಹಲಾಲುಕೊರತೆಯಲ್ಲೆ ಬದುಕು ನಡೆಸುತ್ತಿದ್ದ ಹಂದಿ ಸೋಮಣ್ಣ ಮಗ ಭಾಸ್ಕರ ಎದೆಯೆತ್ತರ ಬೆಳೆದರೂ ಆತನ ಭವಿಷ್ಯ ರೂಪಿಸುವಷ್ಟು ಮನಸ್ಸು ಮಾಡಲಿಲ್ಲ, ಭಾಸ್ಕರನಾದರೂ ತಂದೆಯ ಅಸಹ್ಯ ಪರಿಸರದಲ್ಲೇ ಬೆಳೆಯುತ್ತಾ ಅದಕ್ಕೇ ಒಗ್ಗಿಕೊಳ್ಳಹತ್ತಿದ. ತಂದೆ ಸೋಮನ ಸದ್ಗುಣಗಳಲ್ಲೊಂದಾದ ಹೆಣ್ಣುಬಾಕತನವನ್ನು ರೂಢಿಸಿಕೊಂಡ. ತಂದೆ ಮಗನ ನಡುವೆ ಆದರ್ಶವೆನ್ನಬಹುದಾದ ಯಾವುದೇ ಸಂಬಂಧಗಳಿರಲಿಲ್ಲ. ಇದೇ ಭಾಸ್ಕರ ದಾರ ಕಡಿದ ಹೋರಿಯಂತಾಗಲು ಪ್ರಮುಖ ಕಾರಣ.

ಹೀಗೆ ಯಡಸಾಬಡಸಾ ಬೆಳೆದ ಭಾಸ್ಕರ ಪಾತಕಿಯಾಗಿ ಬದಲಾದ ಬಗ್ಗೆ ದುರ್ಗದ ಜನರಲ್ಲಿ ಯಾವ ಅಚ್ಚರಿಯೂ ಇಲ್ಲ, ಬದಲಾಗಿ ಅಪ್ಪ ಸೋಮನ ಬಗ್ಗೆ ಅಸಹ್ಯವಿದೆ.

ಪ್ರಸ್ತುತ ಮಧುವಿನ ಕೊಲೆಗೆ ಭಾಸ್ಕರನಿಗೆ ಪ್ರೇರೇಪಣೆ ನೀಡಿದ್ದೂ ಸಹ ಅಪ್ಪನಿಂದ ಬಳುವಳಿಯಾಗಿ ಬಂದ ಹೆಣ್ಣುಬಾಕತನವೆ. ಅದಾಗಲೇ ಸ್ವರೂಪಾ ಎಂಬಾಕೆಯನ್ನು ಪ್ರೀತಿಸಿ ಮದುವೆಯಾಗಿದ್ದ ರೌಡಿ ಮಧು ತನ್ನ ಪ್ರೀತಿಗೆ ಸಹಾಯ ಮಾಡಿದ್ದ ರವಿ ಎಂಬಾತನ ಪ್ರಿಯತಮೆಗೆ ಭಾಸ್ಕರ ಅಡಕಾಯಿಸಿಕೊಂಡಿದ್ದರಿಂದಲೇ ಕೆಂಡಮಂಡಲ ನಾಗಿದ್ದ. ಇದೇ ವಿಚಾರ ಇಬ್ಬರ ನಡುವೆ ಹಗೆ ಹೊಗೆಯಾಡಲು ಕಾರಣವಾಗಿ ಅದು ಮಧುವಿನ ಕೊಲೆಯಲ್ಲಿ ಪರ್ಯಾವಸಾನ ವಾಗಿದ್ದು ಬಹಿರಂಗ ಸತ್ಯ.

ಭಾಸ್ಕರ ಮಧುವಿನ ಮೃತದೇಹ ಸಾಗಿಸಲು ತನ್ನಪ್ಪ ಸೋಮನ ಕಾರು ಬಳಸಿದ್ದನಲ್ಲಾ? ಅದೇ ಈಗ ಸೋಮು ತಲೆ ತಪ್ಪಿಸಿಕೊಳ್ಳಲು ಕಾರಣವಾಗಿದೆ. ಮಧುವಿನ ಕೊಲೆ ಪ್ರಕರಣವನ್ನು ಲೀಲಾಜಾಲವಾಗಿ ನಿರ್ವಹಿಸಿ ಬೇಧಿಸಿದ ಪೊಲೀಸರೀಗ ಹಂದಿ ಸೋಮನಿಗೆ ಬಲೆ ಬೀಸಿದ್ದಾರೆ. ಸದ್ಯ ಆತ ಕೇರಳದಲ್ಲಿ ದ್ದಾನೆಂಬ ವಿಚಾರವೂ ಪೊಲೀಸರಿಗೆ ತಲುಪಿದೆ. ಅಂತೂ ಹಂದಿ ಸೋಮ ಇಷ್ಟರಲ್ಲೇ ತಗುಲಿ ಕೊಳ್ಳುವುದು ಖಚಿತ.

ಒಟ್ಟಾರೆಯಾಗಿ ಈ ಪಾತಕಿ ಅಪ್ಪ ಮಕ್ಕಳ ವಿಚಾರವೀಗ ದುರ್ಗದ ಜನರ ಕುತೂಹಲಕ್ಕೆ, ಚರ್ಚೆಗೆ ಕಾರಣವಾಗಿರುವುದಂತೂ ಸತ್ಯ. ●

ಧಾರ್ಮಿಕ ನಂಬಿಕೆಗಳಿಗೂ ತರ್ಕಕ್ಕೂ ಬದ್ಧ ವೈರವೇಕೆ?

ಒಂದು ಪತ್ರ

ದುಬೈನಲ್ಲಿದ್ದ ಒಂದು ಕುಟುಂಬ ಮೇ 15ಕ್ಕೆ ಮಂಗಳೂರಿಗೆ ಬರಲು ವಿಮಾನದ ಟಿಕೆಟ್ ಬುಕ್ ಮಾಡಿದ್ದರಂತೆ. ಆದರೆ ಭಾರತೀಯ ಟಿವಿ ಮತ್ತು ಪತ್ರಿಕೆಗಳಲ್ಲಿಯ ಜ್ಯುವೆಲ್ಲರಿ ಅಂಗಡಿಗಳ ಅಕ್ಷಯ ತೃತೀಯದ ಜಾಹೀರಾತುಗಳಿಗೆ ಮರುಳಾದ ಆ ಕುಟುಂಬದ ಮಹಿಳೆಯರ ಒತ್ತಡಕ್ಕೆ ಮಣಿದು ಮೇ 16ರಂದು ಅಕ್ಷಯ ತೃತೀಯದಂದು ಚಿನ್ನ ಕೊಳ್ಳಲು ತಮ್ಮ ಭಾರತದ ಪ್ರಯಾಣ ಒಂದು ವಾರ ಮುಂದೂಡಿದರು. ಕಾರಣ ದುಬೈನಲ್ಲಿ ಭಾರತಕ್ಕಿಂತ ಚಿನ್ನ ತುಂಬಾ ಅಗ್ಗವಂತೆ. ಒಂದು ವಾರದ ನಂತರ ಅಕ್ಷಯ ತೃತೀಯದ ಚಿನ್ನದೊಂದಿಗೆ ಭಾರತಕ್ಕೆ ಬಂದವರು ಬಜ್ಪೆ ವಿಮಾನ ದುರಂತದಲ್ಲಿ ಸುಟ್ಟು ಕರಕಲಾದರು. ಆ ಕುಟುಂಬ ಮೂಢನಂಬಿಕೆಗೆ ತೆತ್ತ ಬೆಲೆಯಿದು.

ಭಾರತದಲ್ಲಿ ಸಂಪತ್ತು ಸಂಪಾದನೆ ವಿಷಯದಲ್ಲಿ ಮೂಢನಂಬಿಕೆಗಳನ್ನು ಹುಟ್ಟು ಹಾಕುವುದು ಅತಿ ಸುಲಭ. ಆದುದರಿಂದ 7-8 ವರ್ಷ ಹಿಂದಿನವರೆಗೂ ಕೇವಲ ಉತ್ತರ ಭಾರತದ ಬನಿಯಾ-ವ್ಯಾಪಾರಿ ಜಾತಿಗಳವರಿಗೆ ಮಾತ್ರ ಸೀಮಿತವಾಗಿದ್ದ ಈ ಅಕ್ಷಯ ತೃತೀಯಾ ಈಗ ಜ್ಯುವೆಲ್ಲರಿ ಅಂಗಡಿಗಳವರ ವಾಣಿಜ್ಯ ತಂತ್ರದಿಂದಾಗಿ ಭಾರತದಾದ್ಯಂತ ಹರಡಿದೆ. ಸಂಪತ್ತಿಗೆ ಸಂಬಂಧಿಸಿದ ಮೂಢನಂಬಿಕೆಗಳಿಗೆ ಹೆಂಗಸರೇ ಹೆಚ್ಚಾಗಿ ಮರುಳಾಗುವುದು ಎಂದು ಹೇಳಲಾಗುತ್ತಿದೆ. ಅಕ್ಷಯ ತೃತೀಯದಂದು ಕೇವಲ ಚಿನ್ನ ಖರೀದಿಸುವುದಲ್ಲ, ಖರೀದಿಸಿದ ಆ ಚಿನ್ನವನ್ನೆಲ್ಲಾ ಅಂದೇ ದಾನ ಮಾಡಿದರೇನೆ ಫಲ ಸಿಗುವುದು ಎಂಬುದು 'ಮೂಲನಂಬಿಕೆ'. ಆದರೆ ಜ್ಯುವೆಲ್ಲರಿ ಅಂಗಡಿಗಳವರು ಹಾಗೂ ಅವರ ಚೇಲಾಗಳಾದ ಪುರೋಹಿತರು, ಜ್ಯೋತಿಷಿಗಳು ಎಷ್ಟು ಚಾಣಾಕ್ಷ ವ್ಯಾಪಾರಿ ತಂತ್ರದವರೆಂದರೆ ಈ ನಂಬಿಕೆಯ ಮೊದಲರ್ಧ ಭಾಗ ಮಾತ್ರ ಪ್ರಚುರಪಡಿಸಿ, 'ದಾನದ' ಎರಡನೇ ಅರ್ಧವನ್ನು ಬೇಕೆಂದೇ ಮರೆಮಾಚಿದ್ದಾರೆ. ಹಾಗಾಗಿ ಹೆಂಗಸರು ಸುಲಭವಾಗಿ ಈ ಗಾಳಕ್ಕೆ ಸಿಲುಕಿಬಿಟ್ಟಿದ್ದಾರೆ.

ಇನ್ನು ಈ ನಂಬಿಕೆಯನ್ನು ಸರಿಯಾಗಿ ಪರಾಮರ್ಶಿಸಿದರೆ ಕಾಣುವುದು ತರ್ಕಹೀನತೆ. ಶ್ರೀಮಂತರು ಮಾತ್ರ ಚಿನ್ನ-ಬೆಳ್ಳಿ ಆಗಾಗ ಖರೀದಿಸಲು ಸಾಧ್ಯ, ಇದರ ಅರ್ಥ ಶುಭದಿನಗಳು ಕೇವಲ ಹಣವಂತರಿಗೆ ಮಾತ್ರ ಶುಭ ತರುವುದು ಹಾಗೂ ಬಡವರನ್ನು ಕಂಡರೆ ಈ ಶುಭದಿನಗಳಲ್ಲೂ 'ಅದೃಷ್ಟ ದೇವತೆಗೆ' ಅಲರ್ಜಿ ಎಂದಾಯಿತು. ಮೂಲ ವಿಷಯವೇನೆಂದರೆ, ಒಂದೆಡೆ ನಾವು ಈ ಬ್ರಹ್ಮಾಂಡದ ಅಣು-ಅಣು, ಕ್ಷಣ-ಕ್ಷಣ, ಸೂರ್ಯ-ಚಂದ್ರ-ಗ್ರಹಗಳಾದಿ ಎಲ್ಲವನ್ನೂ ದೇವರೇ ಸೃಷ್ಟಿಸಿದ್ದು ಎಂದು ವಾದಿಸುತ್ತೇವೆ. ಇನ್ನೊಂದೆಡೆ ಈ ಸಮಯ ಚೆನ್ನಾಗಿಲ್ಲ, ಈ ಗಳಿಗೆ ಅಶುಭ, ಆ ವಸ್ತು ಅನಿಷ್ಟ, ಈ ದಿಕ್ಕು ಅಶುಭ, ಆ ಗ್ರಹ ಅಶುಭ... ಎಂದೆಲ್ಲಾ ವರ್ಗೀಕರಿಸುತ್ತೇವೆ. ಇದು ಶುದ್ಧ ವೈರುಧ್ಯಮಯ ತಾನೆ?

ಕಾರಣ ಒಂದೆಡೆ ನಾವೇ ಹೇಳುತ್ತೇವೆ: ದೇವರಲ್ಲಿ ದೋಷವೇ ಇಲ್ಲ, ಹಾಗಾಗಿ ದೇವರು ಸೃಷ್ಟಿಸಿದ್ದೆಲ್ಲಾ ಪರಿಪೂರ್ಣ, ದೋಷರಹಿತ. ಇನ್ನೊಂದೆಡೆ ದೇವರೇ ಸೃಷ್ಟಿಸಿದ ಸಮಯ, ವಸ್ತು, ದಿಕ್ಕು, ಗಳಿಗೆ, ಗ್ರಹಗಳಲ್ಲಿ ದೋಷ ಹುಡುಕುತ್ತೇವೆ. ದೇವರ ಸೃಷ್ಟಿ ಕಾರ್ಯದಲ್ಲಿ ತಪ್ಪು ಹುಡುಕುವುದು ದೇವರಲ್ಲೇ ತಪ್ಪು ಹುಡುಕಿದಂತೆ ಅಲ್ಲವೇ? ದೇವರೇ ಸೃಷ್ಟಿಸಿದ ಸಮಯ, ವಸ್ತುಗಳನ್ನು ಅಶುಭ-ಅನಿಷ್ಟ ಎಂದು ವರ್ಗೀಕರಿಸುವುದು, ದೇವರ ಕಾರ್ಯಗಳೂ ಅನಿಷ್ಟತೆಗಳಿಂದ ಕೂಡಿದೆ ಹಾಗಾಗಿ ದೇವರೂ ದೋಷಪೂರಿತನೂ, ಪರಿಪೂರ್ಣನಲ್ಲ ಎಂದು ನೇರವಾಗಿ ಆಪಾದಿಸಿದಂತೆ ಅಲ್ಲವೇ?

ಒಂದೆಡೆ ಹೇಳುತ್ತೇವೆ: ಎಲ್ಲವೂ ದೇವರ ಅಧೀನ. ಅವನ ಅಣತಿಯಿಲ್ಲದೇ ಒಂದು ಹುಲ್ಲುಕಡ್ಡಿಯೂ ಅಲ್ಲಾಡುವುದಿಲ್ಲವೆಂದು. ಇನ್ನೊಂದೆಡೆ ಅವನೇ ಸೃಷ್ಟಿಸಿದ ಗ್ರಹ, ಸಮಯ, ಗಳಿಗೆ, ವಸ್ತು, ದಿಕ್ಕುಗಳು ತಮ್ಮ ಸೃಷ್ಟಿಕರ್ತನನ್ನೇ ಧಿಕ್ಕರಿಸಿ ಅವನೇ ಸೃಷ್ಟಿಸಿದ ಮನುಜರಿಗೆ ಕೆಡುಕನ್ನುಂಟುಮಾಡುತ್ತವೆ. ಇದರ ಅರ್ಥ ದೇವರು ಸರ್ವಶಕ್ತನಲ್ಲ ಎಂದು ನಾವು ಒಪ್ಪಿಕೊಂಡಂತಾಯಿತಲ್ಲವೇ?

ಆದುದರಿಂದ ದೇವರೇ ಸೃಷ್ಟಿಸಿದ 365 ದಿನಗಳಲ್ಲಿ ಕೇವಲ ಅಕ್ಷಯ ತೃತೀಯ ಮಾತ್ರ ಚಿನ್ನ ಖರೀದಿಸಲು ಶುಭದಿನ, ಉಳಿದ 364 ದಿನಗಳು ಚಿನ್ನ ಕೊಳ್ಳಲು ಶುಭವಲ್ಲ ಎಂದು ಹೇಳುವುದು ದೇವರ ಸೃಷ್ಟಿ ಕಾರ್ಯದಲ್ಲಿ ಕೇವಲ 0.30% ಮಾತ್ರ ಶುಭ ಹಾಗೂ 99.70% ಕಾರ್ಯ ಅಶುಭ, ಹಾಗಾಗಿ ಒಟ್ಟಾರೆ ದೇವರ ಸೃಷ್ಟಿ ಕಾರ್ಯವೇ ಅಶುಭ ಎಂದು ಪರೋಕ್ಷವಾಗಿ ಆಪಾದಿಸಿದಂತೆ ಆಗಲಿಲ್ಲವೇ?

ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಯಾವನಾದರೂ ಅಕ್ಕಸಾಲಿಗ, ಬಡಿಗ, ಕಮ್ಮಾರ, ಗುತ್ತಿಗೆದಾರ ಕಳಪೆ ಕೆಲಸ ಮಾಡಿದರೆ ಅವನನ್ನು ತಕ್ಷಣ ಬ್ಲಾಕ್‌ಲಿಸ್ಟ್ ಮಾಡಿ ನಾವು ದೂರವಿಡುತ್ತೇವೆ. ಇಷ್ಟೊಂದು ಕಳಪೆ ಕೆಲಸ ಮಾಡುವ ದೇವರಿಗೂ ಈ ನಿಯಮ ಅನ್ವಯಿಸಬೇಕಲ್ಲವೇ?

"ಪ್ರತಿದಿನವೂ ಶುಭ ಆದರೆ ಒಂದು ದಿನ ಹೆಚ್ಚು ಶುಭ" ಎನ್ನುವ ವಿತಂಡವಾದವೂ ತರ್ಕಹೀನ. ಒಳ್ಳೆಯ ಕೆಲಸಕ್ಕೆ ಎಲ್ಲಾ ಸಮಯ, ಎಲ್ಲಾ ದಿಕ್ಕು, ಎಲ್ಲಾ ವಸ್ತುಗಳೂ ಶುಭ. ಆದರೆ ಕೆಟ್ಟ ಕೆಲಸಕ್ಕೆ ಎಲ್ಲಾ ಸಮಯ, ಗಳಿಗೆ, ದಿಕ್ಕು, ಗ್ರಹ... ಎಲ್ಲವೂ ಅನಿಷ್ಟ-ಅಶುಭ ಎಂದು ಜಗಜ್ಯೋತಿ ಬಸವೇಶ್ವರರು ಹೇಳಿದ್ದು ಅತಿ ತರ್ಕಪೂರ್ಣ.

ಧಾರ್ಮಿಕ ನಂಬಿಕೆಗಳಿಗೂ ತರ್ಕಶಾಸ್ತ್ರಕ್ಕೂ ಬದ್ಧ ವೈರ. ಆದರೂ ಮೇಲೆ ಹೇಳಿದ ವಿಷಯಗಳ ಬಗ್ಗೆ ಸುಜ್ಞಾನಿಗಳು ತರ್ಕಪೂರ್ಣ ಚಿಂತನೆ ನಡೆಸಿದರೆ ಒಳಿತು.

ಪ್ರವೀಣ್ ಎಸ್ ಶೆಟ್ಟಿ, ಮಂಗಳೂರು



ಅಜ್ಜಂಪುರ ಜಿಪಂನಲ್ಲಿ ಮಂಜುಳಾ ಮಾಯೆ!

ಸರ್ಕಾರಿ ಕಾಮಗಾರಿಗಳಲ್ಲಿ ಲಫಡಾ ನಡೆಯುವುದು, ಕಳಪೆತನ ವಿಜೃಂಭಿಸಿ ಕಮಾಯಿ ಕೈಂಕರ್ಯ ನೆರವೇರುವುದು–ಇವೆಲ್ಲ ಪ್ರಸ್ತುತ ಸಂದರ್ಭದಲ್ಲಿ ಮಾಮೂಲಿ ವಿಚಾರಗಳಂತಾಗಿವೆ. ಕಾಮಗಾರಿ ಅನುಷ್ಠಾನಗೊಳಿಸದೆಯೇ ಬಿಲ್ ಪಾಸ್ ಮಾಡಿಕೊಳ್ಳಬಹುದೆಂಬ ಹೊಸ ವಿಚಾರವೊಂದು ಅಜ್ಜಂಪುರ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯಿಂದ ಹೊರಬಿದ್ದಿದೆ!

ಇಂತಹುದೊಂದು ಪವಾಡ ಸೃಷ್ಟಿಸಿದಾಕೆ ಅಜ್ಜಂಪುರ ಜಿಲ್ಲಾ ಪಂಚಾಯ್ತಿ ಸದಸ್ಯೆ ಮಂಜುಳಾ ರಘುಮೂರ್ತಿ. ಗ್ರಾಮೀಣ ಕುಡಿಯುವ ನೀರು ಪೂರೈಕೆ ಯೋಜನೆಯಡಿ ಯಾವುದೇ ಕಾಮಗಾರಿ ಅನುಷ್ಠಾನಕ್ಕೆ ತರದೆ 37 ಲಕ್ಷ ರೂಪಾಯಿಗಳನ್ನು ಮಂಜುಳಾ ರಘುಮೂರ್ತಿ ಅಕ್ರಮವಾಗಿ ಬಿಡುಗಡೆ ಮಾಡಿಸಿಕೊಂಡಿದ್ದಾರೆ.


ಇಂಥ ಕಾಮಗಾರಿಗಳಿಗೆ ಹಣ ಬಿಡುಗಡೆಯಾಗಬೇಕೆಂದರೆ, ಮೊದಲು ಕ್ರಿಯಾಯೋಜನೆ ತಯಾರು ಮಾಡಿ ಆಯಾ ಉಪ-ವಿಭಾಗದ ಸಾರ್ವಜನಿಕ ಇಂಜಿನಿಯರಿಂಗ್ ವಿಭಾಗದ ಮೂಲಕ ಅನುಷ್ಠಾನಗೊಳಿಸಬೇಕಾದದ್ದು ನಿಯಮ. ಆದರೆ ಮಂಜುಳಾ ರಘುಮೂರ್ತಿ ಈ ಎಲ್ಲಾ ನಿಯಮಗಳನ್ನು ಗಾಳಿಗೆ ತೂರಿ ರಾಜಕೀಯ ಪ್ರಭಾವದ ಮೂಲಕ ಈ ಅಕ್ರಮ ನಡೆಸಿದ್ದಾರೆ. ಸ್ಥಳೀಯ ಇಂಜಿನಿಯರಿಂಗ್ ಇಲಾಖೆಯ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಎಸ್.ಕೆ. ಪ್ರಕಾಶ್, ಜೂನಿಯರ್ ಇಂಜಿನಿಯರ್ ಚಂದ್ರಶೇಖರ್ ಮುಂತಾದವರ ಸಹಾಯದೊಂದಿಗೆ ಎರಡು ದಿನಗಳಲ್ಲಿ 37 ಲಕ್ಷ ಕಮಾಯಿಸಿಕೊಂಡಿದ್ದಾರೆ.

ಈ ಅವ್ಯವಹಾರ ಅಜ್ಜಂಪುರ ಗ್ರಾಮ ಪಂಚಾಯ್ತಿ ವ್ಯಾಪ್ತಿಯಲ್ಲಿ ನಡೆದಿದೆ. ಹೇಳಿಕೇಳಿ ಇದು ನಿಷ್ಠೆ, ಪ್ರಾಮಾಣಿಕತೆಗೆ ಜಿಲ್ಲೆಯಲ್ಲೇ ಮೆಚ್ಚುಗೆ ಪಡೆದಿರುವ ಪಂಚಾಯ್ತಿ, ಇಲ್ಲಿ ಅದು ಹೇಗೆ ಅಕ್ರಮ ನಡೆಯಿತೆಂದು ನೋಡ ಹೊರಟರೆ ಎಸ್. ರಘುಮೂರ್ತಿ ಎಂಬ ಉಪ ತಹಶೀಲ್ದಾರ್ ತಗುಲಿಕೊಳ್ಳುತ್ತಾರೆ. ಈತನ ಶಾಮೀಲಿನಲ್ಲೇ ಈ ಅವ್ಯವಹಾರ ನಡೆದಿರುವುದು ನಿಚ್ಚಳವಾಗಿದೆ.

ಮತ್ತೂ ಆಳಕ್ಕಿಳಿದರೆ ಜಿ.ಪಂ. ಸದಸ್ಯೆ ಮಂಜುಳಾರ ಪತಿ ರಘುಮೂರ್ತಿಯೂ ಈ ಪ್ರಕರಣದಲ್ಲಿ ನಿರ್ಣಾಯಕ ಪಾತ್ರ ವಹಿಸಿರುವುದು ಖಾತ್ರಿಯಾಗುತ್ತದೆ. ಅಜ್ಜಂಪುರದಲ್ಲಿ ಉಪ ತಹಶೀಲ್ದಾರ್ ಆಗಿ ಕಾರ್ಯ ನಿರ್ವಹಿಸುತ್ತಿರುವ ಈತ ಡೀಲಿಂಗ್ ವ್ಯವಹಾರದಲ್ಲಿ ಬಲು ನಿಪುಣ. ಹೆಸರಿಗೆ ಮಾತ್ರ ಕರ್ತವ್ಯಕ್ಕೆ ಹಾಜರಾಗುವ ಈತ ಗ್ರಾಮ ಪಂಚಾಯ್ತಿ ಕಾರ್ಯದರ್ಶಿಗಳು ಹಾಗೂ ಜಿಲ್ಲಾ ಪಂಚಾಯ್ತಿ ವ್ಯಾಪ್ತಿಯ ಇಲಾಖಾಧಿಕಾರಿಗಳ ಜೊತೆಗೆ ವಸೂಲಿ ವ್ಯವಹಾರಗಳಲ್ಲೇ ಬ್ಯೂಸಿಯಾಗಿರುತ್ತಾನೆ.

ಇದೆಲ್ಲದರ ಜೊತೆಗೆ ಸರ್ಕಾರಿ ಅಧಿಕಾರಿಗಳ ಮೇಲೆ ನಿರಂತರವಾಗಿ ಸವಾರಿ ನಡೆಸುತ್ತಿರುವ ರಘುಮೂರ್ತಿ ಬೆದರಿಕೆ ತಂತ್ರದಿಂದ ಬಿಲ್ ಬರೆಸುತ್ತಾನೆಂಬ ಆರೋಪವೂ ಇದೆ. ಇಂತಹ ಹಣಬಾಕತನವೇ ಜಿಪಂ ಸದಸ್ಯೆಯಾಗಿರುವ ತನ್ನ ಹೆಂಡತಿಯೊಂದಿಗೆ ಸೇರಿ ಅಖಂಡ 37 ಲಕ್ಷ ಕಮಾಯಿಗೆ ಪ್ರೇರೇಪಣೆ ನೀಡಿದೆ.

ಇದು ನಿಜಕ್ಕೂ ನಾಚಿಕೆಗೇಡಿನ ವಿಚಾರ. ಈ ರೀತಿ ಸಾರ್ವಜನಿಕ ಹಣ ಲಪಟಾಯಿಸಿರುವ ಮಂಜುಳಾ, ಆಕೆಯ ಪತಿ ರಘುಮೂರ್ತಿ ಹಾಗೂ ಇದಕ್ಕೆ ಸಹಾಯ ಮಾಡಿದ ಅಧಿಕಾರಿಗಳ ಮೇಲೆ ಸೂಕ್ತ ಕ್ರಮ ಕೈಗೊಳ್ಳಬೇಕಿದೆ. ಇಲ್ಲದಿದ್ದಲ್ಲಿ ಸಾರ್ವಜನಿಕರಿಂದ ಪ್ರತಿಭಟನೆ ಎದುರಿಸಬೇಕಾಗುವುದು ಖಚಿತ. ●



ಜಮಖಂಡಿ ಪಡಿತರ ಆಹಾರ ಕದ್ದ ಪಾಪಿ ಪಾಟೀಲ

ಜಮಖಂಡಿಯ ಜನರಿಗೆ ನ್ಯಾಯಯುತವಾಗಿ ದಕ್ಕಬೇಕಿರುವ ಪಡಿತರ ವಸ್ತುಗಳು ನೇರವಾಗಿ ಕಾಳಸಂತೆಯ ಪಾಲಾಗತೊಡಗಿವೆ. ಇಂತಹದೊಂದು ಮಹಾಮೋಸಕ್ಕೆ ನೇರ ಕಾರಣವಾಗಿರುವಾತ ಇಲ್ಲಿನ ಆಹಾರ ಸರಬರಾಜು ಇಲಾಖೆಯ ಡಿ.ಎನ್. ಪಾಟೀಲನೆಂಬ ಧನದಾಹಿ. ಅಡಿಗಡಿಗೆ ಬಡವರ ಹೊಟ್ಟೆಗೆ ಕಲ್ಲು ಹಾಕುತ್ತಿರುವ ಈತ ಎಗ್ಗಿಲ್ಲದೆ ದಂಧೆ ಮುಂದುವರೆಸಿದ್ದಾನೆ.

ತನ್ನ ಮೇಲಧಿಕಾರಿಗಳ ಮುಂದೆ ಬಾಲ ಮುದುರಿ ಓಡಾಡುವ ಪಾಟೀಲ ನಿಯತ್ತಿನಿಂದ ಸೇವೆ ಮಾಡುತ್ತಾನೆ. ತಾನು ತಿಂದ ಹಡಬೆ ಹಣದಲ್ಲಿ ಕಾಲಕಾಲಕ್ಕೆ ಕಪ್ಪವನ್ನು ಸಲ್ಲಿಸುತ್ತಾನೆ. ಆದುದರಿಂದಲೇ ಈತ ಜಮಖಂಡಿಯ ಪಡಿತರ ವಸ್ತುಗಳನ್ನು ನುಂಗಿಹಾಕಿದರೂ ಆರಾಮವಾಗಿ ಅಡ್ಡಾಡಿಕೊಂಡಿದ್ದಾನೆ. ಮೇಲಧಿಕಾರಿಗಳದ್ದು ಕಾಯಂ ಮೌನ!

ಪಾಟೀಲ ಆಹಾರ ಸರಬರಾಜು ಇಲಾಖೆಯನ್ನು ಯಾವ ಪರಿ ಎಕ್ಕುಟ್ಟಿಸುತ್ತಿದ್ದಾನೆಂದರೆ, ನ್ಯಾಯಬೆಲೆ ಅಂಗಡಿಯೊಂದರ ಮಂಜೂರು ಪ್ರಕ್ರಿಯೆಯಿಂದಲೇ ಈತನ ವಸೂಲಿ ದಂಧೆ ಆರಂಭವಾಗುತ್ತದೆ. ಒಂದು ಪ್ರದೇಶದಿಂದ ರೇಷನ್ ಅಂಗಡಿಗೆ ಅರ್ಜಿ ಬಂದಾಕ್ಷಣ ಅಲರ್ಟ್ ಆಗಿಬಿಡುವ ಪಾಟೀಲ, ದಾಖಲೆಗಳು ಸರಿಯಿಲ್ಲವೆಂಬ ನೆಪ ಮುಂದಿಟ್ಟುಕೊಂಡು ಕಾಡಲಾರಂಭಿಸುತ್ತಾನೆ. ಇಷ್ಟಕ್ಕೆ ಅರ್ಜಿದಾರರು ಅರ್ಥ ಮಾಡಿಕೊಂಡರೆ ಬಚಾವ್. ಇಲ್ಲದಿದ್ದರೆ ಪಾಪಿ ಪಾಟೀಲ ನಾನಾ ಕಿರುಕುಳ ಕೊಡುತ್ತಲೇ ಇರುತ್ತಾನೆ. ಅಂತಿಮವಾಗಿ ಅಂಥ ಅರ್ಜಿಗೆ ಕಸದ ಬುಟ್ಟಿ ಹಾದಿ ತೋರಿಸುತ್ತಾನೆ.

ಪಾಟೀಲನ ಹಣದ ಹಪಾಹಪಿ ಎಷ್ಟಿದೆಯೆಂದರೆ, ನ್ಯಾಯಬೆಲೆ ಅಂಗಡಿಗಳಿಂದು ಅನ್ಯಾಯದ ಕೇಂದ್ರಗಳಾಗಿ ಮಾರ್ಪಟ್ಟಿವೆ. ಒಂದಷ್ಟು ಮಂದಿ ಪ್ರಾಮಾಣಿಕರೂ ಉಸಿರುಕಟ್ಟಿ ಒದ್ದಾಡುವಂತಾಗಿದೆ. ಯಾಕೆಂದರೆ ಈತನಿಗೆ ಪ್ರತಿ ಅಂಗಡಿಗಳವರೂ ತಿಂಗಳಿಗೆ 500 ರೂ. ಕೊಡಲೇ ಬೇಕು! ಜೊತೆಗೆ ಕಾಲಕಾಲಕ್ಕೆ ಗುಂಡು-ತುಂಡಿನ ಪಾರ್ಟಿ ಆಯೋಜಿಸಿ ಸಂತೃಪ್ತಗೊಳಿಸಬೇಕು. ಹೀಗೆ ಮಾಡಿದರೆ ಮಾತ್ರ ಒಂದಷ್ಟು ಆಹಾರ ವಸ್ತುಗಳಾದರೂ ಅಂಗಡಿ ತಲುಪುತ್ತವೆ. ಇಲ್ಲವಾದಲ್ಲಿ 'ಶಾರ್ಟೇಜ್ ಇದೆ' ಎಂಬ ನೆಪ ಹೇಳಿ ಲಾಭ ಹೊಡೆದುಕೊಳ್ಳುತ್ತಾನೆ.

ಇನ್ನು ಈತನಿಗೆ ಸರಿಯಾಗಿ ಕಪ್ಪ ಸಲ್ಲಿಸಿದರೂ ಸಹ ಚೂರು ಪಾರು ಆಹಾರ ಸಾಮಗ್ರಿ ಕಳಿಸಿ 'ಅಡ್ಜಸ್ಟ್ ಮಾಡ್ಕಳ್ರಿ' ಅಂತ ಆದೇಶಿಸುತ್ತಾನೆ. ಹಾಗೆ ಉಳಿದ ವಸ್ತುಗಳು ಕಾಳಸಂತೆಯ ಪಾಲಾದಂತೆಯೇ.

ಇದೀಗ ಆಹಾರದ ಸರಬರಾಜಿಗೆ ಸಂಬಂಧಿಸಿದಂತೆ ಹೊಸ ಯೂನಿಟ್ ಪದ್ಧತಿ ಜಾರಿಯಲ್ಲಿದೆ. ಅದರ ಪ್ರಕಾರ ಒಂದು ಯೂನಿಟ್‌ಗೆ 4 ಕೆ.ಜಿ. ಅಕ್ಕಿ ಕೊಡಬೇಕು. ಈ ರೀತಿಯಲ್ಲಿ 5 ಜನರಿರುವ ಕುಟುಂಬಕ್ಕೆ 20 ಕೆ.ಜಿ.ಅಕ್ಕಿ ಸೇರಲೇಬೇಕು. ಆದರೀಗ 2 ಯೂನಿಟ್‌ಗಿಂತ ಕಡಿಮೆ ಇರುವ ಕಾರ್ಡುಗಳಿಗೆ ಮಾತ್ರ ಯೂನಿಟ್ ಪದ್ಧತಿಯಂತೆ ಅಕ್ಕಿ ಸಿಗುತ್ತಿದೆ. ಈ ರೀತಿ ಉಳಿಸಿಕೊಂಡ ಕಾಳುಕಡ್ಡಿ ಕ್ವಿಂಟಾಲ್‌ಗಳ ಗಟ್ಟಲೆ ತಲುಪಿ ಕಾಳಸಂತೆಯ ದಾರಿ ಹಿಡಿಯುತ್ತಿವೆ. ಪಾಪಿ ಪಾಟೀಲ ಭರ್ತಿ ಕಾಸೆತ್ತುತ್ತಾನೆ.

ಪಾಟೀಲನ ಈ ಭ್ರಷ್ಟ ದರ್ಬಾರಿನಲ್ಲಿ ಬಡವರಿಗೆ ನೆರವಾಗುವ ಮಹತ್ವಾಕಾಂಕ್ಷೆಯ ಅಂತ್ಯೋದಯ ಯೋಜನೆಯೂ ಅರ್ಥ ಕಳೆದುಕೊಂಡಿದೆ. ಪಾಟೀಲನ ದಯೆಯಿಂದಾಗಿ ಈ ಯೋಜನೆ ರಾಜಕೀಯ ಪುಡಿ ಪುಢಾರಿಗಳು ಹಾಗೂ ಪ್ರಭಾವೀ ಶ್ರೀಮಂತರ ಪಾಲಾಗಿದೆ. ಅಕ್ಷಯ ಕಾರ್ಡು, ಎಪಿಎಲ್ ಕಾರ್ಡುಗಳದ್ದೂ ಇದೇ ಸ್ಥಿತಿ. ಇಷ್ಟಕ್ಕೆ ತೃಪ್ತನಾಗದ ಪಾಟೀಲ ನಕಲಿ ಕಾರ್ಡುಗಳನ್ನೂ ಹಂಚಿದ್ದಾನೆ. ಇದರಲ್ಲಿ ಅಕ್ರಮವಾಗಿ ಆಹಾರ ಧಾನ್ಯಗಳನ್ನು ಮಂಜೂರು ಮಾಡಿ ನುಂಗಿ ಹಾಕುತ್ತಿದ್ದಾನೆ.

ಈತನ ವರ್ತನೆಗಳನ್ನು ಗಮನಿಸಿದರೆ ಹಣದ ಸನ್ನಿ ತಲೆಗೇರಿ ಹುಚ್ಚೇ ಹಿಡಿದಂತಿದೆ. ಯಾವ್ಯಾವ ದಾರಿಯಿಂದ ಹಣ ಗೆಬರಬೇಕೋ ಅದೆಲ್ಲವನ್ನೂ ಮುಗಿಸಿರುವ ಪಾಟೀಲ ಹೊಸ ಹೊಸ ಮಾರ್ಗಗಳನ್ನು ಅನ್ವೇಷಿಸುತ್ತಲೇ ಇರುತ್ತಾನೆ. ಈ ಹಿನ್ನೆಲೆಯಲ್ಲಿ ಇದೀಗ ಪತ್ರಕರ್ತರಿಗೆ ಹಣ ಕೊಡಬೇಕೆಂಬ ಹೊಸ ವರಾತ ಶುರುವಿಟ್ಟುಕೊಂಡಿರುವ ಈತ ರೇಷನ್ ಅಂಗಡಿಕಾರರಿಂದ ಸಾವಿರಾರು ರೂಪಾಯಿ ವಸೂಲಿ ಮಾಡುತ್ತಿದ್ದಾನೆ.

ಇಂಥ ಹಣಬಾಕತನ ಹೊಂದಿರುವ ಪಾಟೀಲ ಪಕ್ಕಾ ಹಗಲು ಕುಡುಕ. 'ಪರಮಾತ್ಮ'ನನ್ನು ಆವಾಹಿಸಿಕೊಂಡೇ ಕಚೇರಿಗೆ ಹೋಗುವ ಈತ ತನಗಾಗದವರ ಮೇಲೆ ಕೀಳುಭಾಷೆಯ ದಾಳಿ ಶುರುವಿಡುತ್ತಾನೆ. ಕೆಲದಿನಗಳ ಹಿಂದೆ ಕಚೇರಿಯ ಫೈಲುಗಳ ಸಮೇತ ಬಾರೊಂದರಲ್ಲಿ ಚಿತ್ತಾಗಿದ್ದ ಈತ ಶಾಸಕ ಶ್ರೀಕಾಂತ ಕುಲಕರ್ಣಿಗೆ ಹಿಗ್ಗಾಮುಗ್ಗಾ ಬೈದು ಸ್ಥಳೀಯ ಪತ್ರಿಕೆಗಳಿಗೆ ಆಹಾರವಾಗಿದ್ದ.

ಇಂಥ ಪರಮ ಭ್ರಷ್ಟನನ್ನು ಮೇಲಧಿಕಾರಿಗಳೆಲ್ಲ ಲಾಭದ ದೃಷ್ಟಿಯಿಂದ ಸಹಿಸಿಕೊಂಡಿದ್ದಾರೆ. ಇದರಿಂದಾಗಿಯೇ ಬಡಬಗ್ಗರಿಗೆ ಘೋರ ಅನ್ಯಾಯವಾಗುತ್ತಿದೆ. ಈ ಭ್ರಷ್ಟರ ದಂಡಿಗೆ ಒದ್ದು ಬುದ್ಧಿ ಕಲಿಸುವ ತಾಕತ್ತು ಶಾಸಕ ಕುಲಕರ್ಣಿಗೆ ಯಾಕಿಲ್ಲ?

● ಮಹಾಲಿಂಗಪ್ಪ ಆಲಬಾಳ

ರಾಮನಗರ: 'ಶೋಲೆ' ಬೆಟ್ಟದಲ್ಲಿ ಅಕ್ರಮ ರೆಸಾರ್ಟ್

ಜನಪ್ರಿಯ ಹಿಂದಿ ಚಿತ್ರ 'ಶೋಲೆ' ಮೂಲಕ ದೇಶದಾದ್ಯಂತ ಪರಿಚಿತವಾಗಿರುವ ರಾಮನಗರದ ಪ್ರಖ್ಯಾತ ರಾಮದೇವರ ಬೆಟ್ಟದ ಮಧ್ಯಭಾಗದಲ್ಲಿ ಜನರ ವಿರೋಧದ ನಡುವೆಯೂ ಖಾಸಗಿ ರೆಸಾರ್ಟ್ ಕಟ್ಟುವ ಕಾಮಗಾರಿ ಆರಂಭಗೊಂಡಿದೆ. ಅರಣ್ಯ ಇಲಾಖೆಯ ಜಾಗದಲ್ಲಿ ರಾಜಾರೋಷವಾಗಿ ರೆಸಾರ್ಟ್ ಕಾಮಗಾರಿ ಮುಂದುವರೆಸಿರುವ 'ಬೆಂಗಳೂರು ಹಾಸ್ಪಿಟಾಲಿಟಿ' ಎಂಬ ಕಳ್ಳರ ಕೂಟ, ಪ್ರಶ್ನಿಸಿದ ಅರಣ್ಯಾಧಿಕಾರಿ ಗೋವಿಂದಯ್ಯ, ನೌಕರ ಕೃಷ್ಣಯ್ಯರ ಮೇಲೆ ಹಲ್ಲೆ ನಡೆಸಿದೆ. ಕ್ರಮ ಕೈಗೊಳ್ಳಬೇಕಾದ ಪೊಲೀಸರು ರೆಸಾರ್ಟ್‌ನ ರೊಕ್ಕದ ರುಚಿಗೆ ಸಂತೃಪ್ತರಾಗಿದ್ದಾರೆ. ಈ ಎಲ್ಲದಕ್ಕೆ ಕಾರಣ ಜಿಲ್ಲಾಡಳಿತವೇ ರೆಸಾರ್ಟ್ ರಾಕ್ಷಸರ ಪರ ಇರುವುದು. ರಾಮನಗರದ ಶಾಸಕ, ಮಾಜಿ ಮುಖ್ಯಮಂತ್ರಿ ಕುಮಾರಸ್ವಾಮಿಯೇ ರೆಸಾರ್ಟ್ ನಿರ್ಮಾಣವನ್ನು ವಿರೋಧಿಸಿದ್ದರೂ, ಕಾಮಗಾರಿ ಮುಂದುವರೆದಿರುವುದನ್ನು ನೋಡಿದರೆ ಕಂದಾಯ ಇಲಾಖೆಯ ಅಧಿಕಾರಿಗಳ ಕಳ್ಳಾಟ ಅರ್ಥವಾಗುತ್ತದೆ.

ಅರಣ್ಯ ಇಲಾಖೆಯ ಜಾಗವನ್ನು ತನ್ನ ಜಾಗ ಎಂಬಂತೆ ರೆಸಾರ್ಟಿಗೆ ನೀಡಿದೆ, ರಾಮನಗರದ ಕಂದಾಯ ಇಲಾಖೆ. ರಾಮನಗರದಿಂದ ಮೂರು ಕಿ.ಮೀ ದೂರದಲ್ಲಿರುವ ರಾಮನಗರ ಬೆಟ್ಟ ರಾಮನಗರ ಮತ್ತು ಸುತ್ತಮುತ್ತಲಿನ ಗ್ರಾಮಗಳ ಮಳೆ, ಬೆಳೆ, ಹವಾಮಾನ ಪರಿಸ್ಥಿತಿಯ ಮೇಲೆ ಅನುಕೂಲಕರ ಪರಿಣಾಮಗಳನ್ನು ಬೀರುತ್ತ ಬಂದಿದೆ. 856 ಎಕರೆಗಳ ಈ ವಿಶಾಲ ಗಿರಿಶ್ರೇಣಿ ಅಪಾರ ಜೀವವೈವಿಧ್ಯ ಹೊಂದಿದ್ದು ಔಷಧೀಯ ಸಸ್ಯಗಳ ಜೊತೆಗೆ ಅನೇಕ ಮೃಗ, ಪಕ್ಷಿಗಳಿಗೆ ವಾಸಸ್ಥಾನವಾಗಿದೆ. ಅಳಿವಿನ ಅಂಚಿನಲ್ಲಿರುವ ರಣಕಾಟ ಅಥವಾ ರಣಹದ್ದು (**Long billed unltres**)ಗಳು ಇಲ್ಲಿ ಸಾಕಷ್ಟು ಸಂಖ್ಯೆಯಲ್ಲಿದ್ದು ಮೊಟ್ಟೆ ಇಟ್ಟು ಮರಿ ಮಾಡಿ



ಸಂತಾನೋತ್ಪತ್ತಿ ಮಾಡುತ್ತಿವೆ. ಈ ರಣಹದ್ದುಗಳು ವಾಸಿಸುವ ಕಲ್ಲುಕುಹರಗಳು ಇರುವ ಸಮೀಪದ ಜಾಗದಲ್ಲೇ ರೆವಿನ್ಯೂ ಇಲಾಖೆಯ ಮೂರ್ಖ ಅಧಿಕಾರಿಗಳು ರೆಸಾರ್ಟಿಗೆ ಅನುಮತಿ ನೀಡಿಬಿಟ್ಟಿದ್ದಾರೆ.

ಇದು ರಕ್ಷಿತ ಅರಣ್ಯ ಪ್ರದೇಶವಾಗಿದ್ದು ಈ ಜಾಗ ಅರಣ್ಯ ಇಲಾಖೆಗೆ ಸೇರಿದ್ದರೂ, ಕಂದಾಯ ಇಲಾಖೆ ಕಾನೂನುಮೀರಿ ಅರಣ್ಯ ಪ್ರದೇಶವನ್ನೇ ಖಾಸಗಿಯವರಿಗೆ ಮಾರಿಕೊಂಡಿದೆ. ಇದರ ವಿರುದ್ಧ ಅರಣ್ಯ ಇಲಾಖೆ ಜಿಲ್ಲಾಡಳಿತಕ್ಕೆ ದೂರು ಮತ್ತು ನ್ಯಾಯಾಲಯಕ್ಕೆ ಮೇಲ್ಮನವಿ ಸಲ್ಲಿಸಿದೆ. ಆದರೆ ದುಷ್ಟ 'ಬೆಂಗಳೂರು ಹಾಸ್ಪಿಟಾಲಿಟಿ' ಸಂಸ್ಥೆ ಇಂಜೆಕ್ಷನ್ ಆದೇಶ ಪಡೆದಿದೆ. ಕ್ರಮಕೈಗೊಳ್ಳಬೇಕಾದ ಯಡ್ಡಿ ಸರ್ಕಾರ ತೆಪ್ಪಗಿದೆ. ಹೇಗೂ ಬಂಡವಾಳ ಬರುತ್ತಲ್ಲ ಎಂದು ಅದು ಉಡಾಫೆ ಮಾಡುತ್ತಿದೆಯೇನೋ?

ಈಗಾಗಲೇ ರಾಮನಗರದ ಜನ ಶಿವನಂಜಯ್ಯ, ರಾಮದೇವರಬೆಟ್ಟ ಸಂರಕ್ಷಣಾ ಸಮಿತಿ, ಬಯಲು ಟೀಚರ್ಸ್ ಬಳಗ ಮತ್ತು ಮಿತ್ರರ ನೇತೃತ್ವದಲ್ಲಿ ಕರವೇಗಳ ಜೊತೆ ಸೇರಿ ಪ್ರತಿಭಟಿಸಿದ್ದಾರೆ. ಈಗಲೂ ಒಂದಿಲ್ಲೊಂದು ರೀತಿಯಲ್ಲಿ ಪ್ರತಿಭಟನೆ ನಡೆಸಲಾಗಿದೆ. ಬಯಲು ಟೀಚರ್ಸ್ ಬಳಗದವರು ಸಾಹಿತಿ-ಪತ್ರಕರ್ತರನ್ನು ಕರೆಸಿ ಈ ಕುರಿತು ಚರ್ಚೆ ನಡೆಸಿ ವಿರೋಧ ವ್ಯಕ್ತ ಮಾಡಿದ್ದಾರೆ.

ಈಗಾಗಲೇ ಗಣಿಗಾರಿಕೆಯಿಂದ ಅಷ್ಟಿಷ್ಟು ನಾಶವಾಗಿರುವ ರಾಮನಗರ ಬೆಟ್ಟದಲ್ಲಿ ರೆಸಾರ್ಟ್ ತಲೆ ಎತ್ತಿದರೆ ಇಲ್ಲಿನ ಪರಿಸರ ನಾಶವಾಗುವುದು ಖಂಡಿತ. ರೆಸಾರ್ಟ್ ಜಾಗದ ಸಮೀಪ ವಾಸಿಸುತ್ತಿರುವ ಇರುಳ ಜನಾಂಗದವರು ಬೀದಿಪಾಲಾಗುವುದೂ ಖಚಿತ.


ರಾಮನಗರ ಪ್ರದೇಶದ ಜೀವವೈವಿಧ್ಯಕ್ಕೆ, ಪರಿಸರಕ್ಕೆ ಅಪಾಯಕಾರಿಯಾಗಿರುವ ಈ ಅಕ್ರಮ ರೆಸಾರ್ಟ್ ತಲೆ ಎತ್ತದಂತೆ ಜನ ಸಂಘಟಿತರಾಗಿ ಪ್ರತಿಭಟನೆಗಳನ್ನು ಮುಂದುವರೆಸಬೇಕಿದೆ. ಮೂರ್ಖ ಜಿಲ್ಲಾಡಳಿತ ಕಂದಾಯ ಇಲಾಖೆಯ ಭ್ರಷ್ಟ ಅಧಿಕಾರಿಗಳಿಗೆ ಕೂಡಲೇ ಮೂಗುದಾರ ಹಾಕುವಂತಾಗಲಿ.

● ಮಲ್ಲನಗೌಡರ್

ಗದಗ: ಬೊಗಳೆ ಸರಕಾರದಿಂದ ಸಂತ್ರಸ್ತರಿಗೆ ಟೋಪಿ

ರಾಮುಲು ಜೂಟ್, ಜೂಟ್!!

ರಾಜ್ಯದ ಆರೋಗ್ಯವನ್ನು ಹಾಳುಗೆಡವಿರುವ ಆರೋಗ್ಯ ಮಂತ್ರಿ ಶ್ರೀರಾಮುಲು ಈಗ ಅಕ್ಷರಶಃ ... ಜಿಲ್ಲೆಯನ್ನು ಅಧ್ವಾನ ಗೆಡವಿದ್ದಾನೆ. ನೆರೆ ...ಯಿಂದ ಬೀದಿಗೆ ಬಿದ್ದಿರುವ ನಿರಾಶ್ರಿತರ ...ಗೆ ಚಾಂಡಾಳನಂತೆ ಕಾಣುತ್ತಿದ್ದಾನೆ. ಹೌದು, ...ಲ್ಲಿ ಬೀದಿಗೆ ಬಿದ್ದು ಸರಿ ಸುಮಾರು ವರ್ಷ ...ದರೂ ಒಂದೇಒಂದು ಮನೆ ಕಟ್ಟಿಸದ ...ನಾರಿ ಮಂತ್ರಿ ರಾಮುಲು ಮತ್ತವನ ಚೇಲಾ ...ರಿಗಳ ವಿರುದ್ಧ ಬಡವರು ಹಿಡಿಶಾಪ ...ತ್ತಿದ್ದರೂ ಅದನ್ನೆಲ್ಲ ಇವರು ಸರಕಾರಿ ...ಗಳಂತೆ ನುಂಗುತ್ತಿದ್ದಾರೆ. ಅಭಿವೃದ್ಧಿ ಹೆಸರಲ್ಲಿ ... ತಂದ ಕೋಟಿ, ಕೋಟಿ ಅನುದಾನವನ್ನು ತನ್ನ ... ಪಿಂಡಗಳ ಜೇಬಿಗೆ ಕಮೀಷನ್ ರೂಪದಲ್ಲಿ ...ರುವುದನ್ನು ರಾಮುಲು ಈಗಲೂ ...ಮುವರೆಸಿದ್ದಾನೆ. ಇವನ ಭರವಸೆಯಿಂದ ನೆರಳು ...ಕನಸು ಕಾಣುತ್ತಿದ್ದ ಜಿಲ್ಲೆಯ ಮೂರು ...ಲೂಕುಗಳ 14 ಗ್ರಾಮದ ಮುಗ್ಧ ಜನತೆ ಇಂದು ...ಎಂದು ಗಗನ ನೋಡುತ್ತಿದ್ದಾರೆಯೇ ಹೊರತು ...ದರವಿಗೂ ಅವರು ಒಂದು ಇಟ್ಟಿಗೆಯನ್ನಾಗಲಿ, ... ಮುಷ್ಟಿ ಸಿಮೆಂಟನ್ನಾಗಲಿ ಕಂಡಿಲ್ಲ.



ಹಳೇದೆಲ್ಲ ಸುಳ್ಳಂತೆ, ಇನ್ನು ಮುಂದೆ ಖರೇ?

...ಶಷ್ಟು ಚೀಯ್ಯಾನು ಮಲ್ಲಿ ಇಲಾ ಜರಗದು. ...ಬೇ ಸ್ವಾರಿ ಏನೋ ರೊಂಡು ವರ್ಷ ...ಗಿದೆ, ಈ ವರ್ಷದಲ್ಲಿ ಎಲ್ಲಾ ಸರಿ ಚೆತ್ತಾನು' ...ಚೆತ್ತಾನ್ನ ಭಾಷೆಯಲ್ಲಿ ಛೇಲಾಗಳ ಜೊತೆ ...ಡಿ ಕೊನೆಗೆ ಪತ್ರಕರ್ತರ ಮುಂದೆಯೂ ತನ್ನ ...ದ್ದಾದ' ಕನ್ನಡ ಭಾಷೆಯಲ್ಲಿ 'ನಂದೆ ಎಲ್ಲಾ ... ಆಸರೆ ಯೋಜನೆಯಲ್ಲಿ ಮನೆ ಕಟ್ಟುವ ... ಶುರು ಮಾಡಾಕೆ ಆಗಲಿಲ್ಲ, ಮುಂದೆ ಐದು ...ಲ್ಲಿ ಎಲ್ಲಾ ಮನೆ ಕಟ್ಟಿ ಎಲ್ಲಾರಿಗೂ ಹಂಚ್ತೆನಿ' ... ಹೇಳಿದ ರಾಮುಲು ಆನಂತರ ಗದಗನಿಂದ ...

...ವರೆ ಕಳೆದ ಒಂದು ವರ್ಷದಿಂದ ಸುಡುವ ...ನಲ್ಲಿ ಮತ್ತು ನಡುಗುವ ಚಳಿಯಲ್ಲಿ ...ಕಲು ತಗಡಿನ ಷೆಡ್ಡಿನಲ್ಲಿ 14 ಗ್ರಾಮಗಳ ...ರು ಬಡ ಕುಟುಂಬಗಳು ಹೇಗೆ ...ಸುತ್ತಿದ್ದಾರೆ ಎಂಬುವುದರ ಬಗ್ಗೆ ಕಿಂಚಿತ್ತೂ ...ಚಿಸದೆ, ಆ ನೊಂದ ಜೀವಗಳ ಬಗ್ಗೆ ... ಮಾತನ್ನೂ ಆಡದೇ ಪರಿಷತ್ ಚುನಾವಣೆಯನ್ನು ಖರೀದಿಸುವಲ್ಲಿ ಮುಗ್ನನಾಗಿದ್ದ ರಾಮುಲು ಈಗ 'ಐದು ತಿಂಗಳಲ್ಲಿ ಮಾಡ್ತಿನಿ' ಎಂಬ ಹೊಸ ನಾಟಕ ಪ್ರಾರಂಭಿಸಿದ್ದಾನೆ.

ಖಾಸಗಿ ಸಹಭಾಗಿತ್ವದಲ್ಲಿ ಚೆಡ್ಡಿ ಸ್ವಾಮಿಗಳಾದ ಪೇಜಾವರ, ಬಾಲಗಂಗಾಧರ ಮತ್ತು ಧರ್ಮಸ್ಥಳದ ವೀರೇಂದ್ರ ಹೆಗ್ಗಡೆಗಳನ್ನು ಕರೆತಂದು ದೊಡ್ಡ ಶಾಮಿಯಾನದಲ್ಲಿ ಆವರೆಲ್ಲರ ಪಾದಪೂಜೆ ಮಾಡಿದ್ದರು ಈ ಪಾಪಿಗಳು. ಆದರೆ ಆನಂತರ ನೆರೆ ಪರಿಹಾರದಲ್ಲೂ ತಮ್ಮ ಚೇಲಾ ಪಿಂಡಗಳಿಗೆ ಅನ್ನ ಹುಡುಕುವ ಕಾರ್ಯಕ್ಕೆ ಅನುಕೂಲ ಮಾಡಿಕೊಟ್ಟರು. ಜನಾರ್ದನ ರೆಡ್ಡಿಯ ಪರಮಾಪ್ತ ಮತ್ತು ಇವರ ಬ್ರಹ್ಮಣಿ ಸ್ಟೀಲ್ ಎಂಬ ಲೂಟಿಕೋರ ಕಂಪನಿಯ ಪಾಲುದಾರ ಜಿಂದಾಲ್‌ಗೆ ಇಲ್ಲಿ ಮನೆ ನಿರ್ಮಿಸುವ ಉಸ್ತುವಾರಿ ನೀಡಲಾಯಿತು. ಪಾಪಿ ಕಾ ಮಾಲ್ ಚಂಡಾಲ್ ಖಾಯಾ ಎಂಬಂತೆ ಜಿಂದಾಲ್ ಮೂಲಕ ಇಲ್ಲಿ ಉಚಿತ ಮನೆ ನಿರ್ಮಿಸುವ ಯೋಜನೆಯನ್ನು ತಯಾರಿಸಿ ಅದನ್ನು ಮುಗ್ಧ ನಿರಾಶ್ರಿತರಿಗೆ ತೋರಿಸಿದ್ದರು.

ಆದರೆ ಇಲ್ಲಿಯವರೆಗೂ ಆಸರೆಯ ಒಂದು ಸೂರೂ ತಲೆ ಎತ್ತಿಲ್ಲ. ಅಂದು ತರಾತುರಿಯಲ್ಲಿ ಮುರುಕಲು ತಗಡಿನ ಮನೆ ಹೊಕ್ಕ ನಿರಾಶ್ರಿತರು ಅದೇ ತಗಡಿನ ಮನೆಗಳಲ್ಲಿ ದಿನಗಳನ್ನು ಎಣಿಸುತ್ತಿದ್ದಾರೆ.

ಸೇವಾ ಭಾರತಿಯ ದರೋಡೆ

ಆಸಲಿಗೆ ನೆರೆ ಹಾವಳಿ ಬಂದಿದ್ದೇ ತಮ್ಮ ಅನ್ನಕ್ಕಾಗಿ ಎಂಬಂತೆ ಬಾಯಿ ತೆರಕೊಂಡೇ ಬಂದ ಸಂಘ ಪರಿವಾರದ ಕೃಪಾಪೋಷಿತ 'ಸೇವಾ ಭಾರತಿ' ಎಂಬ ಟ್ರಸ್ಟ್ ನೆರೆ ಪರಿಹಾರದ ಸಮೀಕ್ಷೆ ಕಾರ್ಯದ ಉಸ್ತುವಾರಿಯನ್ನು ಹೊತ್ತುಕೊಂಡಿತ್ತು. ಆದರೆ ಇವರು ಕೂಡ ಬಂದಿದ್ದು ಸರಕಾರದ ಪರಿಹಾರದ ದುಡ್ಡನ್ನು ಕೊಳ್ಳೆ ಹೊಡೆದು ಚೆಡ್ಡಿಗಳ, ಬಿಜೆಪಿ ಕಾರ್ಯಕರ್ತರ ಜೇಬಿಗಿಡಲು ಎಂಬುದು ಅಂದೇ ಸ್ಪಷ್ಟವಾಗಿತ್ತು. ಅದರಂತೆ ಚೆಡ್ಡಿಗಳಿಗೆ ಬೇಕಾಬಿಟ್ಟಿ ಪರಿಹಾರದ ಚೆಕ್ಕುಗಳನ್ನು ನೀಡಲಾಯಿತು.

ಹೀಗಾಗಿ ನೆರೆಯಿಂದಾಗಿ ಮನೆ ಕಳೆದುಕೊಂಡಿದ್ದ ನಿರಾಶ್ರಿತರಾರಿಗೂ ಪರಿಹಾರ ದಕ್ಕಲಿಲ್ಲ. ಪರಿಹಾರ ನಿಜವಾಗಲೂ ಅವರಿಗೆ ದಕ್ಕಿದ್ದರೆ ಇಂದು ಯಾರೂ ತಗಡಿನ ಷೆಡ್ಡುಗಳಲ್ಲಿ ವಾಸಿಸುತ್ತಿರಲಿಲ್ಲ. ಮನೆ ನಿರ್ಮಿಸಿ ಕೊಡಿ ಎಂದು ಮೂರ್ಖರ ಹಿಂದೆ ಬೀಳುತ್ತಿರಲಿಲ್ಲ.

ಅಧಿಕಾರದಲ್ಲಿ ಎರಡು ವರ್ಷಗಳನ್ನು ಪೂರೈಸಿದ್ದೇ ಮಹಾನ್ ಸಾಧನೆ ಎಂದು ಬೀಗುತ್ತಿರುವ ಯಡ್ಡಿ ಮತ್ತವನ ಚೇಲಾ ಮಂತ್ರಿಗಳು ನೆರೆಹಾವಳಿಯಿಂದ ತತ್ತರಿಸಿರುವ ಗ್ರಾಮಗಳತ್ತ ಇನ್ನಾದರೂ ಮುಖ ಮಾಡಿದರೆ ಅಂದು ಕೋಟಿ ಕೋಟಿ ಖರ್ಚು ಮಾಡಿ ಆಸರೆ ಹೆಸರಿನ ನಾಮಫಲಕದ ಮುಂದೆ ದಾರ ಜಗ್ಗಿದ್ದಕ್ಕೂ ಸಾರ್ಥಕವಾಗುತ್ತದೆ. ಆದರೆ ಈ ಜನಕಂಟಕ ಸರಕಾರಕ್ಕೆ ಆ ಕರುಣೆ ಇದೆಯಾ ಎಂಬ ಪ್ರಶ್ನೆಯನ್ನು ಗದಗ ಜಿಲ್ಲೆಯ ಪ್ರಜ್ಞಾವಂತ ಜನ ಈಗ ಕೇಳಬೇಕಾಗಿದೆ. ಯಾಕೆಂದರೆ ಈ ವರ್ಷದ ಮಳೆಗಾಲದಲ್ಲಿ ನಿರಾಶ್ರಿತರು ತಂಗಿರುವ ತಗಡಿನ ಷೆಡ್ಡುಗಳು ಆದೆಷ್ಟು ಆಸರೆ ಒದಗಿಸಬಲ್ಲವು? ಕಳೆದ ತಿಂಗಳ ಅಂತ್ಯಕ್ಕೆ ಬಿದ್ದ ಸಣ್ಣ ಮಳೆಗೇ ಷೆಡ್ಡುಗಳ ಅರ್ಧ ತಗಡುಗಳು ಹಾರಿಹೋಗಿವೆ. ಉಳಿದರ್ಧ ಅದ್ಯಾವಾಗ ಹಾರುತ್ತವೋ? ಮತ್ತೆ ಅದೆಷ್ಟು ಮುಗ್ಧ ಜೀವಗಳ ಹೆಣ ಉರುಳುತ್ತವೋ ಗೊತ್ತಿಲ್ಲ.

• ಹುರುಳಿಕುಪ್ಪಿ ವಿನಯ್

KMF Nandini

ಹಾಸನ: ಕೆಎಂಎಫ್ ವಿವಾದ

ನೊಂದ ರೈತರಿಗೆ ನ್ಯಾಯ ಸಿಕ್ಕೀತೆ?

ಚೆನ್ನರಾಯಪಟ್ಟಣದ ಚಾಮಡಿಹಳ್ಳಿ ಮತ್ತು ಶೆಟ್ಟಿ ಹಳ್ಳಿಗಳ ಜನರು ಕಂಗಾಲಾಗಿದ್ದಾರೆ. ನ್ಯಾಯಕ್ಕಾಗಿ ಅವರು ನಡೆಸುತ್ತಿರುವ ನಿರಂತರ ಹೋರಾಟಕ್ಕೆ ಎಂದಾದರೂ ಬೆಲೆ ಸಿಗುತ್ತದೆಂಬ ತಟುಕು ನಿರೀಕ್ಷೆಯಷ್ಟೇ ಆ ಬಡಜನರ ಪಾಲಿಗೆ ಉಳಿದುಕೊಂಡಿದೆ.

ಈ ಜನರ ಸಂಕಟದ ಮೂಲ ಈ ಭಾಗದಲ್ಲಿ 2003 ರಲ್ಲಿ 150 ಕೋಟಿ ವೆಚ್ಚದಲ್ಲಿ ನಿರ್ಮಾಣಗೊಂಡ ಹಾಲುಪುಡಿ ತಯಾರಿಕಾ ಘಟಕ. ಅದು ಎಚ್.ಡಿ. ರೇವಣ್ಣ ಕೆಎಂಎಫ್ ಅಧ್ಯಕ್ಷರಾಗಿದ್ದ ಕಾಲ. ಆ ಸಂದರ್ಭದಲ್ಲೇ ಈ ಘಟಕ ತಯಾರಿಕೆಯ ವಿಚಾರ ಹೊರಬಿದ್ದಾಗ ಈ ಭಾಗದ ಜನರು ಸಾರ್ವತ್ರಿಕ ವಿರೋಧ ವ್ಯಕ್ತಪಡಿಸಿದ್ದರು.

ಹೇಳಿಕೇಳಿ ಇದು ದೇವೇಗೌಡರ ತವರು ನೆಲ. ಆದುದರಿಂದಲೇ ಚಾಮಡಿ ಹಳ್ಳಿ ಮತ್ತು ಶೆಟ್ಟಿ ಹಳ್ಳಿಗಳ ರೈತರನ್ನು ಕರೆಸಿಕೊಂಡ ಗೌಡರು 23 ಎಕರೆ ಬಿಟ್ಟು ಕೊಡಲು ಒಪ್ಪಿಸಿದ್ದರು. ಜೊತೆಗೆ ಭೂಮಿ ಕಳೆದುಕೊಂಡವರ ಕುಟುಂಬದ 50 ಮಕ್ಕಳಿಗೆ ಉದ್ಯೋಗ ನೀಡಲಾಗುವುದೆಂಬ ಭರವಸೆಯನ್ನೂ ನೀಡಿದ್ದರು. ಜೊತೆಗೆ ಶಾಸಕರಾಗಿದ್ದ ಸಿ.ಎಸ್. ಪುಟ್ಟೇಗೌಡರೂ ಸಹ ಪುರಸಭೆ ದರದಲ್ಲಿ ಪರಿಹಾರ ನೀಡುವುದಾಗಿ ತಿಳಿಸಿದ್ದರು. ಇದೆಲ್ಲವನ್ನು ನಂಬಿದ ಜನರು ತಂತಮ್ಮ ಭೂಮಿ ಬಿಟ್ಟುಕೊಟ್ಟಿದ್ದರು.

ಆದರೆ ಘಟಕ ಆರಂಭವಾಗುವುದಕ್ಕಿಂತ ಮುಂಚೆಯೇ ಬೇರೆಯವರನ್ನು ನೇಮಕಾತಿ ಮಾಡಿಕೊಂಡಿದ್ದರು. ಭೂಮಿ ನೀಡಿದ ಯಾರೊಬ್ಬರಿಗೂ ಉದ್ಯೋಗ ಸಿಕ್ಕಿಲ್ಲ.

ಅಂದಿನಿಂದ ಇಂದಿನವರೆಗೂ ಈ ಭಾಗದ ಜನರ ಕಡೆಯಿಂದ ನಿರಂತರವಾಗಿ ಹೋರಾಟ ನಡೆಯುತ್ತಿದೆ. ಆದರ್‍ಯಾಕೋ ದೇವೇಗೌಡರು ಹಾಗೂ ಅವರ ಮಗ ರೇವಣ್ಣನವರಿಗೆ ಕೊಟ್ಟ ಭಾಷೆ ಮರೆತು ಹೋದಂತಿದೆ.

ಅದಕ್ಕೆ ಸರಿಯಾಗಿ ಕೆಎಂಎಫ್ ಅಧಿಕಾರವೂ ಈಗ ಸೋಮಶೇಖರ ರೆಡ್ಡಿಯ ಪಾಲಾಗಿದೆ. ಈತನಿಗೆ ಹಾಸನದ ಮತದಾರರನ್ನು ಕಟ್ಟಿಕೊಂಡು ಏನೂ ಆಗಬೇಕಿಲ್ಲ ವಾದ್ದರಿಂದ ಈ ಭಾಗದ ಬಡವರ ಗೋಳಿಗೆ ಸದ್ಯ ಪರಿಹಾರ ದೊರಕುವ ಸೂಚನೆಗಳಿಲ್ಲ. ●

ಹುಬ್ಬಳ್ಳಿ : ಏರ್‌ಪೋರ್ಟ್‌ಗೆ ಕೃಷಿ ಭೂಮಿ

ಪರಿಹಾರ ಗಗನಕುಸುಮ



...ಗತಿಕ ಬಂಡವಾಳ ಹೂಡಿಕೆದಾರರ ...ಶ ನಡೆಸಿ ತಾವು ಅಮೆರಿಕಾ ಕಂಪನಿಗಳ, ...ಟಾಟಾ-ರೆಡ್ಡಿಗಳ ಗುಲಾಮರೆಂದು ...ವಾಗಿ ಡಂಗುರ ಸಾರಿಕೊಂಡ ... ಮಾನ್ಯ ಯಡಿಯೂರಪ್ಪ ...ರು 'ಕೈಗಾರಿಕೆಗೆ ಕೃಷಿ ...ಮಿಯನ್ನು ಸ್ವಾಧೀನ ...ಕೊಳ್ಳುವುದಿಲ್ಲ' ಎಂಬ ಸುಳ್ಳನ್ನು ...ಟ್ಟರಿಸಿದ್ದಾರೆ. ಈ ಮುಖ್ಯಾತ್ಮರ ...ಮಾದರಿಯಲ್ಲಿ ಕೃಷಿಭೂಮಿ, ... ಸಂಸ್ಥೆಗಳ ಭೂಮಿಗಳು ...ಕೋರ ಬಂಡವಾಳಶಾಹಿಗಳ ...ತ್ತಲೇ ಇವೆ.



ಪ್ರದೀಪ್ ಶೆಟ್ಟರ್

...ತಹ 'ಅಭಿವೃದ್ಧಿ'ಗೆ ಹುಬ್ಬಳ್ಳಿಯ ...ರ್ಟ್ ಮಾದರಿಯಂತಿದೆ. ಕೆಲವೇ ...ರಿವಂತ ವ್ಯಾಪಾರಿಗಳ ಅನುಕೂಲಕ್ಕಾಗಿ ...ಂದ ಇಲ್ಲಿನ ಏರ್‌ಪೋರ್ಟ್‌ನಿಂದ ಇಲ್ಲಿಗೆ ...ಳಪ್ಪೂ ಹಿಡಿದುಬಂದಿಲ್ಲ. ಯಾವ ...ಗಳೂ ಸೃಷ್ಟಿಯಾಗಿಲ್ಲ.

2007ರ ಏಪ್ರಿಲ್‌ನಲ್ಲಿ ಈಗಿನ ಈ ಏರ್‌ಪೋರ್ಟ್ ನಿರ್ಮಿಸಲು 678 ಎಕರೆ ಜಮೀನು ಭೂಸ್ವಾಧೀನ ಮಾಡುವುದಾಗಿ ಜಿಲ್ಲಾಧಿಕಾರಿ ಆದೇಶ ಹೊರಡಿಸಿತು. ಇದರಲ್ಲಿ 458 ಎಕರೆ ಕೃಷಿಭೂಮಿಯೇ ಇತ್ತು. ಇಂತಹ ಭೂಮಿ ಮಾರಲು ಒಲ್ಲದ ರೈತರ ಮೇಲೆ ಒತ್ತಡ ತಂದ ರಿಯಲ್ ಎಸ್ಟೇಟ್ ಕುಳಗಳು ಮೊದಲೇ ರೈತರಿಂದ ಭೂಮಿಯ ಹಕ್ಕು ಪಡೆದುಕೊಂಡರು. ಈ ದರೋಡೆ ಕೆಲಸದಲ್ಲಿ ಈಗಿನ ಗ್ರಾಮೀಣಾಭಿವೃದ್ಧಿ ಸಚಿವ ಜಗದೀಶ ಶೆಟ್ಟರರ ಸಹೋದರ ಪ್ರದೀಪ್ ಶೆಟ್ಟರನೂ ಇದ್ದ.

ರೈತರು ತಮ್ಮ ಭೂಮಿಗೆ ಎಕರೆಗೆ 30 ಲಕ್ಷ ನೀಡಿ ಎಂದು ನ್ಯಾಯಯುತವಾಗಿಯೇ ಕೇಳಿದ್ದರು. ಜಿಲ್ಲಾಧಿಕಾರಿ ಇದಕ್ಕೆ ಒಪ್ಪದಿದ್ದಾಗ ರೈತರು ಸಂಘಟನಾತ್ಮಕ ಪ್ರತಿಭಟನೆ ಮಾಡಿದರು. ಕೊನೆಗೆ ಜಗದೀಶ್ ಶೆಟ್ಟರರು ಎಕರೆಗೆ 26 ಲಕ್ಷ ನಿಗದಿ ಮಾಡಿಸಿದ್ದೂ ಆಯಿತು.

ಬರೀ ಕೃಷಿ ಭೂಮಿ ಅಲ್ಲದೇ, 88 ಮನೆ, ಎರಡು ಸಾವಿರ ಖಾಲಿ ನಿವೇಶನ, ಹಾಗೂ ಹದಿಮೂರು ಕೈಗಾರಿಕಾ ಶೆಡ್‌ಗಳು ಏರ್‌ಪೋರ್ಟ್‌ಗೆ ಬಲಿಯಾಗಿವೆ. ಮನೆ, ಕಟ್ಟಡ ಕಳೆದುಕೊಂಡವರಿಗೆ ಒಂದಿಷ್ಟು ಪರಿಹಾರ ನೀಡಿ ಸುಮ್ಮನಿರಿಸಲಾಗಿದೆ. ಆದರೆ ಖಾಲಿ ನಿವೇಶನ ಹೊಂದಿರುವವರು ಸರ್ಕಾರದ ಈ ಪರಿಹಾರದ ಮೊತ್ತವನ್ನು ಒಪ್ಪಿಕೊಳ್ಳುತ್ತಿಲ್ಲ. ಅವರ ಆಕ್ಷೇಪಣೆ ಸರಿಯಾಗಿಯೂ ಇದೆ. ಆದರೆ ಸರ್ಕಾರ ಮಾತ್ರ ಕಣ್ಣು ತೆರೆಯುತ್ತಿಲ್ಲ. ಈ ಖಾಲಿ ನಿವೇಶನದ ಮಾಲೀಕರು ಒಕ್ಕೂಟ ರಚಿಸಿಕೊಂಡು 15 ದಿನ ಉಪವಾಸ ಕೂತರು. ಆದರೆ ಈ ಒಕ್ಕೂಟದ ಅಧ್ಯಕ್ಷ ರಘೋತ್ತಮ ಕುಲಕರ್ಣಿ ಪೇಜಾವರ ಸ್ವಾಮಿ, ಆಚಾರ್ಯರ ಮಾತು ಕೇಳಿ ಹೋರಾಟವನ್ನು ಹಳ್ಳ ಹಿಡಿಸಿದ. ಈಗ ಈತ ಶೆಟ್ಟರ್ ಮನೆಮುಂದೆ ಉಪವಾಸ ಮಾಡುತ್ತಾನಂತೆ!



ಆಗತ್ಯವೇ ಇಲ್ಲದ ಒಂದು ವಿಮಾನ ನಿಲ್ದಾಣಕ್ಕಾಗಿ ರೈತರು ಕೃಷಿಭೂಮಿ ಕಳೆದುಕೊಂಡರು. ನಿವೇಶನ ಕಳೆದುಕೊಂಡ ಜನ ಪರಿಹಾರವಿಲ್ಲದೇ ಬಳಲುತ್ತಿದ್ದಾರೆ.

ಅಷ್ಟಕ್ಕೂ ಈ ವಿಮಾನ ನಿಲ್ದಾಣದಿಂದ ಲಾಭವಾಗಿದ್ದು ಯಾರಿಗೆ? 'ಅಭಿವೃದ್ಧಿ' ಎಂದರೆ ಇದೇನಾ?

• ಹುಬ್ಬಳ್ಳಿಯಾಂವ

'ಅನ್ಯ'ವೆಂಬುದಕೆ 'ಭಿನ್ನ'ವಾಗಿದೆ ಮನವು

ತನ್ನ ಸುತ್ತಲ ತಲ್ಲಣಗಳಿಗೆ ಪ್ರತಿಕ್ರಿಯಿಸಲಾಗದ, ಪರಿಹರಿಸಲಾಗದ ಅಸಹಾಯಕತೆಯಲ್ಲಿ ಸಾಹಿತ್ಯ ಒಂದು ಹೊರದಾರಿಯಾಗಿ ತೆರೆದುಕೊಳ್ಳುತ್ತದೆ. ಹಾಗೆಯೇ, ಉಸಿರು ಕಟ್ಟಿಸುವ ವ್ಯವಸ್ಥೆಯೊಂದು ರೂಪಕದ ಭಾಷೆಯನ್ನು ಸೃಷ್ಟಿಸುತ್ತದೆ. ಅಕಾಡೆಮಿಕ್ ಶಿಸ್ತಿಗೆ ಒಳಪಟ್ಟು ಅದೇ ತನ್ನ ದಾರಿ ಎಂದು ಗ್ರಹಿಸಿಕೊಂಡ ಲೇಖಕಿಗೂ ಕತೆ/ಕವನಗಳ ಅಭಿವ್ಯಕ್ತಿ ಮಾಧ್ಯಮ ಅನಿವಾರ್ಯ ಆಗುವುದಕ್ಕೆ ಈ ಎಲ್ಲಾ ಕಾರಣಗಳು ಇರಬಹುದು, ಕೆಲವೊಮ್ಮೆ ಇಲ್ಲದೆ ಇರಬಹುದು. ಆದರೆ, ಈ 'ಕಡಲ ತಡಿಯ ಮನೆ' ಎಂಬ ಸಬಿಹಾ ಭೂಮಿಗೌಡರ ಸಂಕಲನದ ಕತೆಗಳು ಮಾತ್ರ ಈ ಕಾರಣಗಳನ್ನು ಸಮರ್ಥಿಸುವಂತಿವೆ.

ಈ ಸಂಕಲನದಲ್ಲಿ ಬರುವ ಹಲವು ಕತೆಗಳು ಕಳೆದುಹೋದ ಜಗತ್ತೊಂದನ್ನು ಹುಡುಕುತ್ತಿವೆ. ತನಗೆ ಮರೆತೇಹೋದಂತಿದ್ದ ತನ್ನ ಬಾಲ್ಯದ ಪ್ರಪಂಚವೊಂದು ನಿರೂಪಕಿಗೆ ಧುತ್ತನೆ ತೆರೆದುಕೊಳ್ಳುವುದು, ಮಗಳ ಬಾಲ್ಯದ ಸನ್ನಿವೇಶದಲ್ಲಿ, ಇದು ಗಮನಿಸಬೇಕಾದ ಸಂಗತಿಯಾಗಿದೆ. ಮಗಳ ಬಾಲ್ಯ ಸಮೃದ್ಧವಾಗಬೇಕೆಂಬ ಏಕೈಕ ಆಸೆಯಿಂದಷ್ಟೇ ಇದು ಹುಟ್ಟುವುದಲ್ಲ,

ಪುಸ್ತಕ ವಿಮರ್ಶೆ

ಮಗಳ ಬಾಲ್ಯದ ಕಾಲದಲ್ಲಿ ತನ್ನ ಬಾಲ್ಯದ ಕಾಲದಲ್ಲಿದ್ದ ಜಗತ್ತೊಂದು ಕಾಣೆಯಾಗಿದೆ ಎಂಬ ಒತ್ತಡದ ಫಲವಾಗಿ ಈ ಒತ್ತಾಸೆ ಹುಟ್ಟಿಕೊಳ್ಳುತ್ತಿದೆ.

ಒಂದೆಡೆ 'ಯೂನಿಫಾರಂ' ಸಂಸ್ಕೃತಿ ಹುಟ್ಟಿಕೊಳ್ಳುತ್ತಿದ್ದರೆ, ಇನ್ನೊಂದೆಡೆ ನಿರೂಪಕಿಗೆ ನಂಬಿಕೆ ಇಲ್ಲದ ಜಾತಿ-ಧರ್ಮದ ಪ್ರಶ್ನೆಗಳನ್ನು ಸಮಾಜ ಮತ್ತೆ ಮತ್ತೆ ನೆನಪಿಸುವ ಕೆಲಸ ಮಾಡುತ್ತಿದೆ. ಇದ್ದಕ್ಕಿದ್ದಂತೆ ಮಗಳು 'ಅಮ್ಮಾ, ನಾವು ಹಿಂದೂನ? ಮುಸ್ಲಿಮಾ?' ಎಂದು ಕೇಳಿದಾಗ, ಜಾತಿಗಳನ್ನು ನೆನಪಿಸುವ ಈ ವ್ಯವಸ್ಥೆಯ ಕುರಿತು ನಿರೂಪಕಿಗೆ ಆಘಾತವಾಗುತ್ತದೆ. ಸಹಜವಾಗಿಯೇ ಆಕೆಗೆ ಜಾತಿ, ಧರ್ಮದ ನಿಗಿಬಂಧವಿದ್ದೂ ಅದು ಅಡ್ಡಿಯಾಗದ ತನ್ನ ಬಾಲ್ಯ ನೆನಪಾಗುತ್ತದೆ. ರಂಜಾನ್, ಕ್ರಿಸ್‌ಮಸ್, ಚೌತಿಯನ್ನು ಎಲ್ಲ ಜಾತಿ-ಧರ್ಮದ ಜನರು ಆಚರಿಸುತ್ತಿದ್ದುದು ನೆನಪಾಗುತ್ತದೆ.



ಹೀಗೆ ನೆನಪಾಗುವುದಕ್ಕೆ ಇನ್ನೂ ಒಂದು ಕಾರಣವಿದೆ.

ಅದು ಹೊಸಕಾಲದ ಕುರಿತು ನಿರೂಪಕಿಗಿದ್ದ ಅಚಲ ನಂಬಿಕೆಯಲ್ಲಿ ಹುಟ್ಟಿಕೊಂಡ ಬಿರುಕಿನದು. ತಾನು ದಾಟಿಬಂದದ್ದು ಆಧುನಿಕ ವಿದ್ಯಾಭ್ಯಾಸವನ್ನು ಪಡೆದುಕೊಂಡು, ಮತ್ತದು ಜಗತ್ತನ್ನು ಇನ್ನಷ್ಟು ನಾಗರಿಕಗೊಳಿಸುತ್ತದೆ. ಜಾತಿ-ಗೋಡೆಗಳನ್ನು ಅಳಿದುಹಾಕುತ್ತದೆ ಎಂಬ ಭರವಸೆಯ ಕಾಲದ್ದು. ಆದರೆ ತನ್ನ ಕಣ್ಣೆದುರೇ ತನ್ನ ಭರವಸೆಗೆ ವಿರುದ್ಧವಾದ ಚಲನೆ ನಡೆಯುತ್ತಿದೆ. ಇದರಿಂದಾಗಿ ಈ ಭಾವನೆಗಳನ್ನು ಪೋಷಿಸಿಕೊಂಡು ಬಂದಿದ್ದ ಒಂದು ವರ್ಗಕ್ಕೆ ಆಘಾತವಾಗುತ್ತದೆ. ಈ ವರ್ಗವನ್ನು ಇಲ್ಲಿನ ಹಲವು ಕತೆಗಳ ನಿರೂಪಕಿ ಪ್ರತಿನಿಧಿಸುತ್ತಾಳೆ.


ಈ ವಿರುದ್ಧ ಚಲನೆಗೂ, ಹಳೆಯ ನೆನಪುಗಳಿಗೆ ವಾಪಸಾಗುವುದಕ್ಕೂ ಸಂಬಂಧ ಇದೆ. ಯಾವ ವಿದ್ಯೆ, ಆಧುನಿಕ ಅನುಕೂಲಗಳು, ಒಟ್ಟಿನಲ್ಲಿ ಆಧುನಿಕ ಜಗತ್ತು ಸಾಂಪ್ರದಾಯಿಕ ಬದುಕಿನ ಅನಗತ್ಯ ಬೇಡಿಗಳಿಂದ ಬಿಡುಗಡೆ ಮಾಡಿ ಹೊಸ ಉಸಿರನ್ನು ನೀಡುತ್ತದೆ ಎಂದು ಭಾವಿಸಿದ್ದೆವ್ರೋ ಅದು ಸುಳ್ಳಾಗುತ್ತಿರುವ ಸನ್ನಿವೇಶದಲ್ಲಿ-ಅದೇ ಹಳೇ ಜಗತ್ತಿಗೆ ವಾಪಸಾಗುತ್ತಿದ್ದೇವೆ. ಇದನ್ನು ಕೇವಲ ನಾಸ್ಟಾಲ್ಜಿಕ್ ಎಂದು ಹೇಳಬರುವುದಿಲ್ಲ, ಹೌದು, ರಮ್ಯವಾದ, ತನಗೆ ಬೇಕಾದ ಚಿತ್ರವನ್ನೇ ಅದು ಕೊಡುತ್ತಿದ್ದರೂ ಅದರ ಗಮನ-ನಾವು ಪಡೆದಿದ್ದೇನು? ನಾವು ಕಳಕೊಂಡಿದ್ದೇನು? ಎಂಬುದರ ಅನ್ವೇಷಣೆಯ ಕಡೆಗೂ ಇದೆ. ಮುಂದಿನ ತಲೆಮಾರಿಗೆ, "ಇಲ್ಲ, ಜಗತ್ತು ಅಷ್ಟೇನೂ ಕೆಟ್ಟಿಲ್ಲ, ಹಿಂದೆ ಹೀಗಿತ್ತು" ಎಂದು ಕನಸು ತುಂಬುವ ಒಂದು ಕ್ರಮವೂ ಹೌದು. ಇದನ್ನು ಸ್ಪಷ್ಟವಾಗಿ ಈ ಸಂಕಲನದ 'ತುಪ್ಪ ಮೆತ್ತಿದ ಕನ್ನಡಿ' ಎಂಬ ಕಥೆಯಲ್ಲಿ ಕಾಣಬಹುದು.

ಈ ಕಥೆಯ ಆರಂಭದಲ್ಲಿ 'ಇಟಗಿ' ಎಂಬ ಊರಿನ ಚಿತ್ರಣ ಬರುತ್ತದೆ. ಆ ಪುಟ್ಟ ಊರಿನಲ್ಲಿದ್ದ ಅಮ್ಮನ ಗುಡಿ ಮತ್ತು ಅಜ್ಜನ ಮಠಗಳ ವರ್ಣನೆ ನಮ್ಮನ್ನೇ ಅಲ್ಲಿನ ಲೋಕಕ್ಕೆ ಎಳೆದೊಯ್ಯುತ್ತದೆ. ಆ ಊರಿನ ಜನರ ಸಾಮುದಾಯಿಕ ಬದುಕಿನ ಅನನ್ಯ ಪರಿಯೊಂದು ಬಿಚ್ಚಿಕೊಳ್ಳ ತೊಡಗುತ್ತದೆ. ಅಲ್ಲಿರುವವರು ಹುಸಿನೆವ್ವ, ಕಮಲವ್ವ, ಹೀರಪ್ಪ, ಲಚುಮವ್ವ ಹೀಗೆ ಅನೇಕರು. ಆರ್ಥಿಕವಾಗಿ ಸ್ವಲ್ಪ ಸುಸ್ಥಿತಿಯಲ್ಲಿರುವ ಹುಸಿನವ್ವಳೇ ಇವರಿಗೆಲ್ಲ ನಾಯಕಿ. ಇವರೆಲ್ಲ ಪ್ರತಿ ಹುಣ್ಣಿಮೆ, ಅಮಾವಾಸ್ಯೆ ಬಂದಾಗಲೂ ಮನೆಗೆ ಸುಣ್ಣ ಕೆಮ್ಮಣ್ಣು ಸಗಣಿ ಮೆತ್ತಿ ಮನೆ ಶೃಂಗರಿಸುತ್ತಾರೆ-ಎಲ್ಲಾ ಜಾತಿಯವರೂ, ಧರ್ಮದವರೂ. ಹಪ್ಪಳ, ಸಂಡಿಗೆಯನ್ನು ಎಲ್ಲ ಮನೆಯವರೂ ಮಾಡುತ್ತಾರೆ-ಎಲ್ಲಾ ಮನೆಯವರೊಂದಿಗೂ. ಮದುವೆ ಇತ್ಯಾದಿಗೆ ಮಾಡುವ ಶಾವಿಗೆಯ ವರ್ಣನೆ- ಅಲ್ಲೂ ಎಲ್ಲರೂ ಕೈಜೋಡಿಸುವುದು-ಬಾಯಲ್ಲಿ ನೀರೂರಿಸುವಂತಿದೆ. ಹೀಗೆ ಸಾಗುವ ವರ್ಣನೆ ಓದಿದ ಮಗಳು ಇದನ್ನು ಕನಸು ಅಥವಾ ಕಲ್ಪನೆ ಎಂದೇ ಭಾವಿಸುತ್ತಾಳೆ. ಅಂದರೆ ನಮ್ಮ ಈಗಿನ ನಾಗರಿಕ ಬದುಕು ಇದನ್ನು ವಾಸ್ತವ ಎಂದು ನಂಬಲೂ ತಯಾರಿಲ್ಲದ 'ಸಮುದಾಯ ವಿಘಟಿತ' ಸ್ಥಿತಿಗೆ ನಾವು ಬಂದಿದ್ದೇವೆ. ಆದರೆ ಕತೆಯ ಮುಂದಿನ ಭಾಗ ಇನ್ನೊಂದು ರೀತಿಯ ಕುತೂಹಲವನ್ನು ಹುಟ್ಟಿಸುತ್ತದೆ.

ಇಂತಹ ಊರನ್ನು ನೋಡಬೇಕೆಂದು ಮಗಳು ಬಯಸುತ್ತಾಳೆ. ಆದರೆ ನಿರೂಪಕಿಗೆ ತನ್ನ ನೆನಪಿನಲ್ಲಾದರೂ 'ರಕ್ಷಿತ'ವಾಗಿರುವ ಈ ವಿವರಗಳು ಈಗ 25 ವರ್ಷಗಳ ನಂತರ ಹೋಗಿ ನೋಡಿದರೆ 'ನಾಶ'ವಾಗಬಹುದು ಎಂಬ ಭಯ. ಕೊನೆಗೂ ಹೋಗುವ ಪರಿವಾರ ಆರಂಭದಲ್ಲಿ ಊರಿನ ಹೊರಗೆ ಆಗಿರುವ ಬದಲಾವಣೆಯಿಂದ ನಿರಾಶೆಗೊಂಡರೂ ಊರೊಳಗಿನ 'ಮಂದಿ' ಇನ್ನೂ ಹಾಗೇ ಇರುವುದು ನೋಡಿ 'ದಂಗಾ'ಗುತ್ತಾರೆ. ಮುಸ್ಲಿಂ ಹೆಣ್ಣುಮಗಳೊಬ್ಬಳನ್ನು ಬಂಧುವಂತೆ ಕಾಣುವ, ನೋಡಲು 'ಸಂಪ್ರದಾಯಸ್ಥ'ಳಂತಿರುವ ಹಿಂದೂ ಹೆಣ್ಣುಮಗಳ ಅಂತಃಕರಣಕ್ಕೆ ನಿರೂಪಕಿ ಕರಗಿಹೋಗುತ್ತಾಳೆ. ಈ ಕತೆ ಓದುಗರಲ್ಲೂ ಭರವಸೆಯ ಒಂದು ಮಿಂಚನ್ನು ಹೊಳೆಯಿಸುತ್ತದೆ.

ಈ ಸಂಕಲನದಲ್ಲಿ ಎರಡು ಮಾದರಿಯ ಕತೆಗಳಿವೆ.

1. ವೈಯಕ್ತಿಕ ಬದುಕಿನ ಸೂಕ್ಷ್ಮ ವಿವರಗಳನ್ನು ಸ್ತ್ರೀ ನೆಲೆಯಿಂದ ಅವಲೋಕಿಸುವುದು.



ಕಡಲ ತಡಿಯ ಮನೆ
ಲೇ: ಡಾ.ಸಬಿಹಾ ಭೂಮಿಗೌಡ
ಪ್ರ: ಲಡಾಯಿ ಪ್ರಕಾಶನ, ಗದಗ
ಪುಟಗಳು: 100 ಬೆಲೆ: 50/-

2. ಒಟ್ಟು ಮಾನವ ಬದುಕಿನ ವಿವರಗಳಲ್ಲಿ ಹಿಂದೆ ಸರಿಯುತ್ತಿರುವ ಮಾನವೀಯ ಸಂಬಂಧಗಳ ನೆಲೆಗಳನ್ನು ಪುನರ್ ಪರೀಕ್ಷೆಗೆ ಒಡ್ಡುವುದು.

ಈ ಎರಡು ನೆಲೆಗಳಲ್ಲಿ ಎರಡನೆಯದೇ ಇಲ್ಲಿ ಗೆಲ್ಲುತ್ತದೆ. ಮಾತ್ರವಲ್ಲ, ಮೊದಲ ನೆಲೆಯನ್ನು ಎರಡನೇ ನೆಲೆ ಸೋಲಿಸುತ್ತದೆ. ಉದಾ : ಸಂಬಂಧ ಕತೆಯನ್ನೇ ಗಮನಿಸಬಹುದು. ಈ ಕತೆಯಲ್ಲಿ ಲಿಂಗಾಯತ ಗೌಡನ ಎರಡನೇ ಹೆಂಡತಿ ಮುಸ್ಲಿಮಳಾದ ರಾಜವ್ವನಿಗೆ ಕೊನೆಯಲ್ಲಿ ಮೊದಲ ಹೆಂಡತಿ ಚನ್ನಮ್ಮ ಆಸ್ತಿಯ ಅಂಶವಾಗಿ ಹಣವನ್ನು ತಾನೇ ಬಿಟ್ಟುಕೊಡುತ್ತಾಳೆ. ಇವರಿಬ್ಬರ ಹೆಣ್ಣುಮಕ್ಕಳು ಖಾಸಾ ಅಕ್ಕತಂಗಿಯರಂತೆ ಬದುಕಿದವರು. ಈ ಕತೆಗೆ ಮುಖ್ಯವಾಗುವುದು ಹಿಂದೂ ಮುಸ್ಲಿಂ ಎಂಬ ಭೇದದ ಅರಿವೇ ಇಲ್ಲದಂತೆ ಬಾಳಿದ ರೀತಿಯೇ ಹೊರತು-ರಾಜವ್ವನೆಡೆಗಿನ ಚನ್ನಮ್ಮನ ಅಸೂಯೆಯಲ್ಲ ಅಥವಾ ಬಸವಣ್ಣೆಪ್ಪ ಇಬ್ಬರು ಹೆಂಡಿರೊಂದಿಗೆ ಬದುಕುತ್ತಿದ್ದಾನೆ ಎಂಬ ವಿವರಗಳೂ ಅಲ್ಲ.

ಹಾಗೆಯೇ, ಎತ್ತಣೆಂದೆತ್ತ ಕತೆಯ ನೂರವ್ವ ತನ್ನ ಮಕ್ಕಳೊಂದಿಗೆ ಅದರಲ್ಲೂ ಮಗಳೊಂದಿಗೆ ಹೊಂದಿಕೊಳ್ಳಲಾಗದೆ ಕೊನೆಗೆ ಆಕೆ ತೆರಳುವುದು ತನ್ನೂರಿನ ಗೆಳತಿ ಶಿವಮ್ಮಳ ಬಳಿಗೆ. 'ನಮ್ ಮನಿ ಹಿಂದ ಸಣ್ಣ ಮನಿ ಐತೆಲ್ಲ, ಅಲ್ಲೇ ಇರ್ತಾಳ' ಎಂಬ ನಿರಾಳತೆಯೊಂದಿಗೆ....

ಈ ಸಂಕಲನದಲ್ಲಿ ಇದುವರೆಗೆ ಕನ್ನಡ ಸಾಹಿತ್ಯ ಲೋಕದಲ್ಲಿ ದಾಖಲಾಗದ ಕೆಲ ವಿವರಗಳು ಇವೆ. ರೂಪಾಂತರ, ಸಂಬಂಧ, ತುಪ್ಪ ಮೆತ್ತಿದ ಕನ್ನಡಿ-ಮುಖ್ಯವಾದವು. ಈ ಕಾರಣಕ್ಕೆ ಇವುಗಳಿಗಿಂತ ಭಿನ್ನವಾದ, ಸ್ತ್ರೀ ನೆಲೆಯಲ್ಲಿ ನೋಡಲಾಗಿರುವ ಇದಿಗಾಳು, ಬಿಟ್ಟನೆಂದರೆ ಬಿಡದೀ... ಇತ್ಯಾದಿ ಕತೆಗಳು ಪೇಲವವೆನಿಸುತ್ತವೆ. ಆದರೆ ಇದರಲ್ಲೂ ಬಳೆ ಮತ್ತು ಒಂದು ಸಾವಿನ ಸುತ್ತ ಕಥೆಗಳು ಮುಖ್ಯವೆನಿಸುತ್ತವೆ.

ಒಟ್ಟಾರೆಯಾಗಿ, ಆಧುನಿಕ ಬದುಕಿನಲ್ಲಿ ಹಾಸುಹೊಕ್ಕಾಗುತ್ತಿರುವ ಅನ್ಯತೆ, ಪರಕೀಯತೆ, ಒಂಟಿತನ, ಪರಿತ್ಯಕ್ತತೆ, ತಿರಸ್ಕೃತರಾಗುವ ಭಾವಗಳ ಕುರಿತಾದ ಒಂದು ಒಳಕುದಿತವೇ ಈ ಕಥಾಸಂಕಲನದ ಹುಟ್ಟಿನ ಹಿಂದಿನ ಕಾರಣವಾಗಿದೆ ಮತ್ತು ಅದು ಸಹಜವಾಗಿ ಈ ಕಥೆಗಳನ್ನು ಹುಟ್ಟುಹಾಕಿದೆ.

• ಡಾ. ಸಬಿತಾ ಬನ್ನಾಡಿ

ತಮಸ್ಸು ಮತ್ತು ತಮಾಷಾ!

ಈರುಳ್ಳಿ-ಬೆಳ್ಳುಳ್ಳಿ, ಮಾಂಸಾಹಾರ
ಹುಟ್ಟಿಸುತ್ತವೆ ನಿಮ್ಮಲ್ಲಿ
ತಾಮಸಗುಣ,
ಎಂದು ಬೋಧಿಸುವರು
ರೇಶ್ಮೆ ವಸ್ತ್ರ ಸುತ್ತಿಕೊಂಡ
ಸ್ವಾಮಿ ಗಣ.

ಸ್ವಾಮೀ, ಲಕ್ಷಾಂತರ ಹುಳಗಳ
ಬೇಯಿಸಿ ತೆಗೆದ ರೇಶ್ಮೆ ಎಳೆಗಳ
ಕಣ-ಕಣದಲ್ಲಿದೆ ತಮಸ್ಸು.
ನೀವು ನಿತ್ಯ ಉಪಯೋಗಿಸುವ
ವಾಹನ, ಆಧುನಿಕ ಪರಿಕರಗಳ

ಆವಿಷ್ಕಾರಿಸಿದ ವಿಜ್ಞಾನಿಗಳೂ,
ನೊಬೆಲ್ ಶಾಂತಿ ಪ್ರಶಸ್ತಿ ಗಳಿಸಿದವರೂ,
ಆಗಿದ್ದರೆಲ್ಲಾ ಮಾಂಸಾಹಾರಿಗಳು.
ಆಹಾರದಲ್ಲಿದ್ದರೆ ತಮಸ್ಸು
ಫಲಕಾರಿಯಾಗುತ್ತಿತ್ತೇ ಇವರ ತಪಸ್ಸು.


ಮಾಂಸಾಹಾರಿ ವಿಜ್ಞಾನಿಗಳಿರದಿದ್ದರೆ
ನಾವಿಂದೂ ಇರುತ್ತಿದ್ದೆವು
ಎತ್ತಿನ ಗಾಡಿ ಯುಗದಲ್ಲೇ.
ನೊಬೆಲ್‌ಗಾಗಿ ಸೂಟ್‌ಬೂಟ್ ತಮಾಷಾ
ಇದಲ್ಲವೇ ತಮಸ್ಸು ರವೀಶಾ

-ಪ್ರವೀಣ್ ಎಸ್. ಶೆಟ್ಟಿ



ಬಿಜೆಪಿಗಳು ಹಗಲುಗಳ್ಳರು, ಕಾಂಗ್ರೆಸ್ನೋರು ರಾತ್ರಿಕಳ್ಳರು ಅಷ್ಟೆ

ಉಗ್ರಿ ಹೇಳುವುದನ್ನು ಕೇಳುತ್ತಿದ್ದ ಕಾಳಮಾವ ತತ್ತರಿಸಿ ... ಜುಮ್ಮಿಯ ಪಂಚಾಯ್ತಿ ಆಫೀಸಿನಲ್ಲಿ ಬರೀ ಈ ... ಚರ್ಚೆಗಳೇ ನಡೆಯುವುದರಿಂದ ಅವಳಿಗಷ್ಟು ...ತವಾಗಲಿಲ್ಲ. ಆದರೆ ಕಾಳಮಾವ ಪ್ರವಾಹಕ್ಕೆ ಸಿಕ್ಕಿ ...ದುಲ್ಲಿರುವವರ ಕಾಸನ್ನ ತಿಂದಿದ್ದಾರೆ ಎಂಬುದನ್ನು ...ತ್ತಲೇ,



"ಈ ನನ ಮಕ್ಕಳು ಅಂತಿಂಥ ಜನಲ್ಲ ಕಂಡ್ರ, ಹ್ಯಣದ ...ಲ ಬಟ್ಟೆನೂ ಮಾರಿಕಳೋ ಅಂಥಾ ಜನ" ಎಂದ.

"...ಇನ್ನೊಂದಿಸೇಸ ಏನಂದ್ರೆ, ಕಾಂಗ್ರೆಸ್ಸಿನೋರ ಬೈಯ್ಯೋ ... ಬಿಜೆಪಿಗಳಿಗಿಲ್ಲ ಕಣ ಮಾವ."

"ಅಂಗರವುರೂ ತಿಂದಿದ್ದರೆ?"

"...ಕಾಂಗ್ರೆಸ್ಸಿನೋರು ರಾತ್ರಿಹೊತ್ತು ತಿಂದ್ರೆ ಈ ...ಗಳು ಹಗಲೊತ್ತೆ ತಿಂದು ಮುಗಿಸಿದ್ದರಂತೆ. ಎಡೂರಪ್ಪ ...ಊರಲ್ಲಿ ಪಾದಯಾತ್ರೆ ಮಾಡಿ ಈಸಗಂಡು ದುಡ್ನು ... ಚುಂಚನಗಿರಿ ಸ್ವಾಮಿ ಕೊಟ್ಟ ದುಡ್ನು ಇದ್ಯಾವುದಕ್ಕು ... ಕೊಟ್ಟಿಲ್ಲವಂತೆ."

"ಅಂಗರೆ ಚುಂಚನಗಿರಿ ಸ್ವಾಮಿ ಸುಮ್ಮನಿರದೇಳು" ...ಸೀರ

"ಅವುರೆಲ್ಲಿ ಸುಮ್ಮನಿದ್ದರೊ. ಆಗ್ಲೆ ಕೊಟ್ಟ ಕಾಸಿಗೆ ...ಕೇಳ್ಯಾವುರೆ."

"...ಹಂದಿರೋ ಚಂದಕೆ ಹಾಳುಗ್ವಾಡೆ ಜರಿತು ಅಂತ ...ಬಿಜೆಪಿಗಳಿಗೂ, ಕಾಂಗ್ರೆಸ್ಸಿನ್‌ವುಕೂ ಸರಿಯಾಗ್ಯದೆ ..." ಎಂದ ಕಾಳ ಮಾವ.

"...ನಿಜ ಕಣಮಾವ. ಯಾರೇನು ಹೆಚ್ಚಲ್ಲ ಯಾರೇನು ...ಲ್ಲ ಅವುರು ಹಗಲಗಳ್ರು ಇವುರು ರಾತ್ರಿ ಕಳ್ರು ...ಯಾ."

"...ಯಾರು ಉಗ್ರಿ ನೈಟ್ ಕಳ್ರು?" ಎನ್ನುತ್ತಾ ವಾಟಿಸ್ಸೆ ...

"...ಕಾಂಗ್ರೆಸ್ಸಿನೋರು."

"...ಅವುರು ಮದ್ನು ಹಗಲಗಳ್ರಾಗಿದ್ರು. ಆ ಪ್ಲೇಸಿಗೆ ಬಿಜೆಪಿಗಳು ಬಂದ ಮ್ಯಾಲೆ, ಇವುರು ರಾತ್ರಿ ಕಳ್ರಾದ್ರು ಅಷ್ಟೆ. ಆದ್ರೆ ದೇಶಪಾಂಡೆ ಅಂಥೋನಿಗೆ ಇಂತ ಆಪಾದನೆ ಬಂದಿರದ್ರಿಂದ ತಡಕತ್ತನೆ. ಏನೂ ಇಲ್ದೆಯಿರೊ ಬಡಪಾಯಿ ಮ್ಯಾಲೆ ಬಂದಿದ್ರೆ ಕತೆಯೇನು ಅಂತ?"

"ಅಂಗರೆ ದೇಸಪಾಂಡೆ ಜೋರಾಗಿದ್ದನೆ?"

"ಅವುನು ಕೋಟ್ಯಾಧಿಪತಿ ದ್ವಡಪ್ಪ. ಲಕ್ಷಾಂತ್ರಪಾಯಿ ಟ್ಯಾಕ್ಸ್ ಕಟ್ಟತನಂತೆ. ಅಂಥೋನು ಕಾಂಗ್ರೆಸಿನ ಖಜಾನೇ ಕಾಸು ಮುಟ್ಟತನೆ ಅಂದ್ರೆ ನಂಬಕ್ಯಾಗದಿಲ್ಲ."

"ದೇಸಪಾಂಡೆ ಕೋಟ್ಯಾಧಿಪತಿ ಅಂದ್ರೆ ಅದವುರಪ್ಪ ಸಂಪಾದ್ನೆ ಮಾಡಿದ್ನೆ, ಇವುನೆ ಮಾಡಿದ್ನೆ?"

"ಯಾವ ಸರ್ಕಾರ ಬಂದ್ರು ಅಧಿಕಾರದಲ್ಲಿದ್ದ ಅಂದಮ್ಯಾಲೆ ಇವುನೆ ಮಾಡಿರಬೇಕು!"

"ಒಂದು ಸತಿ ಸಿದ್ದರಾಮಯ್ಯ 'ಏ ದೇಶಪಾಂಡೆ, ಏನಯ್ಯ ಅಷ್ಟೊಂದು ಆಸ್ತಿ ಮಾಡಿದ್ದಿ ನೀನು?' ಅಂತ ಕೇಳಿದ್ನಂತೆ. ಅದ್ಕೆ ದೇಶಪಾಂಡೆ 'ನಮ್ಮ ಪಿತ್ರಾರ್ಜಿತವಾದ ಆಸ್ತಿಯಿದು ನಂದಲ್ಲ' ಅಂದನಂತೆ. ಅದ್ಕೆ ಸಿದ್ದರಾಮಯ್ಯ 'ನನಿಗೂ ಗೊತ್ತು ಸುಮ್ಮನೆ ಕೂತಗಳಯ್ಯ' ಅಂದನಂತೆ, ಗೊತ್ತೇ?"

"ದೇಶಪಾಂಡೆ ಕೋಟ್ಯಾಧಿಪತಿಯಾಗಿದ್ಕೆ ಅಲವೆ ಅವ್ನನ್ನ ಕಾಂಗ್ರೆಸ್ ಪ್ರೆಸಿಡೆಂಟ್ ಮಾಡಿದ್ದು? ಬೇಕಾದಷ್ಟು ದುಡ್ಡದೆ, ಪಾರ್ಟಿ ಕಟ್ಟತನೆ, ಖರ್ಚು ಮಾಡ್ತನೆ ಅಂತ ಮಾಡಿದ್ರು ಇವುನು ಪಾರ್ಟಿ ಕಟ್ಟದು ಬ್ಯಾಡ, ಪಾರ್ಟಿಗೆ ಕ್ಯಟ್ಟಸುರು ತಂದು ಮಡಿಗಿದ ಅತ್ಲಗೆ."

"ಅವುನು ಪಾರ್ಟಿಲಿರೊ ದುಡ್ನು ಖರ್ಚು ಮಾಡಿದಾಗ ಅದ್ರಲ್ಲಿ ಪ್ರವಾಹದ ದುಡ್ನು ಇರದು ಗೊತ್ತಾಗಲಿಲ್ಲವೇನೊ?"

"ಅಂಗೂ ಆಗಿರಬಹುದು. ಆದ್ರು ಇವತ್ತಿನ ದಿವಸದಲ್ಲಿ ಯಾವನೇ ರಾಜಕಾರಣಿ ಮನೆ ಕಟ್ಟಲಿ, ಕಾರು ತಗೊಳ್ಳಿ ಅದ್ಯಲ್ಲ ಸಾರ್ವಜನಿಕರ ದುಡ್ಡೇ ಹೊರತು ಅವುರು ಸಂಪಾದನೆ ಮಾಡಿದ್ದಲ್ಲ."

"ಕೆಲುವುರಿಗೆ ತನ್ನ ದುಡ್ಯಾವುದು, ಸಾರ್ವಜನಿಕರ ದುಡ್ಯಾವುದು ಅನ್ನದೆ ಗೊತ್ತಾಗದಿಲ್ಲ. ಅಂಥೋರು ಹಿಂಗೆ ಮಾಡಿಕತ್ತರೆ."

"ನೀನೂ ಅಂಗೆ ಅಲವೇನ್ಲ?" ಎಂದಳು ಜುಮ್ಮಿ.

"ಇದೇನಕ್ಕ ಹಿಂಗಂತೀ? ನಾನು ಯಾವತ್ತೂ ಆ ತರ ಬದುಕಲಿಲ್ಲ, ಅಂಗೇನಾರ ಆಗಿದ್ರೆ ಇವತ್ತು ಹಿಂಗಿರತಿದ್ನ ನಾನು? ಆ ಚಲುವಾರಾಯಸ್ವಾಮಿ ತರ ಇರತಿದ್ದೆ."

"ಅವುನಾರ ಮಂತ್ರಿಯಾಗಿದ್ನ, ನೀನೇನಾಗಿದ್ದೆ?"

"ಮಂತ್ರಿಯಾಗಿದ್ದೋರು ನನ್ನಂಗೇ ಇರದ ತೋರುಸ್ಲೇ? ಜನ ಕೆಟ್ಟು ಕ್ಯರ ಹಿಡಿಯಕ್ಕೆ ಮಂತ್ರಿನೇ ಆಗಬೇಕು ಅಂತ ಏನಿಲ್ಲ, ನಮ್ಮ ಸುತ್ತಮುತ್ತ ಇರೋ ಜನನೆ ನೋಡು. ಆ ರಾಜೇಗೌಡ ಮಂತ್ರಿಯಾಗಿದ್ನೆ? ಪುಡಸ್ವಾಮಿ ಮಂತ್ರಿಯಾಗಿದ್ನೆ? ಹೋಗ್ಲಿ, ಆ ಪ್ರಸನ್ನ ಮಂತ್ರಿಯಾಗಿದ್ನೆ? ಆದ್ರು ಅವುರ ಮನೆ ಬಾಗಲಲ್ಲಿ ಸ್ಕಾರ್ಪಿಯೋ ನಿಂತವೆ. ಅದೇ ನನ್ನ ಮನೆ ಬಾಗಲಲ್ಲಿ ಒಂದು ಲೂನಾ ಕೂಡ ನಿಂತಿಲ್ಲ."

"ತಗಳಿವೆ ಅದ್ನೆಯಾ."

"ನೋಡಕ್ಕ, ನನ್ನಲ್ಲಿ ಒಂದು ವೀಕ್‌ನೆಸ್ ಇದೆ. ಏನಪ್ಪ ಅಂದ್ರೆ, ನನ್ನ ಪ್ರೆಂಡ್ಸತ್ರ ಇರೊ ವೆಯಿಕಲ್ಲು ನನ್ನವೇ ಅಂತ ಅನ್ನಸ್ತದೆ. ಆದಕೋಸ್ಕರ ನಾನು ಯಾವುದಾರ ವೆಯಿಕಲ್ ತಗಬೇಕು ಅಂತ ಅನ್ನದಿಲ್ಲ."



"ನಿನ್ನ ಈ ತರದ ಬುದ್ಧಿನೆ ಕಣೊ ರಾಜಕಾರಣಿಗಳತ್ರ ಇರದು. ಸುಮಾರು ಜನ ರಾಜಕಾರಣಿಗಳಿಗೆ ತನ್ನದ್ಯಾವುದು, ಸರಕಾರದ್ಯಾವುದು ಅನ್ನೋ ವ್ಯತ್ಯಾಸ ಇರದಿಲ್ಲ. ಅದ್ಕೆ ದೇಸಪಾಂಡೆ ಸಿಕ್ಕಿಬಿದ್ದಿರದು."

"ದೇಸಪಾಂಡೆ ಸಿಕ್ಕಿರದ್ರಲ್ಲಿ ಡಿ.ಕೆ.ಶಿ ಕೈವಾಡ ಇರಬವುದು ಅಂತ ಗುಮಾನಿ ಕಣೊ ಉಗ್ರಿ."

"ನೀನಿನ್ನೂ ಗುಮಾನಿಲೇ ಇದ್ದಿಯಲ್ಲೊ. ಆ ಡಿಕೆಶಿ ರಾಜಕಾರಣಕ್ಕೆ ಬಂದಾಗ್ಲಿಂದ ಮಾಡದ್ಯಲ್ಲ ಇಂತ ಕ್ಯಲಸವೆ ಅಲವೆ. ಅವುನು ಮೈನ್ಸ್ ಮಾಡ್ತಾಯಿರದ್ರಿಂದ ಕಾಂಗ್ರೆಸ್‌ನವು ಮೈನ್ಸ್ ವಿರುದ್ಧ ಹೋರಾಡಕ್ಯಾಗಲಿಲ್ಲ. ಇವತ್ತು ನೀನು ಯಾವದಾರ ಯವಾರ ಮಾಡಿದ್ರೆ ಮ್ಯಾಕ್ಕೆ ಬರ್ತಿದ್ದೆ. ಹೋಗ್ಲಿ ನಾನೊಂದೇಳ್ತಿನಿ ಮಾಡ್ತಿಯಾ?"

"ಅದೇನೇಳಪ್ಪ ಮಾಡನ."

"ನೋಡು, ನಾಗಮಂಗಲದಲ್ಲಿ ಚವುರ ಮಾಡೋರ್ಯಲ್ಲ ಸೇರಿಕಂಡು ಇನ್ನ ಮುಂದೆ ಬ್ಯಾಂಬ್ರಿಗೆ ಚವುರ ಮಾಡದಿಲ್ಲ ಅಂತ ಹಟ ಹಿಡಿದಿದ್ದರಂತೆ. ಅದ್ಕೆ ನಾಗಮಂಗಲದ ಬ್ಯಾಂಬ್ಯಲ್ಲ ತಲೆ, ಗಡ್ಡ, ಮೀಸೆ ಬ್ಯಳಿಸಿಗಂಡು ತಿರುಗ್ತಾಯಿದ್ದರಂತೆ. ನೀನು ಹೋಗಿ ಅಲ್ಲೊಂದು ಸೇವಿಂಗ್ ಶಾಪ್ ತಗದ್ರೆ ವರ್ಕೌಟಾಯ್ತದೆ. ನೋಡು ಮನಸು ಮಾಡ್ತಿಯಾ?"

"ನೋಡೋ ಉಗ್ರಿ, ಈ ವಿಸಿಯದಲ್ಲಿ ಚವುರದೋರೆ ಸೋಲದು. ಯಾಕಂತಿಯಾ? ಬ್ಯಾಂಬ್ರು ಈಗಾಗ್ಲೆ ಸೇವಿಂಗ್ ಸೆಟ್ ತಗಂಡಿದ್ದರಂತೆ. ತಲೆನ್ಯಲ್ಲ ನೀವಿ ಹಿಂದಕೆ ಈರುಳ್ಳಿ ಗಾತ್ರಗಂಟು ಬಿಗಿತಾಯಿದ್ದರಂತೆ. ಜಾಸ್ತಿ ಬ್ಯಳದಾಗ ಮೇಲುಕೋಟಿಗೊ, ನಂಜನಗೂಡಿಗೊ ಹೋಗಿ ಯರಿಸಿಗಂಡು ಬತ್ತರೆ. ನಿನ್ನ ಮಾತ ಕೇಳಿ ನಾನೇರಾ ಬಂಡವಾಳ ಹಾಕಿದ್ರೆ ಬೀದಿಗೆ ಬೀಳದೆಯ."

"ಬ್ಯಾಂಬ್ರಿಗ್ಯಾಕ್ಲ ಚವುರ ಮಾಡದಿಲ್ಲ?" ಎಂದ ಕಾಳಮಾವ.

"ಅವುರ ಕಲ್ಯಾಣ ಮಂಟಪದಲ್ಲಿ ಚವುರ ಮಾಡೋರು ಮದುವೆ ಮಾಡಿಕಳಕ್ಕೆ ಅವುಕಾಸ ಕೊಡಲಿಲವಂತೆ ಕಣ ಮಾವ. ಅದ್ಕೆ ಚವುರದೋರು ಸ್ಟ್ರೈಕ್ ಮಾಡಿದ್ರು."

"ಕಾಲಾದಿಂದ ಬ್ಯಾಂಬ್ರು ಚವುರದೋರು ಒಂದಾಗಿದ್ರು. ಇವುರು ವಾಲಗ ಸುರುಮಾಡಿದೇಟಿಗೆ ಅವುರು ದೇವರ ಎತ್ತೋರು. ಅಂಥೊರು ಜಗಳಾಡಿಕಂಡವುರೆ ಅಂದ್ರೆ ಏನೋ ಕೇಡಗಾಲ."

"ಕೇಡಗಾಲಲ್ಲ ದ್ವಡಪ್ಪ, ಕ್ರಾಂತಿ. ಈಗ ಬ್ರಾಂಬ್ರು ಚವುರ ಮಾಡಿಕಬೇಕು, ಈಗಾಗ್ಲೆ ಮಾಡಿಕತ್ತಾಯಿದ್ದರಂತೆ. ಅದ್ಕೆ ನಾಗಮಂಗಲದ ಬ್ರಾಂಬ್ರು ತಲೆ ಯಗ್ಗಣ ಕಡದಂಗೆ ಕಾಣ್ತ ಅದೆ."

"ನಿಜವೇನ್ಲ?" ಎಂದು ಜುಮಿ ನಕ್ಕಳು.

"ದೇವರಾಣೆ ಕಣಕ್ಕ!"


ನಾವು ಮತ್ತು ಪ್ರಾಣಿಗಳು

...ಪ್ರೀತಿ, ದಯೆ ಮುಂತಾದವು ಕೂಡ ಸಂಘಸಂಸ್ಥೆಗಳಾದೊಡನೆ ಎಲ್ಲ ಜೀವ ಕಳೆದುಕೊಂಡುಬಿಡುತ್ತವೆ. ...ಿ ದಯಾಸಂಘ ಆ ತರಹದ್ದು. ಮೊನ್ನೆ ಮಕ್ಕಳು ತಮ್ಮ ಮುದ್ದಿನ ನಾಯಿ, ಬೆಕ್ಕು, ಕೋಳಿ, ಮೊಲ ...ಂತಾದವನ್ನು ತೆಗೆದುಕೊಂಡು ಈ ಪ್ರಾಣಿ ದಯಾಸಂಘದ ಸಮಾರಂಭದಲ್ಲಿ ಭಾಗವಹಿಸಿದ ಚಿತ್ರಗಳನ್ನು ...ಲ್ಲ ನೋಡಿದೆವು. ಮುದ್ದು ಮಕ್ಕಳು ಮತ್ತು ಅವರ ಮೆಚ್ಚಿನ ಪ್ರಾಣಿಗಳು ಆ ಚಿತ್ರಗಳಲ್ಲಿದ್ದವು. ಆದರೆ ಈ ...ಿ ದಯಾ ಸಂಘದವರು ಬೀದಿನಾಯಿಗಳನ್ನು ಉಳಿಸಲು ಹೋರಾಡುವುದು, ಮುದಿ ...ಗಳನ್ನು ರಕ್ಷಿಸುವುದು ಇವೆಲ್ಲ ಹಾಸ್ಯಾಸ್ಪದವಾಗಿರುತ್ತದೆ. ಜಗತ್ತಿನ ಒಂದು ದೊಡ್ಡ ...ರ್ಯಾಸದ ಪ್ರಕಾರ ಇಲ್ಲಿ ಹುಲಿ, ಚಿರತೆ, ಸಿಂಹ ಮುಂತಾದ ಸಾವಿರಾರು ಪ್ರಾಣಿಗಳನ್ನು ...ಸಲು ಹೋರಾಡಿದವರು ಮಹಾನ್ ಬೇಟೆಗಾರರು; ಬೇಟೆಯಾಡುತ್ತ ಆಡುತ್ತ ...ಗಳಿಗಾಗಿ ಸೋವಿ ಹುಡುಕಿ ಗುಂಡಿಕ್ಕಿದ್ದವರು. ಪ್ರಾಣಿಗಳಿಂದ ಬೇಟೆಯಾಡಿಸಿಕೊಂಡು ...ಮುಗೊಂಡು ಉಳಿದವರು-ಇಂಥವರು ಬೇಟೆಯ ಕ್ರೀಡೆಯಿಂದಲೇ ರೋಮಾಂಚನ ...ಭವಿಸಿ ಪ್ರಾಣಿಗಳನ್ನು ಪ್ರೀತಿಸತೊಡಗಿ ಅವುಗಳ ದೊಡ್ಡ ರಕ್ಷಕರಾದರು. ಅಮೆರಿಕಾದಲ್ಲಿ ...ಕಾಲ ಅರಣ್ಯಜೀವಿಗಳ ರಕ್ಷಕನಾಗಿದ್ದವನು ಇಂಥ ಬೇಟೆಗಾರ. ಅವನನ್ನು ರಾಜಕಾರಣಿಗಳು ... ಮಾಡಿದಾಗ ಅವನು ಎಲ್ಲರೂ ಮಂತ್ರಮುಗ್ಧರಾಗುವಂತೆ ತನ್ನ ಬೇಟೆಯ, ...ಗಳೊಂದಿಗಿನ ಅನುಭವ ಹೇಳಿದ. ಪ್ರಾಣಿಗಳ ಜೊತೆಗೆ ಜೀವಂತ ಸಂಬಂಧವೇ ...ದ ಈ ದಯಾಸಂಘ, ಭಯಾಸಂಘದವರು ಯಾವ ಪ್ರಾಣಿಗಳ ರಕ್ಷಕರೂ ಆಗಲಾರರು.

...ಮಾಂಸಾಹಾರ ಬಿಟ್ಟವರ ಕತೆಗಳೂ ವಿಚಿತ್ರವಾಗಿವೆ. ನಾನೇ ಬಲ್ಲ ಕುಟುಂಬವೊಂದರಲ್ಲಿ ...ು ಕುರಿಮರಿ ಇತ್ತು, ಅದನ್ನು ಪುಟ್ಟ ತಂಗಿ ಮತ್ತು ಅಣ್ಣ ತುಂಬ ಇಷ್ಟಪಡುತ್ತಿದ್ದರು. ...ುರಿಮಾರಿ ಮಗುವಿನಂತೆ ಎಲ್ಲೆಲ್ಲೂ ಓಡಾಡುತ್ತಿತ್ತು, ಈ ಮಕ್ಕಳು ಓದಿಕೊಳ್ಳುತ್ತಿದ್ದಾಗ ... ತೊಡೆ ಮೇಲೆ ಮಲಗಿರುತ್ತಿತ್ತು, ಆಡುವಾಗ ಜೊತೆಯಲ್ಲೇ ಇರುತ್ತಿತ್ತು, ಪ್ರೀತಿಯಿಂದ ...ದ್ದರಿಂದ ಅದು ದಷ್ಟಪುಷ್ಟವಾಗಿ, ಸುಂದರವಾಗಿ ಬೆಳೆಯಿತು. ಹೀಗೇ ಆದರೆ ಅದನ್ನು ...ುವುದು ಕಷ್ಟ ಎಂದು ತಿಳಿದ ಹೆತ್ತವರು ಅದನ್ನು ಮಕ್ಕಳಿಂದ ಬೇರ್ಪಡಿಸಲು ...ತ್ರಿಸಿದರು. ಈ ಸುಳಿವು ಗೊತ್ತಾದೊಡನೆ ಅಣ್ಣ-ತಂಗಿ ಕುರಿಮರಿಗೆ ಇನ್ನೂ ಜೋರಾಗಿ ಅಂಟಿಕೊಂಡರು. ...ಿ ಒಂದು ದಿನ ಅವರು ನಿದ್ರಿಸುತ್ತಿದ್ದಾಗ ಕುರಿಮರಿಯನ್ನು ತೆಗೆದುಕೊಂಡು ಹೋಗಿ ಮಾರಿಬಿಟ್ಟರು. ...ಮಂತೂ ಇದನ್ನು ಕಂಡು ಕುಸಿದುಹೋದಳು. ಅವತ್ತಿನಿಂದ ಒಂದು ವಾರ ಅವಳು ಅಳು ನಿಲ್ಲಿಸಲಿಲ್ಲ ...ುಗನೂ ಅಷ್ಟೆ, ಆಮೇಲೆನಾಯಿತು ಗೊತ್ತೆ-ಹುಡುಗ ಎಂದಾದರೊಮ್ಮೆ ಮಾಂಸ ತಿನ್ನುತ್ತಿದ್ದರೂ ಹುಡುಗಿ ...ಸ ಮುಟ್ಟಲೇ ಇಲ್ಲ, ಮಾಂಸದಡಿಗೆ ಮಾಡುವಾಗಲೆಲ್ಲ ಆಕೆ ಖಿನ್ನಳಾಗಿ ಕೂರುತ್ತಿದ್ದಳು.

ಇಂಥ ಇನ್ನೂ ಅನೇಕ ಸಂಗತಿ ಹೇಳಬಲ್ಲೆ, ಗೋಪಾಲಗೌಡ ಅವರು ಚಿಕ್ಕವರಾಗಿದ್ದಾಗ ಒಂದು ದಿನ ಅಡುಗೆಮನೆಗೆ ಹೋದರು. ಅಮ್ಮ ಅಡುಗೆಗೆ ಅಣಿಮಾಡಿಕೊಳ್ಳುತ್ತಿದ್ದರು. ಕೋಳಿ ತಂದರು. ಅದು ತನಗೆ ಬರಲಿರುವ ಗತಿಯನ್ನು ಊಹಿಸಿ ಭಯಾನಕವಾಗಿ ಚೀರಿಕೊಳ್ಳುತ್ತಿತ್ತು, ಅದಕ್ಕೆ ಕಿವಿಗೊಡದ ಅಮ್ಮ ಅದರ ಕುತ್ತಿಗೆ ಕೊಯ್ದರು. ಕೋಳಿಯ ರುಂಡ ಒಂದು ಕಡೆಗೆ ಬಿದ್ದು ಬಾಯಿಬಾಯಿ ಬಿಡುತ್ತಿದ್ದರೆ ಕೋಳಿಯ ದೇಹ ಅಡುಗೆಮನೆಯಲ್ಲೆಲ್ಲ ಫಟಫಟ ಹಾರಾಡಿ ರಕ್ತ ಗೋಡೆಗೆಲ್ಲ ಸಿಂಪಡಿಸಿತು. ಅದನ್ನು ಕಂಡು ಭಯ, ಕರುಣೆಯಿಂದ ಅಲ್ಲಾಡಿದ ಗೋಪಾಲಗೌಡರು ಎಂದೂ ಮಾಂಸ ಮುಟ್ಟಲಿಲ್ಲ. ಎಲ್ಲರೂ ಮಾಂಸ ತಿನ್ನುತ್ತಿದ್ದಾಗ 'ತಿನ್ನಬೇಡಿ' ಎಂದೂ ಹೇಳುತ್ತಿರಲಿಲ್ಲ, ಒಮ್ಮೆ ನನಗೆ ಈ ಕೋಳಿಯ ಕತೆ ಹೇಳಿದರು.

ಇನ್ನೊಬ್ಬರು ತಿನ್ನುವ ಪದಾರ್ಥಗಳ ಬಗ್ಗೆ ಟೀಕಿಸಿ ಮಾತಾಡುವುದು, ಮಾಂಸ ತಿನ್ನುವವರನ್ನು ತಾತ್ಸಾರದಿಂದ ನೋಡುವುದು ಕೆಟ್ಟ ಅಭಿರುಚಿ, ದುರ್ವರ್ತನೆ ಎಂಬುದು ನನ್ನ ಅಭಿಪ್ರಾಯ. ಜಗತ್ತಿನ ಶೇ. 90 ಜನ ಮಾಂಸಾಹಾರಿಗಳು; ಕೆಲವರು ಆಗಾಗ ತಿನ್ನುತ್ತಾರೆ. ಮಾಂಸ ತಯಾರಿಸುವ ದೊಡ್ಡ ಕೈಗಾರಿಕೆಯೇ ಬೆಳೆದಿದೆ; ಮಾಂಸಕ್ಕಾಗಿಯೇ ಹಸು, ಹಂದಿ, ಮೀನು, ಕೋಳಿಗಳನ್ನು ವಿಶೇಷವಾಗಿ ಬೆಳೆಸುತ್ತಾರೆ; ಹೊಸ ತಳಿಗಳನ್ನು ಕಂಡುಹಿಡಿದಿದ್ದಾರೆ. ಆದರೆ ಕೆಂಪುಮಾಂಸ ಮನುಷ್ಯ ದೇಹಕ್ಕೆ ಒಳ್ಳೆಯದಲ್ಲ. ಮೀನು, ಕೋಳಿಗಳನ್ನು ಬಿಟ್ಟರೆ ಮಿಕ್ಕ ಬಹುಪಾಲು ಮಾಂಸ ಕೆಂಪಾದದ್ದು; ಅದರಲ್ಲಿ ಕೊಬ್ಬು, ಪೌಷ್ಟಿಕಾಂಶ ತೀರಾ ಹೆಚ್ಚು. ಕೊಲೆಸ್ಟ್ರಾಲ್‌ನಿಂದ ನರಳುವವರು ಮಾಂಸವನ್ನು ಹೆಚ್ಚಾಗಿ ತಿನ್ನುವವರು; ಎನ್.ಟಿ. ರಾಮರಾವ್ ಬಿಳಿಮಾಂಸವನ್ನೇ ಅತಿಯಾಗಿ ತಿಂದು-ಬೆಳಗ್ಗೆ ಎದ್ದು ಒಂದು ಕೋಳಿಯನ್ನು ಇಡಿಯಾಗಿ ಭಕ್ಷಿಸಿ-ಬೈಪಾಸ್ ಸರ್ಜರಿ ಮಾಡಿಸಿಕೊಳ್ಳಬೇಕಾಗಿ ಬಂದದ್ದು ಎಲ್ಲರಿಗೆ ಗೊತ್ತು.




ಮಾಂಸಕ್ಕಿರುವ ಮಾನಸಿಕ, ಆರ್ಥಿಕ ಮುಖವೂ ವಿಚಿತ್ರವಾಗಿದೆ. ನೀವೇ ಸಾಕಿದ, ನಿಮ್ಮೊಂದಿಗೆ ಬೆಳೆದ ಪ್ರಾಣಿಗಳನ್ನು ಕೊಲ್ಲುವುದು ಸರ್ವೇಸಾಮಾನ್ಯ ಕ್ರಿಯೆಯಾಗಿ ಮಾಡಿಕೊಂಡವರಿಗೆ ಕೊಲ್ಲುವ ಕ್ರಿಯೆ ಸುಲಭವಾಗುತ್ತದೆ; ಕೊಲ್ಲುವುದು ಮತ್ತು ತಿನ್ನುವುದನ್ನು ಜೀವನದ ಅವಿಭಾಜ್ಯ ಭಾಗ ಮಾಡಿಕೊಂಡವರಿಗೆ ಹಿಂಸೆ, ಅಹಿಂಸೆಯ ವ್ಯತ್ಯಾಸವೇ ಮರೆಯಾಗುತ್ತದೆ. ಇದು ನನ್ನ ವೈಯಕ್ತಿಕ ಅನ್ನಿಸಿಕೆ. ಆದರೆ ಆರ್ಥಿಕ ಮುಖ ನೋಡಿ. ಒಂದು ಕೆ.ಜಿ. ಮಾಂಸ ರೂಪಿಸಲು ಒಂದು ಹಂದಿ ಅಥವಾ ಹಸು ಸುಮಾರು ನಲವತ್ತು ಕೆ.ಜಿ. ಧಾನ್ಯ ತಿನ್ನಬೇಕಾಗುತ್ತದೆ; ಆದರೆ ಮಾಂಸದ ಪೌಷ್ಟಿಕತೆ ಮಾತ್ರ ನಲವತ್ತರಷ್ಟು ಇರುವುದಿಲ್ಲ. ಅಂದರೆ ಮಾಂಸ ರೂಪಿಸುವ ಕ್ರಿಯೆಯಲ್ಲೇ ಆಹಾರ ಪೋಲಾಗಿರುತ್ತದೆ. ಆದ್ದರಿಂದ ಬರೀ ಸಸ್ಯಾಹಾರ ಬಳಸಿದರೆ ಈ ಲೋಕದ ಹತ್ತರಷ್ಟು ಜನಕ್ಕೆ ಆಹಾರ ಒದಗಿಸಬಹುದು. ಏರುತ್ತಿರುವ ಜನಸಂಖ್ಯೆಗೆ ನಾವು ಸಾಕಷ್ಟು ಆಹಾರ ಒದಗಿಸಬೇಕಾದರೆ ಸಸ್ಯಾಹಾರ ಜನಪ್ರಿಯವಾಗಬೇಕಾಗುತ್ತದೆ-ಇನ್ನು ಐವತ್ತು ವರ್ಷವಾದರೂ ಭಾರತವು ಹಸಿವಿನಿಂದ ಮುಕ್ತವಾಗಿರಬೇಕಾದರೆ ಸಸ್ಯಾಹಾರವೇ ಪರಿಹಾರ. ಆರೋಗ್ಯದ ದೃಷ್ಟಿಯಿಂದಲೂ ಸಸ್ಯಾಹಾರ ಒಳ್ಳೆಯದು.

ಮುದಿ ಹಸುಗಳಿಗೆ ಆಹಾರ ಕೊಡದೆ ಸಾಯಿಸುವುದಕ್ಕಿಂತ ಕೊಲ್ಲುವುದು ಮೇಲೆಂದು ಗಾಂಧೀಜಿಯೇ ಹೇಳುತ್ತಿದ್ದರು. ಬೀದಿ ನಾಯಿಗಳ ಬಗ್ಗೆಯೂ ಅದನ್ನೇ ಹೇಳಬಹುದು. ಒಮ್ಮೆ ನಾನು ಇದೇ ಅಂಕಣದಲ್ಲಿ ಹೇಳಿದಂತೆ ಭೂತಾನ್ ದೇಶದಲ್ಲಿ ಜನಸಂಖ್ಯೆಯಷ್ಟೇ ಬೀದಿನಾಯಿ, ಕಜ್ಜಿನಾಯಿ, ಹುಚ್ಚುನಾಯಿಗಳು ಗಲ್ಲಿಗಲ್ಲಿಗಳಲ್ಲಿ, ರಾಜಬೀದಿಗಳಲ್ಲಿ ಇವೆ. ಯಾಕೆ ಗೊತ್ತಾ-ಅಲ್ಲಿರುವ ಬೌದ್ಧರು ಅಹಿಂಸಾವಾದಿಗಳು!

-ಅಕ್ಟೋಬರ್ 20, 1993

ನಾಯಿ ಗುರೂಜಿ ಹಾಗೂ ಗುಂಡು

ಅಣಕ



▸ ಎಚ್.ಎಲ್. ಕೇಶವಮೂರ್ತಿ

ಛೇ ಹೀಗಾಗಬಾರದಿತ್ತು. ಶ್ರೀ ಶ್ರೀ ರವಿಶಂಕರ ಗುರೂಜಿ ಅಂದರೇನು-ಅಲ್ಲಿಗೆ ಬರುವ ಭಕ್ತರು ಎಂತಹವರು. ಪಾಪಿ ಪರದೇಶಿಗಳಲ್ಲ, ಉಡಿಪಡಿ ಜನ ಅಲ್ಲ, ಶ್ರೀಮಂತರು, ಬಿಳಿತೊಗಲ ಹೊತ್ತವರು! ಗುರೂಜಿ ಬೋಧಿಸುವ ಆಧ್ಯಾತ್ಮ ಎಂತಹ ಉನ್ನತಮಟ್ಟದ್ದು... ನಡೆಸುವ ಸತ್ಸಂಗ ಕಾರ್ಯಕ್ರಮ ಎಂತಹ ಆದರ್ಶದ್ದು.... ನೋಡೋಕೆ ಎರಡು ಕಣ್ಣು ಸಾಲದು, ಕೇಳೋಕೆ ಎರಡು ಕಿವಿ ಸಾಲದು, ವರ್ಣಿಸೋಕೆ ಇರೋ ನಾಲಿಗೆ ಸಾಲದು. ಇಂತಹ ಮಹಾತ್ಮರ ಮೇಲೆ ಯಾವುದೋ ದುಷ್ಕರ್ಮಿಗಳು ಗುಂಡು ಹಾರಿಸಿದರು ಅಂದರೆ.... ನ್ಯಾಯವಾಗಿ ನೋಡಿದರೆ ವಿಶ್ವಪ್ರಳಯಾನೇ ಆಗಬೇಕಾಗಿತ್ತು; ದೇಶಾದ್ಯಂತ ಏನು ಬಂತು ವಿಶ್ವದಾದ್ಯಂತ ದಿಗ್ಭ್ರಮೆ ಮೂಡಿಸಬೇಕಾಗಿತ್ತು, ಅವರಿಗೆಲ್ಲ ಅದು ಯಾವ ಮಂಕು ಬಡಿದಿತ್ತೋ ಏನೋ... ಏನೂ ನಡೆಯಲೇ ಇಲ್ಲ! ಅವರು ಹಾಳಾಗಲಿ ಅಂದರೆ ಗುರೂಜಿ ಅವರ ಪಾದತಳದಲ್ಲಿ ಕುಳಿತ ಭಕ್ತವೃಂದ ಇತ್ತಲ್ಲಾ ಅವರಾದರೂ ಕಳವಳ ವ್ಯಕ್ತಪಡಿಸಿಬಾರದಾ.... ಉಹುಂ. ತುಟಿ ಎರಡು ಮಾಡಲೇ ಇಲ್ಲ! ಆ ತಾಯಿ ಚಾಮುಂಡೇಶ್ವರಿಯಾದರೂ ಜನರ ದಿವ್ಯಮೌನ ಕಿತ್ತೊಗೆಯಬಾರದಾ... ಅಮ್ಮನವರ ಸಾನಿಧ್ಯಕ್ಕೆ ಗುರೂಜಿ ಅವರು ದಯಮಾಡಿಸಿ ದಸರಾ ಉತ್ಸವದ ಉದ್ಘಾಟನೆ ಮಾಡಿದ್ದನ್ನೆ ಮರೆತೇಬಿಟ್ಟಳೇ ಆ ತಾಯಿ.... ಅಲ್ಲೇನೋ ಬಿಳಿ ತೊಗಲಿನ ಹುಡುಗಹುಡುಗಿಯರು ಅರೆನಗ್ನ ನೃತ್ಯ ಮಾಡಿ ಸ್ಥಳೀಯ ಭಕ್ತರಿಂದ ಥೂ, ಛೀ ಎಂಬಂತಹ ಪದಪುಂಜಗಳಿಂದ ಅಭಿಷೇಕ ಮಾಡಿಸಿಕೊಂಡಿದ್ದರು ನಿಜ. ಅದು ಹದಿಹರೆಯದ ಭಕ್ತರ ಭಕ್ತಿಪರಾಕಾಷ್ಠೆಯ ಕುರುಹೇ ಪರಂತು ಅಶ್ಲೀಲ ಕುಣಿತ ಅಲ್ಲ ಎಂದು ಅರಿಯಳೇ ಆ ತಾಯಿ.... ಅವಳೂ ಕೈಬಿಟ್ಟಳು! ಭೂಮಿ ಮೇಲಿನ ಭಗವಂತನ ಮೇಲೆ ಗುಂಡಿನ ದಾಳಿ ನಡೆದರೂ ಜೀವನ ತಲ್ಲಣಕ್ಕೊಳಗಾಗುವುದಂತಿರಲಿ ನಿತ್ಯದಂತೆ, ಏನೂ ನಡೆದೇ ಇಲ್ಲ ಎನ್ನುವಂತೆ ಸಹಜವಾಗೇ ಇತ್ತು ಅಂದರೆ...

ಆದರೆ ಒಂದು ಜನಜೀವನದ ಮೇಲೆ ಗುರೂಜಿ ಮೇಲಿನ ಗುಂಡು ಯಾವ ಪರಿಣಾಮ ಬೀರದಿದ್ದರೂ ಜನಪ್ರತಿನಿಧಿ ಇದ್ದಾರಲ್ಲ.... ಯಡ್ಯೂರಪ್ಪನವರಿಗೆ ಇದು ದೈವೀಕ ವೇದನೆಯನ್ನು ತಂದಿತು. ವಿಷಯ ತಿಳಿದ ತಕ್ಷಣ ಹಾರಿಹೋಗಿ ಧೈರ್ಯ ತುಂಬಿದರು. ಯಾರಿಗೆ? ಜೀವನವನ್ನು ಹೇಗೆ ಎದುರಿಸಬೇಕು ಎಂದು ಬೋಧಿಸುವುದನ್ನೇ ಆದ್ಯತೆಯನ್ನಾಗಿರಿಸಿಕೊಂಡ ಗುರೂಜಿಗೆ! 'ಭಯ ಬೀಳಬೇಡಿ ನಿಮಗೆ ಹೆಚ್ಚಿನ ಭದ್ರತೆ ನೀಡುತ್ತೇನೆ' ಎಂಬ ಆಶ್ವಾಸನೆಯನ್ನೂ ನೀಡಿದರು. ಮಠಗಳು ಸೃಷ್ಟಿಯಾಗುತ್ತಿರುವ ಬಿರುಸು ನೋಡಿದರೆ ರಾಜ್ಯದ ಪೊಲೀಸ್ ಪಡೆ ಎಲ್ಲ ಮಠಾಧೀಶರ ರಕ್ಷಣೆಗೇ ನಿಲ್ಲಬೇಕಾಗಬಹುದು ಎಂಬ ಮಾತು ಸತ್ಯ ಇದ್ದರೂ ಇರಬಹುದು. ಮುಖ್ಯಮಂತ್ರಿ ಆದವರಿಗೆ ಮಠಾಧೀಶರ ರಕ್ಷಣೆಯ ಆದ್ಯತೆಯ ಅರಿವಿತ್ತಲ್ಲಾ ಅದಕ್ಕೇ ಹಂಗಂದ್ರು. ಆದರೆ ಗುರೂಜಿ ಅವರದ್ದು ಎಂತಹ ಸಾತ್ವಿಕ ವ್ಯಕ್ತಿತ್ವ ಅಂತೀರಿ. 'ನಿಮ್ಮ ಭದ್ರತೆ ಅವಶ್ಯಕತೆ ನಮಗಿಲ್ಲ' ಅಂದರು!

ಅರೆರೆ ಇದೇನು ಮಾತು ಇದು. ಸುತ್ತ ಗುರೂಜಿ ಕಂಡರೆ ಕೆಂಡ ಕಾರುವವರೇ ತುಂಬಿಕೊಂಡು ಕುಂತವ್ರೆ. ರಕ್ಷಣೆಗೆ ಯಾರೂ ಇಲ್ಲ ಅಂದ್ರೆ ಬುಟ್ತಾರ ಬುಟ್ತಾರ... ಕೈಮಾ ಕೈಮಾ ಮಾಡಾಕ್ತಾರೆ ಎಂದೆಲ್ಲ ಚಿಂತಿಸಬೇಕಲ್ಲ. ಗುರೂಜಿ ರಕ್ಷಣೆ ಬೇಡ ಅಂದ್ರು ಅಂದ್ರೆ ಅದು ಇಲ್ಲದೆ ಇರಬಲ್ಲೆ ಅಂತ ಅಲ್ಲ, ಪೊಲೀಸರ ರಕ್ಷಣೆ ಬೇಡ ಅಂದ್ರು ಅಷ್ಟೆ. ಅವರು ನೀಡುವ ರಕ್ಷಣೆಯಾದರೂ ಎಷ್ಟು ಸುರಕ್ಷಿತ? ಇಂದಿರಾಗಾಂಧಿಗೂ ರಕ್ಷಣೆ ಇತ್ತಪ್ಪ ಕೊನೆಗೆ ಏನಾಯಿತು? ರಕ್ಷಣೆಗೆ ನೇಮಕ ಆಗಿದ್ದವರೇ ಗುಂಡು ಹಾಕಿ ಸಾಯಿಸಿದರು. ಆರ್ಟ್ ಆಫ್ ಲಿವಿಂಗ್‌ನ ಅರೆದು ಕುಡಿದಿರೋರ್‍ಗೆ ಇದು ತಿಳೀದ ವಿಷಯವೇನೂ ಅಲ್ಲ, ಅದಕ್ಕೇ 'ಆಶ್ರಮ ವಾಸಿಗಳೇ ರಕ್ಷಣೆ ನೀಡ್ತಾರೆ' ಅಂದ್ರು.

ಅಯ್ಯೋ ರಾಮನೆ. ಇದೆಂಗಾಯ್ತದಪ್ಪ, ಗುರೂಜಿ ಮುಗಿಸಬೇಕೂಂತ ಇರೋವು ಮಾಂಸಮಡ್ಡಿ ತಿಂದು ದೈತ್ಯಾಕಾರವಾಗಿ ಬೆಳೆದು ನಿಂತಿರೋವು. ಆಶ್ರಮವಾಸಿಗಳು ಅಂದರೆ ಸಪ್ಪೆ ಸೊಪ್ಪು ಸದೆ ತಿಂದು ಬದುಕ್ತಿರೊವು. ಆ ಮುಂಡೇಮಕ್ಕಳ ಎದುರು ಗುರೂಜಿಗೆ ರಕ್ಷಣೆ ಒದಗಿಸೋಕೆ ಎಲ್ಲಾದರೂ ಸಾಧ್ಯನ. ಅದಕ್ಕೇನಿದ್ರೂ ಗೂಂಡಾಗಳೇ ಸರಿ ಎಂದೆಲ್ಲ ಭಾವುಕರಾಗಬೇಕಾದದ್ದಿಲ್ಲ. ಅವರು ಗೂಂಡಾಗಳಾದ್ರೆ ಇವರೂ ಗೂಂಡಾಗಳೇ ಅಂತೆ. ಅವರು ಊರ ಗೂಂಡಾಗಳಾದ್ರೆ ಇವರು ಆಶ್ರಮವಾಸಿ ಗೂಂಡಾಗಳು ಅಷ್ಟೆ!

ಆಶ್ರಮದಲ್ಲಿ ಗೂಂಡಾಪಡೆ ಇರುವುದು ತರವಲ್ಲ ಅನ್ನಬೇಕಿಲ್ಲ, ಮುಳ್ಳನ್ನು ಮುಳ್ಳಿನಿಂದಲೇ ತೆಗೆಯಬೇಕು. ಗೂಂಡಾಗಳನ್ನು ಎದುರಿಸಲು ಗೂಂಡಾಗಳೇ ಬೇಕು. ಇದು ಆರ್ಟ್ ಆಫ್ ಲಿವಿಂಗ್!

ಗುಂಡನ್ನೇನೋ ಯಾರೋ ಸಾವಿರದ ಇನ್ನೂರೋ ಮುನ್ನೂರೋ ಅಡಿ ದೂರದಿಂದ ಹಾರಿಸಿದ್ದರಂತೆ. ಇದು ಭರ್ಜರಿ ಸುದ್ದಿ ಆಯಿತು. ಜನ ಮೌನವಾಗಿದ್ದಾರೆ ಎಂದು ಬಿಜೆಪಿ ಸರ್ಕಾರಾನೂ ಸುಮ್ಮನಿರಕ್ಕಾಗುತ್ತಾ...... ಅದೂ ಗುರೂಜಿ ಮೇಲೆ ಗುಂಡು ಹಾರಿದೆ ಎಂದಾಗ. 'ತನಿಖೆ ನಡೆಸ್ತಿವಿ ಭಯೋತ್ಪಾದಕರ ಹುಟ್ಟಡಗಿಸ್ತೀವಿ' ಎಂದು ಸಾರಿತು ಸರ್ಕಾರ ಅನ್ನೋದು. ಗುರೂಜಿಗೆ ಏನೂ ಅನ್ನಿಸಿತೋ ಏನೋ. 'ಅಪರಾಧೀನ ಸತ್ಸಂಗ ಸೇರಿಸಿಕೊಂಡು ಸತ್ಪ್ರಜೆ ಮಾಡ್ತೀನಿ ಅಂದ್ರು, 'ತನಿಖೆ ಅವಶ್ಯಕತೆ ಇಲ್ಲ' ಅಂತಾನು ಬಡ್ಕೊಂಡರು. ಗುರೂಜಿ ಒಳಮನಸ್ಸಿನ ವಿರುದ್ಧವಾಗಿ ತನಿಖೆ ಮಾಡ್ಸೇ ಬುಡ್ತು ಸರ್ಕಾರ!

ಆಮೇಲೆ ಗುಂಡಿನ ಸಮಾಚಾರ ಏನಾಯ್ತು ಅಂತೀರಿ... ಗುರೂಜಿ ಗುರಿಯಿಟ್ಟೇ ಗುಂಡು ಹಾರಿಸಿದ್ದರು. ಅವರು ದೈವೀಶಕ್ತಿಯ ಪ್ರಭಾವದಿಂದ ಅದನ್ನು ತಡೆದರು ಅಂತೆಲ್ಲ ಸುದ್ದಿ ಪ್ರಚಾರ ಆಗಿತ್ತಲ್ಲಾ... ದೇವೀಶಕ್ತಿ ಪಾಪಿ ಪೊಲೀಸಿನವರ ಕಣ್ಣಿಗೆ ಗೋಚರಿಸುತ್ತಾ... ಅದೇನಿದ್ರೂ ಭಕ್ತರಿಗೆ ಮೀಸಲು! ಅದಕ್ಕೇ ಏನೋ ತನಿಖೇಲಿ ಯಾರೋ ನಾಯಿಗಳನ್ನ ಅದೂ ಸೀಮೆನಾಯಿಗಳನ್ನಲ್ಲ ಕಜ್ಜಿನಾಯಿಗಳನ್ನ ಬೆದರಿಸಲು ಹಾರಿಸಿದ ಗುಂಡಾಗಿ ಕಾಣಿಸಿಕೊಂಡಿತು. ಆಹಾ... ಕಜ್ಜಿನಾಯಿಗಳಿಗೆ ಹಾರಿಸಿದ ಗುಂಡು ಹುಡುಕಿಕೊಂಡು ಗುರೂಜಿ ಬಳಿಗೆ ಹೋಗುವುದರಲ್ಲಿತ್ತಲ್ಲಾ.. ಗುರೂಜಿಗೆ ದೈವೀಶಕ್ತಿ ಇಲ್ಲದಿದ್ದಲ್ಲಿ....



ಈ ಸಮಾವೇಶದ ಉದ್ದೇಶ ಏನು?

ರೈತರ ಮಕ್ಕಳಿಗೆ ಉದ್ಯೋಗ ಕಲ್ಪಿಸುವುದು!

Best joke of the year ಅನ್ನಬೇಕಿಲ್ಲ, ಇದನ್ನು ಹೇಳಿದ್ದು ನಾನಲ್ಲ, ಸನ್ಮಾನ್ಯ ಮುಖ್ಯಮಂತ್ರಿಗಳು!

ಅದೆಷ್ಟೋ ಕೋಟಿ ಹಣ ಬಂದು ಸುರೀತದೆ ಅಂದ್ರು ಸರ್ಕಾರದೋರು. ಅದನ್ನೇ ಸುದ್ದಿ ಮಾಡಿದರು ಮಾಧ್ಯಮದವರು. ಮಾಡಬೇಕಾದ್ದು ಕರ್ತವ್ಯ ಬಿಡಿ, 'ಹಣದ ವ್ಯವಹಾರ' ನೋಡಿ!

ಹಣ ಬಂತು. ಉದ್ಯೋಗ?

ಅದೂ ಸೃಷ್ಟಿಯಾಗುತ್ತಂತೆ. ಎಷ್ಟು ಅಂತೀರಿ. ಏಳು ಲಕ್ಷದಿಂದ ಹನ್ನೆರಡು ಲಕ್ಷದವರೆಗೂ ಹರಿದಾಡುತ್ತೆ... ಊಹೆಗೆ ತಕ್ಕಂತೆ!

ವಿರೋಧ ಪಕ್ಷದವರಿಗೆ ಇದು ಒಪ್ಪಿಗೆಯಿಲ್ಲ, ಇಷ್ಟೊಂದು ಕೈಗಾರಿಕೆ ಸ್ಥಾಪಿಸಲು ಭೂಮಿ ಎಲ್ಲಿದೆ? ರೈತರು ಭೂಮಿ ಕಳೆದುಕೊಳ್ಳಲು ಇಚ್ಛಿಸುವುದಿಲ್ಲ ಎನ್ನುವುದು ಅವರ ಆಕ್ಷೇಪ.

ಇದೂ ಸತ್ಯ ಇರಬಹುದು.

ಭೂಮಿ ಇದೆ. ಒಡೆಯ ಕೊಡ.

ಇದಕ್ಕೇನು ಪರಿಹಾರ?

ಭೂಒಡೆಯ ಆಕ್ಷೇಪ ಎತ್ತಲೇ ಆಗದಂತ ಕೈಗಾರಿಕೆಗಳ ಸ್ಥಾಪನೆ!

ಅಂತಹದ್ದು ಇದೆಯ ಎಂದರೆ ಖಂಡಿತವಾಗಿಯೂ ಇದೆ. ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಹಲವಾರು ಕೈಗಾರಿಕೆಗಳನ್ನು ಕುರಿತು ಚರ್ಚೆ ನಡೆಸಿದೆ. ಸರ್ಕಾರ ಅದರಲ್ಲೂ ಭಾಜಪ ಸರ್ಕಾರ ಒಂದನ್ನು ಬಿಟ್ಟಿರುವುದು ದುರಂತವೇ ಸರಿ.

ಯಾವುದು ಆ ಕೈಗಾರಿಕೆ?

ದೈವ ಕೈಗಾರಿಕೆ! ಅಂದರೆ ಹೈಟೆಕ್ ದೇವಾಲಯಗಳ ನಿರ್ಮಾಣ!

ಕಾಡುಮೇಡು, ಬಯಲುಗಿಯಲು, ರಸ್ತೆ ಚರಂಡಿ ಎಲ್ಲೆಂದರಲ್ಲಿ ದೇವಾಲಯ ನಿರ್ಮಿಸುವ ಹಕ್ಕು ಎಲ್ಲರಿಗೂ ಇದೆ! ಸರ್ಕಾರಿ, ಖಾಸಗಿ ಆಸ್ತಿ ಎನ್ನುವ ಭೇದ ಭಾವ ಇಲ್ಲ, ಎಲ್ಲಿ ಬೇಕಾದರೂ ನಿರ್ಮಿಸಬಹುದು. ತಂಟೆಕೋರರಿಗೆ ಸಾರ್ವಜನಿಕರೇ ಸದ್ಬುದ್ಧಿ ಕಲಿಸುವರು!

ಪುಣ್ಯಕ್ಕೆ ಪುಣ್ಯ; ಹಣಕ್ಕೆ ಹಣ!

ಇಂತಹ ಸಮೃದ್ಧ ಕೈಗಾರಿಕೆ ಬೇರೆ ಉಂಟೆ?

ದುರಂತ ಎಂದರೆ ಭಾಜಪದಂತ ಭಾಜಪ ಸರ್ಕಾರವೇ ಇದನ್ನು ಮರೆತಿರುವುದು!

ದೇವ ಕೈಗಾರಿಕೆ

ಜಾಗತಿಕ ಹೂಡಿಕೆದಾರರ ಸಮಾವೇಶ ನಡೆಯಿತು.

ಯಡ್ಯೂರಪ್ಪನವರದ್ದೇ ಪ್ರಮುಖ ಪಾತ್ರ. ಪಾತ್ರಕ್ಕೆ ತಕ್ಕಂತಹ ವೇಷ ಇರಬೇಕು ಅನ್ನುವುದು ಭಾಜಪದ ಸ್ವದೇಶಿ ಮಂತ್ರ ಇರಬೇಕು. ಸೂಟುಧಾರಿಗಳ ಮಧ್ಯೆ ಸೂಟುಧಾರಿಯಾಗೇ ಶೋಭಿಸುತ್ತಿದ್ದರು!

ಅದಲ್ಲ ವಿಷಯ.

ಲೂಟೀ ಸ್ವಾಮಿ



ರಾಮಚಂದ್ರಾಪುರ ಮಠದ ಸಗಣಿಸ್ವಾಮಿಯು ಮಂಗಳೂರಿನಲ್ಲಿ ಅನಾಥಾಶ್ರಮವನ್ನು ಕಾನೂನುಬಾಹಿರವಾಗಿ ನುಂಗಿದ ವರದಿಯನ್ನು, ಆಧಾರ ಮತ್ತು ದಾಖಲೆ ಸಹಿತವಾಗಿ ನಿಮ್ಮ ಪತ್ರಿಕೆಯಲ್ಲಿ ಪ್ರಕಟಿಸಿದ್ದಕ್ಕೆ ತುಂಬಾ ಧನ್ಯವಾದಗಳು. ಈವರೆಗೂ ದೇವರು, ಧರ್ಮದ ಹೆಸರಲ್ಲಿ ಜನರನ್ನು ಮರಳುಮಾಡಿ ಹಿಂದೂ ಧರ್ಮದ ಉದ್ಧಾರ ಮತ್ತು ಅಭಿವೃದ್ಧಿಯ ಕನಸನ್ನು ಅಮಾಯಕ ಜನರಲ್ಲಿ ಬಿತ್ತಿ ಅವರನ್ನು ವಂಚಿಸಿ ಹಗಲು ಲೂಟಿಮಾಡುವುದನ್ನೇ ಕಾಯಕವನ್ನಾಗಿ ಮಾಡಿಕೊಂಡ ಈ ಗೋಮುಖ ವ್ಯಾಘ್ರ ಸ್ವಾಮಿಯ ಇನ್ನಷ್ಟು ಅಕ್ರಮ ಭೂಕಬಳಿಕೆಯ ಪ್ರಕರಣಗಳು ನಿಮ್ಮ ಪತ್ರಿಕೆಯ ಮುಖಾಂತರ ಹೊರಬರಲಿ.

- ರಕ್ಷಣಾ ಸಮಿತಿ ಗೋಕರ್ಣ

ಮೇ 26ರ ಸಂಚಿಕೆಯಲ್ಲಿ ಬಂದ 'ಮಠದ ಗೂಳಿಯ ಮರಣದಂಡನೆ ಪ್ರಸಂಗ' ಬಹಳ ಸೊಗಸಾಗಿದೆ. ಜೆರಾಕ್ಸ್ ಮಾಡಿಸಿ ನಮ್ಮ ಊರಿನ ಭಜರಂಗಿ ಮತ್ತು ಚೆಡ್ಡಿ ಹುಡುಗರಿಗೆ ಹಂಚಿಸೋಣ ಎನ್ನುವ ಮನದಾಸೆ. ಅದೇ ಸಂಚಿಕೆಯಲ್ಲಿ ಲಂಕೇಶರ ಮರೆಯುವ ಮುನ್ನದ 'ನಂಬಿದವರನ್ನು ವಂಚಿಸಕೂಡದು' ಕಾಲಂ ಮತ್ತೆಮತ್ತೆ ಓದಿ ಚಿಂತಿಸುವಂತೆ ಮಾಡಿದೆ.

ಪವಿತ್ರ ವೆಂಕಟೇಶ್ **forward** ಮಾಡಿದ ನಿಮ್ಮ ಮೆಸೇಜ್‌ನಂತೆ ಶಿವಮೊಗ್ಗದಲ್ಲಿ 'ಪೃಥ್ವಿ' ಸಿನಿಮಾ ನೋಡಿದೆ. ಸಿನಿಮಾ ಚೆನ್ನಾಗಿದೆ. ಆದರೆ ಕ್ಲೈಮ್ಯಾಕ್ಸ್ ತುಂಬಾ ಅವಸರದಲ್ಲಿ ಮತ್ತು ನಿರ್ದೇಶಕರ ಮೂಲ ಆಶಯದಂತೆ ಆಗಿಲ್ಲವೇನೋ ಅನ್ನಿಸಿತು. ಕಮರ್ಷಿಯಲ್ ಸಿನಿಮಾದ ಮಿತಿ ಕೂಡ ಇಷ್ಟೇ ಅನ್ನಿಸಿತು. ಒಂದು ಡಾಕ್ಯುಮೆಂಟರಿ ತರ ಆಗಬಹುದನ್ನು ತಪ್ಪಿಸಿ ನೋಡಬಹುದಾದ ಸಿನಿಮಾ ಮಾಡಿದ್ದಾರೆ. ಪುನಿತ್ ನಟನೆಯಲ್ಲಿ ಪ್ರಬುದ್ಧತೆ ಮತ್ತು ಬದಲಾವಣೆ ಇಷ್ಟವಾಗುತ್ತೆ.

ಡಾ. ಜೆ.ಸಿ. ಶರತ್, ತರೀಕೆರೆ

ಹೊಗಳಿಕೆ ತೆಗಳಿಕೆ


ರಾಜಕಾರಣಿಗಳ 'ಬಣ್ಣ' ದಿನೇದಿನೇ ಬಯಲಾಗುತ್ತಿದೆ. ಎಲ್ಲಾ ಪಕ್ಷಗಳೂ ಪೈಪೋಟಿಗೇ ಇಳಿದು 'ಗುಳುಂ' ಎನ್ನಿಸಿರುವ ಕೋಟಿ ಕೋಟಿ ರೂಪಾಯಿಗಳಿಗೆ ಲೆಕ್ಕವೇ ಇಲ್ಲದಂತಾಗಿದೆ. ನೆರೆಸಂತ್ರಸ್ತರಿಗೆ ಈವರೆಗೂ ಮನೆ ಕಟ್ಟಿಕೊಡದೇ ಕೆಸರೆರಚಬೇಕೆಂದು ರಾಜಧಾನಿಯಲ್ಲಿ ಪ್ರೆಸ್‌ಮೀಟ್‌ಗಳನ್ನು ಮಾಡುತ್ತಾ ದಿನ ಕಳೆಯುತ್ತಿರುವ ನಾಗರಹಾವಿಗಿಂತಲೂ ಭಯಂಕರ ವಿಷಸರ್ಪಗಳು ಕರ್ನಾಟಕದ ರೈತಸಮುದಾಯವನ್ನು ಪದೇಪದೇ ವಂಚಿಸುತ್ತಿವೆ. ಇತ್ತ ಬಿಜೆಪಿ ಸರ್ಕಾರ ಮುಂದಿನ ವರ್ಷಗಳ ಕರ್ನಾಟಕದ ಬಜೆಟ್‌ಗಳನ್ನೂ ಬಿಕರಿ ಮಾಡಿಕೊಂಡಿದೆ! ಎಫ್‌ಡಿಐಗೆ ಮಿತಿಗಳಿವೆ. ವ್ಯಾಪಾರಸ್ಥರಿಗೆ ಕರ್ನಾಟಕವನ್ನು ನೋಡನೋಡುತ್ತಿದ್ದಂತೆಯೇ ಮಾರಾಟ ಮಾಡಿಕೊಂಡರು. 'ಹಣ'ವೊಂದೇ ಎಲ್ಲವನ್ನೂ ಕಂಡುಕೊಳ್ಳುವ ಶಕ್ತಿ ಅಂತ ಈ ಕ್ರಿಮಿಗಳು, ಬಾಯಿಬಡುಕ ಬಕಾಸುರರು ಒಂದೇಸಮನೆ ಕಂಡಕಂಡಲೆಲ್ಲಾ ನುಂಗುತ್ತಿದ್ದಾರೆ. ಸರ್ಕಾರ ಸಾರ್ವಜನಿಕ ಹಿತಾಸಕ್ತಿ ಮರೆತು ಮೆರೆಯುತ್ತಿದ್ದರೆ, ವಿರೋಧಪಕ್ಷಗಳು ನಾವೇನು ಕಮ್ಮಿಯೇ ಅಂತ ನುಂಗುತ್ತಿದ್ದಾರೆ.

ಮತ್ತೊಂದು ಮಳೆಯಾದರೆ ತಾತ್ಕಾಲಿಕ ಶೆಡ್‌ಗಳೂ ಕಳಚಿ ಬೀಳಲಿವೆ. ನೆರೆಸಂತ್ರಸ್ತರ ಬದುಕು ಮತ್ತಷ್ಟು ಅಸಹನೀಯವಾಗುತ್ತದೆ. ಮೂಲಭೂತ ಸೌಕರ್ಯಗಳನ್ನು ಕಲ್ಪಿಸದೇ ಪದೇಪದೇ ಹಣ ಖಾಲಿ ಮಾಡಿಕೊಂಡು 'ಭವತಿ ಭಿಕ್ಷಾಂದೇಹಿ' ಅಂತ ಸರ್ಕಾರ ಹೊರಟದ್ದು ಬ್ಯುಸಿನೆಸ್‌ಮ್ಯಾನ್‌ಗಳ ಹಿಂದೆ. ಬಂಡವಾಳಶಾಹಿಗಳಿಗೆ ನ್ಯಾಯ, ನಿಯತ್ತು-ಮಾನವೀಯತೆ ಸಮುದಾಯದ ಹಿತ ಇವೆಲ್ಲಾ ಅವರ ಬದುಕಿನ **dictionary** ಗಳಲ್ಲಿ ಸಿಗದೇ ಹೋಗುವ **definition** ಗಳು. ತೀರಾ ಹೊಟ್ಟೆಪಾಡಿಗಾಗಿ ವೇಶ್ಯೆಯರು ತಮ್ಮ ಮೈಮಾರಿಕೊಂಡು ಬದುಕುತ್ತಾರೆ. ಆದರೆ ಈ ಮೂರುಬಿಟ್ಟ ಬಿಕನಾಸಿಗಳಿಗೆ ಅನ್ನವಿಟ್ಟ ರೈತನ ಕನಸನ್ನೇ-ಬದುಕನ್ನೇ ಬಿಕರಿಗಿಟ್ಟಿದ್ದಾರೆ. ಉತ್ತರ ಕರ್ನಾಟಕದ ನೆರೆಸಂತ್ರಸ್ತರು ಎಲೆ ಅಡಿಕೆ ಹಾಕಿಕೊಂಡು ಸಾಲಾಗಿ ನಿಂತು ಕ್ಯಾಕರಿಸಿ ಈ ಮುಂಡೇ ಮಕ್ಕಳಿಗೆ ಉಗಿಯಲೇಬೇಕಾಗಿದೆ.

ಇಲ್ಲದಿದ್ದರೆ ಈ ಲಜ್ಜೆಗೇಡಿ ಖತರ್‌ನಾಕ್ ವಿಷಜಂತುಗಳು ಮತ್ತೆ ಮತ್ತೆ ಹೊಂಚು ಹಾಕುತ್ತವೆ-ವೇಷ ಬದಲಿಸಿ ಥಕಧಿಮಿತ ಕುಣಿತಲೇ ಇರ್ತಾವೆ!

-ವಿದ್ಯಾ. ಕೊಟಬಾಗಿ. ಬೆಂಗಳೂರು

ಲೂಸ್ ಮಾದನ ಕನಸು ಭಗ್ನ?


ಕಾರ್ತಿಕ್

...ನ್ನ ಕನಸಿನ ಹುಡುಗಿ ರಮ್ಯಾ ಜೊತೆ ಹೀರೋ ...ನಟಿಸಲು ಲೂಸ್ ಮಾದ ಹಠ ಹಿಡಿದಿದ್ದಾನೆ. ಸದ್ಯ ...ನ ಓಮನ್‌ನಲ್ಲಿ ಚಿತ್ರೀಕರಣದಲ್ಲಿರುವ ರಮ್ಯಾ ...ಬೆಂಗಳೂರಿಗೆ ಬಂದಕೂಡಲೇ 'ಲೂಸು' ಜೊತೆ ...ನಿ ಎಂದು ಗ್ರೀನ್ ಸಿಗ್ನಲ್ ನೀಡಿದ್ದಾಳೆ.

...ಳೆದವಾರ 'ಲಂಕೇಶ್'ನಲ್ಲಿ 'ಯೋಗೀಶ್ ಮತ್ತು ... 'ಲೂಸ್ ಮಾದ' ಅನ್ನೋ ಚಿತ್ರದಲ್ಲಿ ಒಟ್ಟಾಗಿ ...ತ್ತಿದ್ದಾರೆ' ಎಂಬ ಪುಟ್ಟ ಟಿಪ್ಪಣಿ ಕೂಡಾ ಪ್ರಕಟ ...ತ್ತು.

...ಗ ಅದೇ ಸಿನಿಮಾದ ವಿಚಾರ ...ದಕ್ಕೆ ಸಿಲುಕಿ ದೊಡ್ಡ ರಾದ್ಧಾಂತ ...ವ ಹಂತಕ್ಕೆ ಬಂದು ನಿಂತಿದೆ.



...ಮೂರು ವರ್ಷಗಳ ಹಿಂದೆ ನಟಿ ... ಮೆನನ್‌ಳ ಅಣ್ಣ ಮನೋಜ್ ...ಕ್ ನಾಯಕ ನಟನಾಗಬೇಕಿದ್ದ ...ಮಾರ' ಎಂಬ ಸಿನಿಮಾ ಸೆಟ್ಟೇರಿತ್ತು. ...ಂಟ್ ಗ್ರೂಪ್‌ನ ಹಣದ ಋಳ ... ರಾಯ್ ಆ ಚಿತ್ರದ ನಿರ್ಮಾಪಕ ...ದ್ದರು. ಕೇರಳದಲ್ಲಿ ದೊಡ್ಡ ಹೆಸರು ...ರುವ ರಾಜಸೇನನ್ ಈ ಚಿತ್ರವನ್ನು ನಿರ್ದೇಶಿಸ ...ತ್ತು. ಮಲಯಾಳಂನಲ್ಲಿ ಮೂವತ್ಮೂರು ಚಿತ್ರಗಳನ್ನು ...ಶಿಸಿರುವ ರಾಜಸೇನನ್ ಅವರ ಇಪ್ಪತ್ತೆಂಟು ...ಗಳು ಸೂಪರ್ ಹಿಟ್ ಆಗಿವೆ. ಮಲಯಾಳಂನ ... ನಟ ಜಯರಾಮ್ ಅವರ ೧೮ ಸಿನಿಮಾಗಳನ್ನು ...ಜಸೇನನ್ ನಿರ್ದೇಶಿಸಿದ್ದಾರೆ.

...ಂಥ ರಾಜಸೇನನ್‌ಗೂ, ನಿರ್ಮಾಪಕ ರಾಯ್‌ಗೂ ...ಲ್ ಎಸ್ಟೇಟ್ ವ್ಯವಹಾರದಲ್ಲಿ ಅದೇನೋ ...ಯಾಗಿದ್ದರಿಂದ ಮುಹೂರ್ತವಾದ ಮೇಲೆ ... ನಿಂತುಹೋಗಿತ್ತು. ಅಷ್ಟೊತ್ತಿಗಾಗಲೇ ಆ ...ಮ್ಯೂಸಿಕ್, ಹಾಡುಗಳೆಲ್ಲಾ ರೆಡಿಯಾಗಿದ್ದವು. ...ತ್ರದಲ್ಲಿ ಅವಕಾಶ ಸಿಕ್ಕ ಉದ್ವೇಗದಲ್ಲಿ ...ನಾಯಕನಟ ಮನೋಜ್ ...ಸೆಂಟ್ರಲ್ ಎಕ್ಸೈಸ್‌ನ ...ಸರ್ಕಾರದ ಹುದ್ದೆಗೆ ...ನಾಮೆ ಕೊಟ್ಟು ... ಸಿನಿಮಾ ದಿಢೀ...ತುಹೋದ ಕಾರಣ ...ಕಾರ್ತಿಕ್ ಕುಸಿದಿದ್ದ. ...ಗೆ ಅನ್ಯಾಯವಾಗಿದೆ ...ಕಾರಣಕ್ಕೆ ನಿರ್ಮಾಪಕ ... ಆ ಚಿತ್ರದ ಕಥೆ ಸೇರಿ ...ನಿ ಮುದ್ರಿಕೆಗಳ ಹಕ್ಕನ್ನೂ ...ಹೆಸರಿಗೇ ಬರೆದುಕೊಟ್ಟ ... "ಇದನ್ನು ಇಟ್ಟುಕೊಂಡು ಮೂಲಕವಾದರೂ ನೀನೇ ಮುಂದುವರೆಸಿಕೋ" ಎಂದು ...ಕೈತೊಳೆದುಕೊಂಡಿದ್ದರು.


ನಂತರ ಯು-2 ವಾಹಿನಿಯಲ್ಲಿ ನಿರೂಪಕನಾಗಿ ಮುಂದುವರೆದ ಕಾರ್ತಿಕ್ ಹೇಗಾದರೂ ಮಾಡಿ ಈ ಸಿನಿಮಾವನ್ನು ಮುಂದುವರೆಸಬೇಕು ಎಂದು ತಾನೇ ಸಿನಿಮಾ ಮಾಡಲು ಮುಂದಾಗಿದ್ದ. ಒಂದಷ್ಟು ಕಲಾವಿದರಿಗೆ ಅಡ್ವಾನ್ಸ್ ನೀಡಿ ಇನ್ನೇನು ಸಿನಿಮಾ ಆರಂಭಿಸಲು ಪ್ಲಾನು ಮಾಡಿದ್ದ. ಈ ಚಿತ್ರದಲ್ಲಿ ನಟಿಸುವ ಆಸೆಯಿಂದ ಊಟ ತಿಂಡಿ ಬಿಟ್ಟು, ಹಗಲೂರಾತ್ರಿ ಕಸರತ್ತು ಮಾಡಿ ಮೈ ಹುರಿಗೊಳಿಸಿಕೊಂಡಿದ್ದ.

ಆದರೆ ಈಗ ಅದೇ ಚಿತ್ರವನ್ನು ನಿರ್ದೇಶಕ ಪ್ರಕಾಶ್‌ರಾಜ್ ಮೆಹೂ ಲೂಸ್ ಮಾದನಿಗಾಗಿ ನಿರ್ದೇಶಿಸಲು ಮುಂದಾಗಿದ್ದಾರೆ. ಇನ್ನೂ ಬಿಡುಗಡೆಯಾಗದ 'ಒಂದೇ ಒಂದು ಸಾರಿ' ಮತ್ತು 'ಏಕಮೇವ' ಎಂಬೆರಡು ಚಿತ್ರಗಳನ್ನು ನಿರ್ಮಿಸಿರುವ ಮಂಗಳೂರಿನ ಪ್ರವೀಣ್ ಕುಮಾರ್ ಕೊಂಚಾಡಿ ಈ ಸಿನಿಮಾವನ್ನು ನಿರ್ಮಿಸುತ್ತಿದ್ದಾರೆ.

ಅಸಲಿಗೆ ಮೆಹೂ ಈ ಚಿತ್ರದ ಹಕ್ಕನ್ನು ಇನ್ನೂ ಕಾರ್ತಿಕ್‌ನಿಂದ ಪಡೆದೇ ಇಲ್ಲ. ಅದಕ್ಕೆ ಮುನ್ನವೇ ಲೂಸ್ ಮಾದ, ರಮ್ಯಾರ ಕಾಲ್‌ಶೀಟ್‌ಗಳನ್ನು ಪಡೆದು ಎಲ್ಲ ಸಿದ್ಧತೆಗಳನ್ನೂ ನಡೆಸಿದ್ದಾರೆ. ಇದು ಕಾರ್ತಿಕ್‌ನನ್ನು ಆಘಾತಕ್ಕೀಡುಮಾಡಿದೆ.

"ನನ್ನ ಅನುಮತಿ ಇಲ್ಲದೆಯೇ ಹೇಗೆ ನೀವು ಸಿನಿಮಾ ಮಾಡ್ತೀರಿ?" ಎಂದು ಕಾರ್ತಿಕ್ ಪ್ರಶ್ನಿಸಿದರೆ "ಈ ತಿಂಗಳ 14ನೇ ತಾರೀಖಿನ ಒಳಗೆ ಬಂದು ನೀನು ಕೇಳಿದಷ್ಟು ಹಣ ಕೊಟ್ಟು ಈ ಚಿತ್ರದ ಹಕ್ಕನ್ನು ಪಡೆದುಕೊಳ್ಳುತ್ತೀವಿ. ನಿನಗೆ ಒಂದು ಪಾರ್ಟನ್ನೂ ನೀಡುತ್ತೇವೆ" ಎಂದು ಮೆಹೂ ಹೇಳುತ್ತಿದ್ದಾರೆ.

ಆದರೆ ಕಾರ್ತಿಕ್ ಮಾತ್ರ "ಇದೆಲ್ಲ ಸಾಧ್ಯವೇ ಇಲ್ಲ. ನಾನೇ ನಾಯಕನಾಗಿ ನಟಿಸಿದರೆ ಮಾತ್ರ ಅದರ ಹಕ್ಕು ಕೊಡಲು ಸಾಧ್ಯ. ಬೇರೆಯವರಿಗೆ ಪರಭಾರೆ ಮಾಡುವ ಮಾತೇ ಇಲ್ಲ" ಎಂದು ಹಠ ಹಿಡಿದು ಈಗ ಛೇಂಬರ್‌ಗೆ ದೂರು ಸಲ್ಲಿಸಿದ್ದಾನೆ.



ಇದೆಲ್ಲಾ ತಕರಾರುಗಳನ್ನು ನೋಡಿದರೆ, ಈ ಚಿತ್ರ ನಿಜಕ್ಕೂ ಸೆಟ್ಟೇರುತ್ತಾ? ಎಂಬ ಅನುಮಾನ ಉದ್ಭವಿಸುತ್ತದೆ.

ಇದೆಲ್ಲದರ ಪರಿಣಾಮದಿಂದ ರಮ್ಯಾ ಜೊತೆ ನಟಿಸುವ ಯೋಗೀಶನ ಕನಸು ಸದ್ಯಕ್ಕೆ ಕನಸಾಗಿಯೇ ಉಳಿಯುವಂತೆ ಕಾಣಿಸುತ್ತಿದೆ. ಹೀಗಾಗಿ ಲೂಸ್ ಮಾದ ಗೊಳೋ ಎಂದು ಸಿಂಬಳ ಸುರಿಸಿಕೊಂಡು ಕಣ್ಣೀರಿಡಲು ಶುರು ಮಾಡಿದ್ದಾನಂತೆ!



ಸಿಕ್ಸರ್ ಶಶಾಂಕ್‌ರ ಫಿಲ್ಮ್‌ಸ್ಟೋರಿ...

ಶಶಾಂಕ್ ನಿರ್ದೇಶನದ 'ಕೃಷ್ಣನ್ ಲವ್ ಸ್ಟೋರಿ' ಇನ್ನೊಂದು ವಾರದಲ್ಲಿ ತೆರೆಗೆ ಬರುತ್ತಿದೆ.

ಶಶಾಂಕ್ ಈವರೆಗೆ ನಿರ್ದೇಶಿಸಿರುವುದು ಮೂರೇ ಚಿತ್ರಗಳನ್ನು. ಅದರಲ್ಲಿ ತೆರೆಗೆ ಬಂದಿರುವುದು ಎರಡು ಮಾತ್ರ. ಹಾಗಿದ್ದರೂ ಇವರಿಗೆ 'ಸದಭಿರುಚಿಯ ನಿರ್ದೇಶಕ' ಎಂಬ ಸರ್ಟಿಫಿಕೇಟು ಈಗಾಗಲೇ ಪ್ರಾಪ್ತಿಯಾಗಿದೆ.

ಶಶಾಂಕ್ ಅವರ ತಂದೆ-ತಾಯಿಗೆ ಸಿಕ್ಕಾಪಟ್ಟೆ ಸಿನಿಮಾ ನೋಡುವ ಹುಚ್ಚಿತ್ತಂತೆ. ಎಳೇ ಮಗುವಾಗಿದ್ದಾಗಿನಿಂದಲೂ ಶಶಾಂಕ್‌ರನ್ನು ಕಂಕುಳಲ್ಲಿ ಕೂರಿಸಿಕೊಂಡು ಗಾಂಧಿ ಕ್ಲಾಸ್ ಸಿನಿಮಾ ನೋಡುತ್ತಿದ್ದರಂತೆ. ಹೀಗಾಗಿ ಸಿನಿಮಾ ಅನ್ನೋದು ತೀರಾ ಚಿಕ್ಕ ವಯಸ್ಸಿಗೇ ಶಶಾಂಕ್ ಮಿದುಳಿನಲ್ಲಿ ಬೇರೂರಿಬಿಟ್ಟಿತಂತೆ.


ಚಿತ್ರದುರ್ಗದ ತಾಳ್ಯ ಎಂಬ ಸಣ್ಣ ಹಳ್ಳಿಯಲ್ಲಿ ಹುಟ್ಟಿ ಬೆಳೆದ ಶಶಾಂಕ್ ಸಿವಿಲ್ ಇಂಜನಿಯರಿಂಗ್‌ನಲ್ಲಿ ಡಿಪ್ಲೊಮಾ ಪಡೆದು ಗಾಂಧಿನಗರಕ್ಕೆ ಕಾಲಿಟ್ಟವರು.

ಮೊದಲಿನಿಂದಲೂ ತಾನೊಬ್ಬ ನಿರ್ದೇಶಕನಾಗಬೇಕು ಎಂಬ ಹಪಾಹಪಿಯಿಂದ ತೊಳಲಾಡುತ್ತಿದ್ದ ಶಶಾಂಕ್ ಒಮ್ಮೆ 'ಕೆಲಸ ಸಿಕ್ಕಿದೆ' ಎಂದು ಸುಳ್ಳು ಹೇಳಿ ಬೆಂಗಳೂರು ಕಡೆ ಪಾದ ಬೆಳೆಸಿದರಂತೆ. ಆದರೆ ಯಾವ ಕೆಲಸ ಕಾರ್ಯವೂ ಇಲ್ಲದೆ ಒಂದು ವರ್ಷ ತಿರುಪೆ ಎತ್ತಿದ ನಂತರ 'ಇದು ಸಾಧ್ಯವಿಲ್ಲ' ಎಂದು ತೀರ್ಮಾನಿಸಿ ಸಣ್ಣ ಕಂಪೆನಿಯಲ್ಲಿ ಉದ್ಯೋಗಕ್ಕೆ ಸೇರಿ ಒಂದು ವರ್ಷ ಕೆಲಸ ಮಾಡಿದರಂತೆ.

ಮತ್ತೆ ಮನಸ್ಸು ಸಿನಿಮಾ ಕಡೆ ವಾಲಿದ್ದರಿಂದ, ಗಾಂಧಿನಗರದ ಗಲ್ಲಿ ಗಲ್ಲಿಯಲ್ಲೂ ಅಲೆದಾಡಿ, ಕಡೆಗೆ ಎಸ್.ಮಹೇಂದರ್ ಬಳಿ ಸಹಾಯಕನಾಗಿ ಕೆಲಸ ಗಿಟ್ಟಿಸಿಕೊಂಡರು. 'ತಾಯಿ ಇಲ್ಲದ ತವರು' ಸೇರಿದಂತೆ ಒಂದಷ್ಟು ಸಿನಿಮಾಗಳಿಗೆ ಮಹೇಂದರ್ ಬಳಿ ದುಡಿದ ಶಶಾಂಕ್ ನಂತರ ಹಂಸಲೇಖಾ ಜೊತೆ ಐದು ವರ್ಷ ಕಾಲ ಕಳೆದರು. ಹಂಸಲೇಖಾ ನಿರ್ಮಾಣದಲ್ಲಿ ಶಶಾಂಕ್ ನಿರ್ದೇಶಕನಾಗುವ ಹಲವಾರು ಪ್ರಾಜೆಕ್ಟ್‌ಗಳ ಪ್ಲಾನ್ ನಡೆದಿತ್ತಾದರೂ ಯಾವುದೂ ಬರಕತ್ತಾಗಲಿಲ್ಲ.

ಈ ನಡುವೆ ತೆಲುಗಿನ ರಾಮೋಜಿರಾವ್‌ಗಾಗಿ ಸಿನಿಮಾ ಮಾಡುವ ಮಾತುಕತೆಯೂ ಮುಗಿದಿತ್ತು. ಹಾಗೆ ಆರಂಭವಾಗಬೇಕಿದ್ದ ಸಿನಿಮಾವೇ 'ಮೊಗ್ಗಿನ ಮನಸು'. ಇನ್ನೇನು ಸಿನಿಮಾ ಆರಂಭವಾಗೇ ಹೋಯ್ತು ಎನ್ನುವ ಹೊತ್ತಿಗೆ ರಾಮೋಜಿರಾವ್ 'ಮನಸು' ಬದಲಿಸಿ 'ಈ ಸಬ್ಜೆಕ್ಟ್ ಸರಿಯಿಲ್ಲ' ಎಂದುಬಿಟ್ಟರು. ಹೀಗಾಗಿ ಈ ಸಿನಿಮಾ ಆರಂಭಕ್ಕೆ ಮುನ್ನವೇ ಕಾಲೆತ್ತುಕೊಂಡಿತ್ತು.

ಈ ನಡುವೆ ಮದುವೆ, ಮಕ್ಕಳು ಎಂದು ಬಿಜಿಯಾಗಿದ್ದ ಶಶಾಂಕ್‌ಗೆ ಮತ್ತೆ ನಿರ್ದೇಶನದ ಜ್ವರ ಶುರುವಾಯಿತು. ಶಶಾಂಕ್‌ರ ಬಾಧೆಯನ್ನು ನೋಡಲಾರದ ರಾಮೋಜಿ ರಾವ್ 'ಸಿಕ್ಸರ್' ಚಿತ್ರವನ್ನು ನಿರ್ದೇಶಿಸುವ ಅವಕಾಶ ಕೊಟ್ಟು ಪಾವನರಾದರು. 'ಸಿಕ್ಸರ್' ಒಂದು ಮಟ್ಟದ ಯಶಸ್ಸನ್ನೂ ಕಂಡು 'ಪ್ರಜ್ವಲ'ಗೊಂಡಿತು. ಅದೇ ಹೊತ್ತಿಗೆ 'ಮುಂಗಾರು ಮಳೆ'ಯ ಕೃಷ್ಣಪ್ಪ ರಾಮೋಜಿ ರಾವ್ ನಿರಾಕರಿಸಿದ್ದ 'ಮೊಗ್ಗಿನ ಮನಸು' ಚಿತ್ರದ ಕಥೆಯನ್ನು ಇಷ್ಟಪಟ್ಟು ಸಿನಿಮಾ ಮಾಡಲು ಒಪ್ಪಿದರು.



ನೂರೆಂಟು ಅಡೆತಡೆ, ಸೆನ್ಸಾರು ಸಮಸ್ಯೆಯ ನಡುವೆಯೂ 'ಮೊಗ್ಗು' ಅರಳಿತು-ಶಶಾಂಕ್‌ಗೆ ಸಾಕಷ್ಟು ಹೆಸರೂ, ಪ್ರಶಸ್ತಿಗಳೂ ಬಂದವು.

ಆದರೂ ಆತುರಕ್ಕೆ ಬೀಳದ ಶಶಾಂಕ್ ಮತ್ತೆ ಒಂದಿಷ್ಟು ಕಾಲಾವಕಾಶ ತೆಗೆದುಕೊಂಡು 'ಕೃಷ್ಣನ ಲವ್ ಸ್ಟೋರಿ'ಯನ್ನು ರಚಿಸಿ, ನಿರ್ದೇಶಿಸಿದ್ದಾರೆ. ಹಾಡು, ಪ್ರೋಮೋಗಳನ್ನು ನೋಡಿದವರೆಲ್ಲರ ಮನಸ್ಸಿನಲ್ಲಿ ಒಂಥರಾ ಪಾಸಿಟಿವ್ ವೈಬ್ರೇಷನ್ ಹುಟ್ಟಿದೆ.

ಈ ಚಿತ್ರದ ಪ್ರೋಮೋಗಳಲ್ಲಿ ಶಶಾಂಕ್ "ಒಂದು ಉತ್ತಮ ಚಿತ್ರ ತಯಾರಾಗೋದು ಒಬ್ಬ ಉತ್ತಮ ನಿರ್ದೇಶಕನಿಂದ ಮಾತ್ರ ಸಾಧ್ಯ.." ಎಂಬ ಸ್ಲೋಗನ್ನನ್ನು ಹಾಕಿರುವುದು ಕೆಲವರ ಕೆಂಗಣ್ಣಿಗೆ ಕಾರಣವಾಗಿದೆ. ಈ ವಿಚಾರವನ್ನು ಪ್ರಶ್ನಿಸಿದರೆ, "ಒಬ್ಬ ನಿರ್ದೇಶಕನಿಲ್ಲದೆ ಒಳ್ಳೆ ಚಿತ್ರ ಯಾವುದು ಬಂದಿದೆ ಹೇಳಿ? ಬರೀ ಒಬ್ಬ ಹೀರೋನಿಂದ ಯಾವುದಾದರೂ ಸಿನಿಮಾ ಓಡಿದೆಯಾ? ಯಾರು ಅಪಾರ್ಥ ಮಾಡಿಕೊಂಡರೂ ಸರಿ, ನನಗೆ ಅನ್ನಿಸಿದ್ದನ್ನು ಹಾಕಿದ್ದೀನಿ" ಎನ್ನುತ್ತಾರೆ.

"ನನ್ನಿಂದ ಎಷ್ಟು ದಿನ ಒಳ್ಳೆ ಸಿನಿಮಾ ಮಾಡಲು ಸಾಧ್ಯವೋ ಅಲ್ಲೀತನಕ ಈ ಚಿತ್ರರಂಗದಲ್ಲಿ ಇರ್ತೀನಿ. ಯಾರೋ ನಿರ್ಮಾಪಕರನ್ನು ಹಾಳು ಮಾಡಿ ನಾನು ಉದ್ಧಾರ ಆಗುವುದಾಗಲಿ. ಇನ್ಯಾರೋ ಹೀರೋನ ಒಲಿಸಿಕೊಳ್ಳಲು ಸ್ವಾಭಿಮಾನ ಬಿಟ್ಟು ರೀಲು ಸುತ್ತುವುದು ನನ್ನಿಂದ ಸಾಧ್ಯವಿಲ್ಲ. ಇಲ್ಲೆ ಗೂಟ ಹೊಡೆದುಕೊಂಡು ಇರುವ ಉದ್ದೇಶವೂ ನನಗಿಲ್ಲ. ನನ್ನಿಂದ ಸಿನಿಮಾ ನಿರ್ದೇಶನ ಸಾಧ್ಯವಿಲ್ಲ ಎಂದಾಕ್ಷಣ ಹೊಟ್ಟೆಪಾಡಿಗಾಗಿ ಬೇರೆ ಉದ್ಯೋಗ ನೋಡ್ಕೋತೀನಿ. ಜೀವನ ನಡೆಸೋಕೆ 15-20 ಸಾವಿರ ದುಡಿಯೋ ನಂಬಿಕೆಯಂತೂ ಇದ್ದೇ ಇದೆ... ನಾನು ಹೀಗೆ ಮಾತಾಡೋದ್ರಿಂದ ಜನ ನನಗೆ ತುಂಬಾ ಗಾಂಚಾಲಿ ಅಂದರೂ ಪರವಾಗಿಲ್ಲ, ನಾನು ಇರೋದೇ ಹೀಗೆ..."

ಇದು ಶಶಾಂಕ್‌ರ ನೇರಾನೇರ ಮಾತುಗಳು.

ಚಿತ್ರರಂಗದ ಗಮನ ಸೆಳೆದಿರುವ ಕೆಲವೇ ಯುವ ನಿರ್ದೇಶಕರಲ್ಲಿ ಶಶಾಂಕ್ ಕೂಡಾ ಒಬ್ಬರು. ನಿಜಕ್ಕೂ ಅವರ ತಲೆಯಲ್ಲಿ ಏನಾದರೂ ತಿರುಳಿದೆಯಾ? ಎಂಬುದು ತಿಳಿಯಬೇಕಾದರೆ 'ಕೃಷ್ಣನ್ ಲವ್ ಸ್ಟೋರಿ'ಯ ಬಂಡವಾಳ ಹೊರಬರಬೇಕಿದೆ.

ಅದಕ್ಕೆ ಉಳಿದಿರುವುದು ಇನ್ನು ಒಂದೇ ವಾರ ಮಾತ್ರ...

• ಅರುಣ್‌ಜೆ.
arunodayagc@gmail.com




ಬಳಗದಲ್ಲಿ ಮೊಬೈಲ್ ಮಾಯೆ...

ಗೀತರಚನೆಕಾರ ವಿ. ನಾಗೇಂದ್ರ ಪ್ರಸಾದ್ ಮೊನ್ನೆ ಮೊನ್ನೆಯಷ್ಟೇ ತಮ್ಮ ಹೊಸ ಸಿನಿಮಾವನ್ನು ಆರಂಭಿಸಿದ್ದಾರೆ. ಗಣೇಶ ಹಬ್ಬದ ಸಂದರ್ಭದಲ್ಲಿ ನಡೆಯುವ ಘಟನೆಗಳು, ಚಂದಾ ವಸೂಲಿ ನೆಪದಲ್ಲಿ ಹುಡುಗಿಯರನ್ನು ಪಟಾಯಿಸುವ ಪಡ್ಡೆಗಳು, ಈ ಮಧ್ಯೆ ಅವರ ನಡುವೆ ನಡೆಯುವ ಮಾರಾಮಾರಿ... ಇವುಗಳನ್ನೆ ಕಥಾವಸ್ತುವನ್ನಾಗಿಸಿಕೊಂಡು 'ವಿನಾಯಕ ಗೆಳೆಯರ ಬಳಗ'ವನ್ನು ನಾಗೇಂದ್ರ ಪ್ರಸಾದ್ ಕಟ್ಟುತ್ತಿದ್ದಾರೆ. 1985ರಲ್ಲಿ ನಡೆದ ಘಟನೆಗಳ ಸುತ್ತಲೇ ಈ ಸಿನಿಮಾ ನಡೆಯುವುದರಿಂದ ಕಲಾನಿರ್ದೇಶಕ ಹೊಸ್ಮನೆ ಮೂರ್ತಿ ಆವತ್ತಿನ ಕಾಲಘಟ್ಟಕ್ಕೆ ತಕ್ಕ ಸೆಟ್‌ಗಳನ್ನು ನೈಜವಾಗಿ ನಿರ್ಮಿಸಿದ್ದಾರೆ. ಮಳವಳ್ಳಿ ಸಾಯಿಕೃಷ್ಣ ಇವತ್ತಿನ 'ಆ.ಸ್. ಆ.ಸ್' ಭಾಷೆಯನ್ನು ಬಿಟ್ಟು 25 ವರ್ಷಗಳ ಹಿಂದಿನ ಸಂಭಾಷಣೆಯನ್ನೇ ಸಂಶೋಧಿಸಿ ಹೊಸದಾಗಿ ಪೋಣಿಸಿದ್ದಾರೆ. ಚಿತ್ರಕಲಾವಿದರಾಗಿ ಸಾಕಷ್ಟು ಹೆಸರು ಮಾಡಿರುವ ಗುರುನಾಥ್ ಬೋರಗಿ ಈ ಚಿತ್ರದ ನಿರ್ದೇಶನದಲ್ಲಿ ನಾಗೇಂದ್ರ ಪ್ರಸಾದ್‌ಗೆ ಸಾಥ್ ಕೊಡುತ್ತಿದ್ದಾರೆ.

ಇವಿಷ್ಟೂ ಈ ಚಿತ್ರದ ವಿಶೇಷ.

ಆದರೆ, ಈ 'ಬಳಗ'ದಲ್ಲಿ ಇತ್ತೀಚೆಗೆ ಕಳ್ಳತನ ಶುರುವಾಗಿರೋದು ಅಲ್ಲಿರುವ ಸದಸ್ಯರಲ್ಲಿ ದಿಗಿಲು ಹುಟ್ಟಿಸಿದೆ. ಮೊನ್ನೆಯಂತೂ ಈ ಚಿತ್ರದ ಮುಖ್ಯ ನಾಯಕಿ ಮೇಘನಾ ಗಾಂವ್‌ಕರ್‌ಳ ದುಬಾರಿ ಬೆಲೆಯ ಬ್ಲಾಕ್‌ಬೆರ್ರಿ ಮೊಬೈಲನ್ನು ಯಾರೋ ಎಗರಿಸಿಬಿಟ್ಟಿದ್ದಾರೆ. ವಿಜಯ ರಾಘವೇಂದ್ರ, ನವೀನ್ ಕೃಷ್ಣ, ಶ್ರೀಗೌರಿ ಮುಂತಾದವರು ಪಾಲ್ಗೊಂಡಿದ್ದ ಚಿತ್ರೀಕರಣದಲ್ಲಿ ಇದ್ದಕ್ಕಿದ್ದಂತೆ ಮೊಬೈಲು ನಾಪತ್ತೆಯಾಗಿದೆ. ಇದಾದಮೇಲೆ ಸಣ್ಣಪುಟ್ಟ ಹೇರ್‌ಪಿನ್ನು, ಕರ್ಚೀಫು ಮಾಯವಾಗುವುದೂ ಈ ಚಿತ್ರತಂಡದಲ್ಲಿ ದೊಡ್ಡ ಸುದ್ದಿ ಸೃಷ್ಟಿಸುತ್ತಿದೆಯಂತೆ.

ಪಾಪ! ಆಕ್ಷನ್-ಕಟ್ ಹೇಳಬೇಕಿದ್ದ ನಾಗು ಈಗ ಕಳ್ಳನ್ನು ಯಾರು ಎಂದು ತಲೆ ಕೆರೆದುಕೊಂಡು ಕೂತಿದ್ದಾರಂತೆ!!




ಯಡ್ಡಿಯ ಸಿನಿಮಾ ಪರಿಷತ್ತು!

ನಟ ತಾರಾಗೆ ಭ್ರಮನಿರಸನವಾಗಿದೆ. ಮುಖ್ಯಮಂತ್ರಿ ಚಂದ್ರು ದಿಗ್ಭ್ರಾಂತರಾಗಿದ್ದಾರೆ. ಜಯಮಾಲಾ ಸಣ್ಣಗೆ ನಿಟ್ಟುಸಿರಿಡುತ್ತಿದ್ದಾರೆ. ಇವರೆಲ್ಲಾ ತಮ್ಮ ಸಿನಿಮಾ ಜೀವನಕ್ಕೆ ಸಂಬಂಧಿಸಿದಂತೆ ಇಷ್ಟು ಕೊರಗುತ್ತಿದ್ದಾರೆ ಎಂದು ನೀವು ಭಾವಿಸಿದರೆ ನಿಮ್ಮ ಊಹೆ ತಪ್ಪು.



ಸಿನಿಮಾಗಳಲ್ಲಿ ನಟಿಸಿ ಪ್ರೇಕ್ಷಕರ ಮೆಚ್ಚುಗೆ, ಪ್ರೀತಿ ಮತ್ತು ಅಭಿಮಾನವನ್ನು ಗಳಿಸಿದ ಇವರೆಲ್ಲ ಜನರ ಋಣ ತೀರಿಸಲೆಂದೇ ವಿಧಾನ ಪರಿಷತ್ ಸದ್ಯಸರಾಗಲು ಭಗೀರಥ ಪ್ರಯತ್ನ ಮಾಡಿದ್ದರು. ಆದರೆ ಮುಖ್ಯಮಂತ್ರಿ ಯಡಿಯೂರಪ್ಪ ಸಿನಿಮಾ ತಾರೆಯರಿಗೆ ದಿಢೀರನೆ ಕೈಕೊಟ್ಟು ತನ್ನ ರಾಜಕೀಯ ಹಿಂಬಾಲಕರಿಗೆ ಸ್ಥಾನ ಕೊಟ್ಟಿದ್ದರಿಂದ ಇವರೆಲ್ಲರಿಗೆ ನಿರಾಶೆಯಾಗಿದೆ.

ಸಾಹಿತ್ಯ, ಸಿನಿಮಾ, ಸಮಾಜಸೇವೆ ಮೊದಲಾದ ಕ್ಷೇತ್ರಗಳಲ್ಲಿ ಅಪಾರ ಜನ ಸೇವೆ ಮಾಡಿದವರನ್ನು ಗುರುತಿಸಿ ಅವರನ್ನು ವಿಧಾನ ಪರಿಷತ್‌ಗೆ ಆಯ್ಕೆ ಮಾಡುವುದು ಒಂದು ಸಂಪ್ರದಾಯ. ಆದರೆ ಇಂತಹವರನ್ನು ಆಯ್ಕೆ ಮಾಡುವಾಗ ತಮ್ಮ ಪಕ್ಷದ ಬಗ್ಗೆ ಒಲವು ಮತ್ತು ಅಭಿಮಾನವಿರುವ ಅಥವಾ ಪಕ್ಷಕ್ಕೆ ಪ್ರಚಾರ ಕಾರ್ಯದಲ್ಲಿ ತೊಡಗಿಸಿಕೊಂಡಿರುವ ತಾರೆಯರಿಗೆ ಪ್ರಾಮುಖ್ಯತೆ ಕೊಡುವುದು ರಾಜಕಾರಣಿಗಳ ಹವ್ಯಾಸ. ಹೀಗಾಗಿ ಬಿಜೆಪಿಯ ಸಕ್ರಿಯ ಕಾರ್ಯಕರ್ತೆಯಾಗಿರುವ ತಾರಾಳಿಗೆ ಈ ಬಾರಿ ವಿಧಾನ ಪರಿಷತ್ ಸದಸ್ಯರಾಗುವ ಅವಕಾಶವಿದೆಯೆಂದೇ ನಂಬಲಾಗಿತ್ತು. ಒಂದು ವೇಳೆ ತಾರಾಗೆ ಅವಕಾಶ ತಪ್ಪಿದರೆ ಬಹುಕಾಲದಿಂದ ಆರೆಸ್ಸೆಸ್ಸಿನ ಚೆಡ್ಡಿ ತೊಟ್ಟಿರುವ ಮುಖ್ಯಮಂತ್ರಿ ಚಂದ್ರು ಮರುಆಯ್ಕೆ ಯಾಗುತ್ತಾರೆಂದು ಭಾವಿಸಲಾಗಿತ್ತು. ಅಕಸ್ಮಾತ್ ಇವರಿಬ್ಬರ ನಡುವಿನ ಹೊಯ್ದಾಟದಲ್ಲಿ ಬಿಜೆಪಿ ಪಕ್ಷದ ಸಕ್ರಿಯ ಕಾರ್ಯಕರ್ತೆಯಲ್ಲದಿದ್ದರೂ ಈಗತಾನೆ ಸಿನಿಮಾ ಚೇಂಬರ್ ಅಧ್ಯಕ್ಷಸ್ಥಾನದಿಂದ ಇಳಿದಿರುವ ಜಯಮಾಲ ಅವರನ್ನು ಆಯ್ಕೆ ಮಾಡಿ ಮುಖ್ಯಮಂತ್ರಿ ಎಲ್ಲರಲ್ಲಿ ಅಚ್ಚರಿ ಮೂಡಿಸಬಹುದು ಎಂಬ ಗಾಳಿ ಸುದ್ದಿಯೂ ತೇಲಿಬಂದಿತ್ತು. ಆದರೆ ಈ ಮೂರೂ ಸುದ್ದಿಗಳೂ ಸುದ್ದಿಯಾಗಿಯೇ ಉಳಿದವೆ ವಿನಃ ನಿಜವಾಗಲೇ ಇಲ್ಲ. ಮುಖ್ಯಮಂತ್ರಿ ಯಡ್ಡಿ ಸಿನಿಮಾದವರನ್ನು ಸಂಪೂರ್ಣವಾಗಿ ಕೈಬಿಟ್ಟು ತನ್ನ ಹಿಂಬಾಲಕರನ್ನು ಆಯ್ಕೆ ಮಾಡಿ ಚಿತ್ರರಂಗದವರು ಬೆಚ್ಚಿಬೀಳುವಂತೆ ಮಾಡಿದ್ದಾರೆ.



ಈ ಹಿಂದೆ ಪಕ್ಷಾತೀತರಾಗಿ ಅನೇಕ ಕಲಾವಿದರು ವಿಧಾನ ಪರಿಷತ್ತಿನ ಸದಸ್ಯರಾಗುವ ಮೂಲಕ ಗೌರವಕ್ಕೆ ಪಾತ್ರರಾಗಿದ್ದರು. ಉದಾಹರಣೆಗೆ ಯಕ್ಷಗಾನದ ಸೂಪರ್‌ಸ್ಟಾರ್ ಶಂಭು ಹೆಗಡೆ, ಹಿರಿಯ ಕಲಾವಿದೆ ಜಯಮ್ಮ, ಗಾನಕೋಗಿಲೆ ಗಂಗೂಬಾಯಿ ಹಾನಗಲ್.... ಮೊದಲಾದವರು ನೆನಪಿಗೆ ಬರುತ್ತಾರೆ. ಹಾಗೆಯೇ ರಾಷ್ಟ್ರಮಟ್ಟದಲ್ಲೂ ಹಿರಿಯ ಗಾಯಕಿ ಲತಾ ಮಂಗೇಶ್ಕರ್, ಬರಹಗಾರ ಆರ್.ಕೆ.ನಾರಾಯಣ್, ಖುಷವಂತ್ ಸಿಂಗ್ ಕೂಡ ಇಂತಹ ಅಪೂರ್ವ ಗೌರವಕ್ಕೆ ಪಾತ್ರರಾಗಿ ರಾಜ್ಯಸಭೆಯ ಸದಸ್ಯರಾಗಿದ್ದರು. ಅದೇ ಹಾದಿಯಲ್ಲಿ ಮೊನ್ನೆ ಕರ್ನಾಟಕದ ರಂಗಭೂಮಿ ಕಲಾವಿದೆ ಬಿ.ಜಯಶ್ರೀಯವರು ಕೂಡಾ ರಾಜ್ಯಸಭೆಗೆ ನಾಮಕರಣಗೊಂಡರು.



ಈ ಹಿಂದೆ ರಾಮಕೃಷ್ಣ ಹೆಗಡೆ ಅಧಿಕಾರದಲ್ಲಿದ್ದಾಗ ತಮ್ಮ ಬಲಗೈಬಂಟ ಮತ್ತು ಜನತಾದಳದ ಪರವಾಗಿ ಪ್ರಚಾರ ಮಾಡಿದ ಅನಂತ್‌ನಾಗ್‌ರನ್ನು ಪರಿಷತ್‌ಗೆ ಆಯ್ಕೆ ಮಾಡಿದ್ದರು. ಕಾಂಗ್ರೆಸ್ ಸರ್ಕಾರ ಅಧಿಕಾರದಲ್ಲಿದ್ದಾಗ ಉಮಾಶ್ರೀ ವಿಧಾನಪರಿಷತ್‌ಗೆ ಎಂಟ್ರಿಯಾದರು. ಇವರಿಬ್ಬರೂ ಪಕ್ಕಾ ರಾಜಕಾರಣಿಗಳಾಗಿ ಮಾರ್ಪಾಡಾಗಿದ್ದನ್ನು ನಾವಿಲ್ಲಿ ಸ್ಮರಿಸಬೇಕು.

ಒಂದು ರೀತಿಯಲ್ಲಿ ತಮ್ಮ ಪಕ್ಷದ ಸಕ್ರಿಯ ಕಾರ್ಯಕರ್ತರಾದ ತಾರಾ, ಚಂದ್ರು, ಮದನ್ ಪಟೇಲ್ ಅಥವಾ ವನಿತಾ ವಾಸು... ಮೊದಲಾದ ತಾರಾಮಣಿಗಳನ್ನು ಪರಿಷತ್‌ಗೆ ಆಯ್ಕೆ ಮಾಡದೇ ಯಡಿಯೂರಪ್ಪನವರು ತನ್ನ ಚಾಕಚಕ್ಯತೆಯನ್ನು ಮೆರೆದಿದ್ದಾರೆ! ಯಾಕೆಂದರೆ ಇವರಲ್ಲಿ ಯಾರನ್ನೇ ಆಯ್ಕೆ ಮಾಡಿದ್ದರೂ ಉದ್ಯಮದ ಇನ್ನರ್ಧ ಜನ ಯಡ್ಡಿ ಮೇಲೆ ಮುನಿಸಿಕೊಳ್ಳುತ್ತಿದ್ದರು. ಅದರಲ್ಲೂ ಮುಖ್ಯವಾಗಿ ರಾಜ್‌ಕುಮಾರ್ ಸಂಸ್ಥೆಯ ಅವಕೃಪೆಗೆ ಒಳಗಾಗಬಹುದೆಂಬ ಆತಂಕ ಸರ್ಕಾರವನ್ನು ಕಾಡಿತಂತೆ! ಆದರೂ ಈಗಾಗಲೇ ನವರಸ ನಾಯಕ ಜಗ್ಗೇಶ್, ಪ್ರಣಯ ರಾಜ ಶ್ರೀನಾಥ್ ವಿಧಾನಪರಿಷತ್‌ನಲ್ಲಿ ಆಸೀನರಾಗಿರುವುದು ಯಡ್ಡಿ ಪಾಲಿಗೆ ನೆಮ್ಮದಿಯ ವಿಷಯ. ಇದರ ಜೊತೆಗೆ ನಿರ್ಮಾಪಕರಾದ ವಿಜಯ್‌ಕುಮಾರ್, ಮದನ್ ಪಟೇಲ್, ಸುಂದರ ರಾಜ್, ರವಿಕಿರಣ್, ವನಿತಾ ವಾಸು, ಜೈಜಗದೀಶ್... ಇವರೆಲ್ಲಾ ಪಕ್ಷದ ಪರವಾಗಿ ಗುರುತಿಸಿಕೊಂಡಿರುವುದರಿಂದ ಬಣ್ಣದ ಲೋಕದ ಕಲಾವಿದರನ್ನು ಮೇಲ್ಮನೆಗೆ ಆಯ್ಕೆ ಮಾಡದಿದ್ದರೂ ಇವರ್‍ಯಾರೂ ತನ್ನ ಸರ್ಕಾರದ ವಿರುದ್ಧ ತಿರುಗಿ ಬೀಳುವುದಿಲ್ಲ ಎಂಬ ದೃಢವಾದ ನಂಬಿಕೆ ಯಡ್ಡಿಗಿದೆ.

ಅದೇನೇ ಇರಲಿ, ಕರ್ನಾಟಕದಲ್ಲಿ ಈಗಲೂ ಯಾವುದೇ ಪಕ್ಷಕ್ಕೆ ತಮ್ಮನ್ನು ಮಾರಿಕೊಳ್ಳದ ಅನೇಕ ಸ್ವಾಭಿಮಾನಿ ಕಲಾವಿದರುಗಳು ಇದ್ದಾರೆ. ಉದಾಹರಣೆಗೆ ಗಿರೀಶ್ ಕಾರ್ನಾಡ್, ಅರುಂಧತಿ ನಾಗ್‌ರಂತಹ ರಂಗಕರ್ಮಿ ಮತ್ತು ಕಲಾವಿದರನ್ನು ಬಿಜೆಪಿ ಸರ್ಕಾರ ಆಯ್ಕೆ ಮಾಡಬಹುದಿತ್ತು. ಆದರೆ ಬಿಜೆಪಿಯ ಇಂತಹ ಆಹ್ವಾನವನ್ನು ಈ ಕಲಾವಿದರು ಖಂಡಿತವಾಗಿಯೂ ತಿರಸ್ಕರಿಸುತ್ತಿದ್ದರು ಎಂಬುದು ಬೇರೆ ವಿಷಯ.

ಅದೇ ಸಿನಿಮಾ ಲೋಕದ ವೈರುಧ್ಯ. ಒಂದು ಕಡೆ ವಿಧಾನ ಪರಿಷತ್‌ನ ಸ್ಥಾನಕ್ಕಾಗಿ ರಾಜಕಾರಣಿಗಳ ಮನೆ ಬಾಗಿಲಿಗೆ ನಿತ್ಯವೂ ಮೆರವಣಿಗೆ ಮಾಡುವ ತಾರೆಗಳಿದ್ದಾರೆ. ಮತ್ತೊಂದೆಡೆ ಸರ್ಕಾರ ನೀಡುವ ಈ ಗೌರವವನ್ನು ತಿರಸ್ಕರಿಸುವ ಗಟ್ಟಿ ಮನಸಿನ ಕಲಾವಿದರೂ ನಮ್ಮ ನಡುವೆ ಇದ್ದಾರೆ. ಆದರೆ ಮೇಲ್ಮನೆಯಲ್ಲಿ ಕಲಾವಿದರೇ ಬೇಡ ಎನ್ನುವ ಸಿದ್ಧಾಂತಕ್ಕೆ ಗಂಟುಬಿದ್ದಿರುವ ಯಡ್ಡಿ ತಮ್ಮ ಹಿಂಬಾಲಕರನ್ನೇ ಆಯ್ಕೆ ಮಾಡಿದ್ದಾರೆ. ಹೀಗೆ ಕಲಾವಿದರನ್ನು ನಾಮಕರಣ ಮಾಡದೆ ನಿರ್ಲಕ್ಷಿಸಿದ್ದರ ವಿರುದ್ಧ ಚೇಂಬರ್ ಆಗಲಿ, ಇನ್ನಾವುದೇ ಸಂಘ ಸಂಸ್ಥೆಯಾಗಲಿ ಈತನಕ ಚಕಾರವೆತ್ತಿಲ್ಲ! ಮುಂಬರುವ ದಿನಗಳಲ್ಲೂ ಇವರು ಈ ಬಗ್ಗೆ ಸರ್ಕಾರವನ್ನು ತರಾಟೆಗೆ ತೆಗೆದುಕೊಳ್ಳುವುದಿಲ್ಲವೆಂಬುದು ಕೂಡಾ ನಿಜ. ಹೀಗಾಗಿ ಒಂದು ರೀತಿಯಲ್ಲಿ ಸಿನಿಮಾರಂಗ ಅನಾಥವಾಗಿದೆ.

• ಶೆಣೈ
shenoylankesh@gmail.com

ನಿತ್ಯಾನಂದ ರಮೇಶ್!



ಮೊನ್ನೆಮೊನ್ನೆಯಷ್ಟೇ ಹಾಸ್ಯನಟ ಮಿಮಿಕ್ರಿ ದಯಾನಂದ್ 'ಕಾಮಿಸ್ವಾಮಿ' ಎಂಬ ವಿಡಿಯೋ ಸಿನಿಮಾವನ್ನು ರಿಲೀಸ್ ಮಾಡಿದ್ದರು.

ಈಗ ನಟ ರಮೇಶ್ ಅರವಿಂದ್ ಸಹಾ ಅಂಥದ್ದೇ ಪ್ರಯತ್ನ ಮಾಡುತ್ತಿದ್ದಾರೆ. ಢೋಂಗಿ ಸ್ವಾಮಿ 'ನಿತ್ಯಾನಂದ'ನ ಕಥೆಯನ್ನೇ ಇಟ್ಟುಕೊಂಡು ಹೊಸ ಚಿತ್ರವೊಂದನ್ನು ರಮೇಶ್ ಶುರುಮಾಡುತ್ತಿದ್ದಾರೆ. ಈ ಚಿತ್ರವನ್ನು ಅಂದಾನಿ ಎಂಬುವವರು ನಿರ್ಮಿಸುತ್ತಿದ್ದಾರೆ.

ಇನ್ನು ರಮೇಶ್ ನಟನೆಯ 'ಹೆಂಡತೀರ್ ದರ್ಬಾರ್', 'ಗಂಡಂದಿರೇ ಹುಶಾರ್' ಮುಂತಾದ ಚಿತ್ರಗಳು ಬಿಡುಗಡೆಯಾಗಬೇಕಿದೆ. 'ರಂಗೀಲಾ' ಎನ್ನುವ ಹೊಸ ಚಿತ್ರ ಇನ್ನೇನು ಸೆಟ್ಟೇರುತ್ತಿದೆ. ಕೆ. ಮಂಜು ನಿರ್ಮಿಸಲಿರುವ ಮತ್ತೊಂದು ಚಿತ್ರಕ್ಕೂ ರಮೇಶ್ ಅವರೇ ಹೀರೋ. ಜೊತೆಗೀಗ 'ನಿತ್ಯಾನಂದ'ನ ವೇಶದಲ್ಲೂ ರಮೇಶ್ ನೆಗೆಟೀವ್ ಕ್ಯಾರೆಕ್ಟರ್‌ನಲ್ಲಿ ಕಾಣಿಸಿಕೊಳ್ಳುತ್ತಿದ್ದಾರೆ.

ರಮೇಶ್ ಒಂದರ ಹಿಂದೆ ಒಂದು ತೋಷು ಚಿತ್ರಗಳಲ್ಲಿ ನಟಿಸುತ್ತಿರುತ್ತಾರೆ. ಆದರೆ ಆ ಎಲ್ಲಾ ಚಿತ್ರಗಳನ್ನೂ 'ಇದು ತುಂಬಾ ಡಿಫರೆಂಟು ಸಿನಿಮಾ' ಎಂದು ಹೇಳಿ ಸಾಕಷ್ಟು ಪ್ರಚಾರವನ್ನೂ ಪಡೆಯುತ್ತಾರೆ. ಆದರೆ ಜನ ಮಾತ್ರ ಅವರ ಮಾತನ್ನು ನಂಬುವಷ್ಟು ದೊ(ದ)ಡ್ಡತನ ತೋರುತ್ತಿಲ್ಲ. ಇತ್ತೀಚಿಗೆ ರಮೇಶ್ ಅವರ ಜನಪ್ರಿಯತೆ ಕುಗ್ಗುತ್ತಾ ಹೋಗುತ್ತಿದೆ. ಹಿಂದೆ 'ಶ್ರೀಗಂಧ', 'ಅಮೆರಿಕಾ ಅಮೆರಿಕಾ', 'ಚಂದ್ರಮುಖಿ ಪ್ರಾಣಸಖಿ' ಮುಂತಾದ ಚಿತ್ರಗಳು ಬಂದಾಗ ಜನ ರಮೇಶ್‌ರ ಹೊಸ ಚಿತ್ರಕ್ಕೆ ಕಾತರಿಸುತ್ತಿದ್ದರು. ಆದರೆ ಈಗ ರಮೇಶ್ ನಟನೆಯ ಚಿತ್ರಗಳು ತಿಂಗಳಿಗೆರಡರಂತೆ ಬಿಡುಗಡೆಗೊಳ್ಳುತ್ತಿವೆ. ದುರಂತವೆಂದರೆ, ಯಾವ ರಮೇಶ್ ಚಿತ್ರಗಳಿಗಾಗಿ ಜನ ಮುಗಿಬೀಳುತ್ತಿದ್ದರೋ ಅದೇ ರಮೇಶ್ ಚಿತ್ರವನ್ನು ಜನ ಇಂದು ಮೂಸುತ್ತಲೇ ಇಲ್ಲ.


ಇದಕ್ಕೆ ಕಾರಣ ಸ್ವತಃ ರಮೇಶ್ ಅವರೇ ಹೊರತು ಬೇರೆ ಯಾರೂ ಅಲ್ಲ.

ಕಳೆದ ಎರಡು ತಿಂಗಳಲ್ಲಿ ರಮೇಶ್ ನಟಿಸಿದ 'ಕ್ರೇಜಿ ಕುಟುಂಬ', '3 ಗುಟ್ಟು ಒಂದು ಸುಳ್ಳು', 'ಪ್ರೀತಿಯಿಂದ ರಮೇಶ್', 'ಕೃಷ್ಣ ನೀ ಲೇಟಾಗ್ ಬಾರೋ', 'ನಾನು ನನ್ನ ಕನಸು' ಚಿತ್ರಗಳು ಬಿಡುಗಡೆಗೊಂಡಿವೆ. 'ನಾನು ನನ್ನ ಕನಸು' ಬಿಟ್ಟರೆ ಮಿಕ್ಕೆಲ್ಲಾ ಸಿನಿಮಾಗಳೂ ಸ್ಯಾಟಲೈಟ್ ಹಕ್ಕುಗಳಿಗಾಗೇ ನಿರ್ಮಿಸಿದ ಸಿನಿಮಾಗಳೇ. ಹಿಂದೆ ರಮೇಶ್ ಅಭಿನಯದ ಚಿತ್ರ ಸಿಟಿ ಏರಿಯಾಗಳಲ್ಲಿ ಒಳ್ಳೇ ಪ್ರದರ್ಶನ ಕಾಣುತ್ತದೆ ಎಂಬ ಮಾತು ಚಾಲ್ತಿಯಲ್ಲಿತ್ತು. ಈಗ ಬಿಡುಗಡೆಯಾಗಿರುವ ಅವರ ಚಿತ್ರಗಳು ಆ ಮಾತನ್ನೂ ಹುಸಿಯಾಗಿಸಿವೆ. ರಮೇಶ್ ಬಗ್ಗೆ ಮೆಚ್ಚಬೇಕಾದ ಸಂಗತಿಯೆಂದರೆ, ದರ್ಶನ್, ಸುದೀಪ್‌ರಂತೆ 'ಇಷ್ಟೇ ಸಂಭಾವನೆ ಬೇಕು' ಎಂದು ಯಾವತ್ತೂ ಹಠ ಹಿಡಿದವರಲ್ಲ. ಬಡ ನಿರ್ಮಾಪಕರಿಗೂ ರಮೇಶ್ ನಿಲುಕುತ್ತಾರೆ, ಶೂಟಿಂಗ್ ಸಮಯದಲ್ಲೂ ಯಾವುದೇ ನಖರಾ ಮಾಡುವುದಿಲ್ಲ ಅನ್ನೋದು ಮಾತ್ರ ದೇವರಾಣೆಗೂ ನಿಜ.

ರಮೇಶ್ ಇನ್ನಾದರೂ ಹೊಸತನ್ನು ನೀಡಲು ಪ್ರಯತ್ನಿಸಬೇಕು, ಪಾತ್ರಗಳ ಆಯ್ಕೆಯಲ್ಲಿ ಎಚ್ಚರ ವಹಿಸಬೇಕು. ಇಲ್ಲದಿದ್ದರೆ ಚಿತ್ರರಂಗದಲ್ಲಿನ ಈ ತ್ಯಾಗರಾಜನನ್ನು ಪ್ರೇಕ್ಷಕರು ತ್ಯಾಗ ಮಾಡುವುದು ಗ್ಯಾರೆಂಟಿ. ವಿದ್ಯಾವಂತ-ಪ್ರತಿಭಾವಂತ ಮತ್ತು ಪ್ರಬುದ್ಧ ನಟ ರಮೇಶ್ ಈ ಬಗ್ಗೆ ಮುತುವರ್ಜಿ ವಹಿಸಲೇಬೇಕಿರುವ ಜರೂರು ಹೆಚ್ಚಾಗಿದೆ. •

ಎವರ್‌ಗ್ರೀನ್-ಎವರೆಡಿ...!

ಬಾಲಿವುಡ್ ಬಾದ್‌ಷಾ ಅಮಿತಾಬ್ ಬಚ್ಚನ್ ಇತ್ತೀಚೆಗೆ ತನ್ನ ಬ್ಲಾಗ್‌ಗಳಲ್ಲಿ ವೈಯಕ್ತಿಕ ವಿಷಯಗಳಿಂದ ಹಿಡಿದು ಜಗತ್ತಿನ ಆಗುಹೋಗುಗಳಿಗೆಲ್ಲಾ ಪ್ರತಿಕ್ರಿಯಿಸುತ್ತಾರೆ. ಮೊನ್ನೆ ಭೋಪಾಲ್ ದುರಂತಕ್ಕೆ ಸಂಬಂಧಪಟ್ಟಂತೆ ನ್ಯಾಯಾಲಯದ ತೀರ್ಪು ಪ್ರಕಟವಾದ ತಕ್ಷಣ, ಯಾವುದೇ ಮುಲಾಜಿಲ್ಲದೆ ಆ ತೀರ್ಪಿನ ವಿರುದ್ಧ ಅಮಿತಾಬ್ ತೀವ್ರವಾದ ಅಸಮಾಧಾನವನ್ನು ತಮ್ಮ ಬ್ಲಾಗ್‌ನಲ್ಲಿ ವ್ಯಕ್ತಪಡಿಸಿದರು.



ಆದರೆ ಅಮಿತಾಬ್ ಬಚ್ಚನ್ ಮರೆತದ್ದು ಯಾವ ಅಂಶವನ್ನು ಗೊತ್ತೆ? ತಾನೇ ಕೋಟ್ಯಾಂತರ ರೂಪಾಯಿ ದುಡ್ಡಿಗಾಗಿ ಅದೇ ಭೋಪಾಲ್ ದುರಂತಕ್ಕೆ ಕಾರಣವಾದ ಯೂನಿಯನ್ ಕಾರ್ಬೈಡ್ ಕಂಪನಿಯ ಸಹೋದರ ಸಂಸ್ಥೆ ನಿರ್ಮಿಸುವ 'ಎವರೆಡಿ' ಎಂಬ ಬ್ಯಾಟರಿಗಳಿಗೆ ರೂಪದರ್ಶಿಯಾಗಿದ್ದು.

ಪ್ರಶ್ನೆ ಯಾವುದೆಂದರೆ: 'ಎವರೆಡಿ' ಬ್ಯಾಟರಿಗಳನ್ನು ತಯಾರಿಸುವ ಕಂಪನಿ ಕೊಡುವ ದುಡ್ಡಿಗಾಗಿ ಅದನ್ನು ಬೆಂಬಲಿಸುವ ಅಮಿತಾಬ್‌ಗೆ ಆಗ ಅದೇ ಕಂಪನಿಯು ಸಾವಿರಾರು ಜನರ ಸಾವಿಗೆ ಕಾರಣವಾಗಿತ್ತೆಂಬುದು ಗೊತ್ತಿದ್ದರೂ ಯಾಕೆ ಸುಮ್ಮನಿದ್ದರು?

ಇದೆಂತಹ ಆತ್ಮ ವಂಚನೆ?

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427, Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial Estate, Rajajinagar, Bangalore-44